ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಫೆಬ್ರವರಿ 3 ಸೋಮವಾರ 2025

45

ಸಂಪುಟ: 45 | ಸಂಚಿಕೆ: 286 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಐಸಿಸಿ 19 ವರ್ಷದೊಳಗಿನ ಮಹಿಳಾ ಟಿ20 ವಿಶ್ವಕಪ್

ದಕ್ಷಿಣ ಆಫ್ರಿಕಾ ಮಣಿಸಿದ ಭಾರತ ಚಾಂಪಿಯನ್

ಕನ್ನಡತಿ ನಿಕಿ ಪ್ರಸಾದ್ ನಾಯಕತ್ವದಲ್ಲಿ ಸತತ 2ನೇ ಬಾರಿಗೆ ಟ್ರೋಫಿ ಗೆದ್ದ ಟೀಂ ಇಂಡಿಯಾ



ಕೌಲಾಲಂಪುರ, ಫೆ.2– ಐಸಿಸಿ 19 ವರ್ಷದೊಳಗಿನ ಮಹಿಳಾ ಟಿ20 ವಿಶ್ವಕಪ್ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾವನ್ನು 9 ವಿಕೆಟ್‌ಗಳಿಂದ ಮಣಿಸಿದ ಕನ್ನಡತಿ ನಿಕಿ ಪ್ರಸಾದ್ ನಾಯಕತ್ವದ ಭಾರತ ತಂಡ, ಸತತ ಎರಡನೇ ಬಾರಿಗೆ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಆ ಮೂಲಕ ಅಂಡರ್–19 ಟಿ20 ವಿಶ್ವ ಕಪ್ ಅನ್ನು ತನ್ನಲ್ಲೇ ಉಳಿಸಿಕೊಂಡಿದೆ.

ಭಾನುವಾರ ಇಲ್ಲಿನ ಬೇಯು ಮಾಸ್ ಓವಲ್ ಮೈದಾನದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ನಿಗದಿತ 20 ಓವರ್‌ಗಳಲ್ಲಿ 82 ರನ್ ಗಳಿಸಿ ಸರ್ವಪತನ ಕಂಡಿತು. ದಕ್ಷಿಣ ಆಫ್ರಿಕಾ ನೀಡಿದ 83 ರನ್‌ಗಳ ಅಲ್ಪ ಗುರಿ ಬೆನ್ನಟ್ಟಿದ ಭಾರತ 11.2 ಓವರ್‌ಗಳಲ್ಲಿ ಒಂದು ವಿಕೆಟ್ ನಷ್ಟಕ್ಕೆ 84 ರನ್ ಗಳಿಸಿ ಗುರಿ ತಲುಪಿತು. ಟೂರ್ನಿಯಲ್ಲಿ ದಕ್ಷಿಣ ಆಫ್ರಿಕಾ ಹಾಗೂ ಭಾರತ ಅಜೇಯ ತಂಡಗಳಾಗಿ ಫೈನಲ್ ಪ್ರವೇಶಿಸಿದ್ದವು. ಅಂತಿಮ ಹಣಾಹಣಿಯಲ್ಲಿ ಮೊದಲು ಬ್ಯಾಟ್ ಮಾಡಿದ ದ.ಆಫ್ರಿಕಾ ಆಟಗಾರರು ನಿರೀಕ್ಷೆಗೆ ತಕ್ಕ ಬ್ಯಾಟ್ ಬೀಸುವಲ್ಲಿ ವಿಫಲರಾಗಿ ಭಾರತೀಯರ ಬೌಲಿಂಗ್ ದಾಳಿಗೆ ಪೆವಿಲಿಯನ್ ಪರೇಡ್ ನಡೆಸಿದರು. ದಕ್ಷಿಣ ಆಫ್ರಿಕಾ ಪರ ಮೀಕೆ ವ್ಯಾನ್ ವೂರ್ಸ್ಟ್ 23, ಜೆಮ್ಮಾ ಬೋಥಾ 16, ಫೇ ಕೌಲಿಂಗ್ 15, ಕರಾಬೊ ಮೆಸೊ 10 ರನ್ ಗಳಿಸಿದ್ದು ಬಿಟ್ಟರೇ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪರದಾಡಿದರು. ಅಂತಿಮವಾಗಿ ಡಿಯಾರಾ ರಾಮ್ಲಕಾನ್ 3, ಕೈಲಾ ರೇನೆಕೆ 7 ರನ್ ಗಳಿಸಿದರು. ಭಾರತದ ಪರ ಗೊಂಗಡಿ ತ್ರಿಶಾ 3, ವೈಷ್ಣವಿ ಶರ್ಮಾ, ಆಯುಷಿ ಶುಕ್ಲಾ ಮತ್ತು ಪಾರುಣಿಕ ಸಿಸೋಡಿಯಾ ಅವರು ತಲಾ 2 ವಿಕೆಟ್ ಪಡೆದು ಮಿಂಚಿದರು. ಶಬ್ನಮ್ ಶಕೀಲ್ 1 ವಿಕೆಟ್ ಕಬಳಿಸಿದರು.

ದಕ್ಷಿಣ ಆಫ್ರಿಕಾ ನೀಡಿದ ಸಾಧಾರಣ ಗುರಿ ಬೆನ್ನತ್ತಿದ ಭಾರತ, ತಂಡದ ಮೊತ್ತ 36 ರನ್ ಆಗಿದ್ದ ವೇಳೆ 8 ರನ್ ಗಳಿಸಿದ್ದ ಜಿ.ಕಮಲಿನಿ ಅವರ ವಿಕೆಟ್ ಕಳೆದುಕೊಂಡು ಆರಂಭಿಕ ಆಘಾತ ಎದುರಿಸಿತು. ಬಳಿಕ 2ನೇ ವಿಕೆಟ್‌ಗೆ ಜೊತೆಯಾದ ಗೊಂಗಡಿ ತ್ರಿಶಾ ಮತ್ತು ಸಾನಿಕಾ ಚಲ್ಕೆ 48 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು. ಗೊಂಗಡಿ ತ್ರಿಷಾ 44, ಸಾನಿಕಾ ಚಲ್ಕೆ 26 ರನ್ ಗಳಿಸಿ ಅಜೇಯರಾಗುಳಿದರು. ದಕ್ಷಿಣ ಆಫ್ರಿಕಾ ಪರ ಕೈಲಾ ರೇನೆಕೆ ಒಂದು ವಿಕೆಟ್ ಕಬಳಿಸಿದರು.

ಪಂದ್ಯ ಹಾಗೂ ಸರಣಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಗೊಂಗಡಿ ತ್ರಿಶಾ ಪಂದ್ಯಶ್ರೇಷ್ಠ ಹಾಗೂ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

2023ರ ಅಂಡರ್–19 ಮಹಿಳಾ ಟಿ20 ವಿಶ್ವಕಪ್ ಚೊಚ್ಚಲ ಆವೃತ್ತಿಯಲ್ಲಿ ಭಾರತೀಯ ಮಹಿಳಾ ತಂಡವೇ ಚಾಂಪಿಯನ್ ಆಗಿ ಹೊರಹೊಮ್ಮಿತ್ತು. ಇಂಗ್ಲೆಂಡ್ ತಂಡ ರನ್ನರ್ ಅಪ್ ಪ್ರಶಸ್ತಿಗೆ ತೃಪ್ತಿಪಟ್ಟುಕೊಂಡಿತ್ತು. ಈ ಬಾರಿ ಭಾರತ ತಂಡವನ್ನು ಕರ್ನಾಟಕದ ನಿಕಿ ಪ್ರಸಾದ್ ಮುನ್ನಡೆಸಿದ್ದು, ಟ್ರೋಫಿ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ.

19 ವರ್ಷದೊಳಗಿನ ಮಹಿಳಾ ಏಷ್ಯಾಕಪ್‌ನಲ್ಲಿ ಭಾರತ ತಂಡವನ್ನು ಮುನ್ನಡೆಸಿದ್ದ ನಿಕಿ ಫೈನಲ್ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು 41 ರನ್ ಗಳಿಂದ ಮಣಿಸಿ ತಂಡವನ್ನು ಚಾಂಪಿಯನ್ ಪಟ್ಟಕ್ಕೇರಿಸಿದ್ದರು.

ಸಿಎಂ ಸಿದ್ದರಾಮಯ್ಯಗೆ ಮಂಡಿ ನೋವು: ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ

ಕಾರ್ಯಕ್ರಮಗಳು ರದ್ದು



ಬೆಂಗಳೂರು, ಫೆ.2– ಎಡಗಾಲಿನ ಮಂಡಿಯಲ್ಲಿ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಣಿಪಾಲ್ ಆಸ್ಪತ್ರೆಯಲ್ಲಿ ತಪಾಸಣೆಗೆ ಒಳಗಾದರು. ತಪಾಸಣೆ ನಡೆಸಿದ ವೈದ್ಯರು ಈ ಹಿಂದೆ ಲಿಗಮೆಂಟ್ ಶಸ್ತ್ರಚಿಕಿತ್ಸೆ ನಡೆದ ಜಾಗದ ಮೇಲೆ ಒತ್ತಡ ಬಿದ್ದಿರುವುದರಿಂದ ನೋವು ಕಾಣಿಸಿಕೊಂಡಿದೆ. ಉಳಿದಂತೆ ಯಾವುದೇ ಸಮಸ್ಯೆ ಇಲ್ಲ ಎಂದು ತಿಳಿಸಿದ್ದಾರೆ. ಎರಡು ದಿನ ಪ್ರಯಾಣ ಮಾಡದೆ ಮನೆಯಲ್ಲೇ ವಿಶ್ರಾಂತಿ ಪಡೆಯುವಂತೆ ವೈದ್ಯರು ಸಲಹೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ಇಂದಿನ ಎಲ್ಲ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿದೆ. ಇನ್ನು ಮಧ್ಯಾಹ್ನ ಆಸ್ಪತ್ರೆಯಿಂದ ಕಾವೇರಿ ನಿವಾಸಕ್ಕೆ ಮರಳಿದ ಸಿಎಂ ಸಿದ್ದರಾಮಯ್ಯ, ಎರಡು ದಿನ ವಿಶ್ರಾಂತಿ ಪಡೆಯಲಿದ್ದಾರೆ.

ಪ್ರವಾಸಿ ತಾಣವಾಗಿ ಬದಲಾಗಲಿದೆ ಶಕ್ತಿ ಕೇಂದ್ರ ವಿಧಾನಸೌಧ

ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್

ಬೆಂಗಳೂರು, ಫೆ.2– ಕರ್ನಾಟಕದ ಶಕ್ತಿಕೇಂದ್ರ ವಿಧಾನಸೌಧ. ಇದರ ವಾಸ್ತುಶಿಲ್ಪ ವೈಭವಕ್ಕೆ ಬೆರಗಾಗದವರಿಲ್ಲ. ಕಟ್ಟಡ ನಿರ್ಮಾಣದ ಆಧುನಿಕ ತಂತ್ರಜ್ಞಾನ ಬೆಳೆಯದ ದಿನಮಾನಗಳಲ್ಲಿ ನಿರ್ಮಿಸಿದ ಈ ಕಟ್ಟಡಕ್ಕೆ ಸರಿಸಾಟಿ ಎನಿಸುವ ಮತ್ತೊಂದು ಕಟ್ಟಡ ನಿರ್ಮಿಸಲು ಸಾಧ್ಯವಾಗಿಲ್ಲ. ಈ ವಿಧಾನ ಸೌಧ ಈ ತಿಂಗಳ ಅಂತ್ಯದಲ್ಲಿ ಪ್ರವಾಸಿ ತಾಣವಾಗಿ ಬದಲಾಗುತ್ತಿದೆ. ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಎರಡನೇ ಆವೃತ್ತಿಯ ಕರ್ಟನ್ ರೈಸರ್, ಬ್ರೋಚರ್ ಮತ್ತು ಲಾಂಛನವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅವರು, ಕರ್ನಾಟಕ ಇಂಟರ್ ನ್ಯಾಷನಲ್ ಟ್ರಾವೆಲ್ ಎಕ್ಸ್ ಪೋ ■5ನೇ ಪುಟಕ್ಕೆ

ಮಿತಿಮೀರಿ ಬಡ್ಡಿ ವಿಧಿಸುವ ಲೇವಾದೇವಿಗಾರರಿಗೆ

10 ವರ್ಷ ಜೈಲು

● ಸಹಕಾರ ಇಲಾಖೆ ಕಾಯ್ದೆ ಬಲಪಡಿಸಲು ತಯಾರಿ

● ಮುಂದಿನ ಅಧಿವೇಶನದಲ್ಲಿ ಮಸೂದೆ ಮಂಡನೆಗೆ ಚಿಂತನೆ



ಸಹಕಾರ ಸಚಿವ ಕೆ.ಎನ್.ರಾಜಣ್ಣ

ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಕಾಯ್ದೆ–2004ಕ್ಕೆ ತಿದ್ದುಪಡಿ ತರಲು ತೀರ್ಮಾನಿಸಲಾಗಿದೆ. ಈಗ ಗರಿಷ್ಠ 3 ವರ್ಷ ಶಿಕ್ಷೆ ವಿಧಿಸಬಹುದು. ಅದನ್ನು ಗರಿಷ್ಠ 10 ವರ್ಷಕ್ಕೆ ವಿಸ್ತರಿಸಲು ತಿದ್ದುಪಡಿ ತರಲು ಈಗಾಗಲೇ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದೇನೆ. ಅಧಿಕಾರಿಗಳು ತಿದ್ದುಪಡಿ ಸಂಬಂಧ ಸಿದ್ಧತೆ ನಡೆಸುತ್ತಿದ್ದಾರೆ. ಮುಂದಿನ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆ ಮಂಡಿಸಲು ಯೋಚಿಸಿದ್ದೇವೆ

– ಸಹಕಾರ ಸಚಿವ ಕೆ.ಎನ್.ರಾಜಣ್ಣ

ಬೆಂಗಳೂರು, ಫೆ.2– ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಹಾವಳಿ ನಿಯಂತ್ರಣಕ್ಕೆ ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಜಾರಿ ಮಾಡುವ ಕಸರತ್ತು ನಡೆಸುವ ಮಧ್ಯೆಯೇ ಇತ್ತ ಮಿತಿಮೀರಿ ಬಡ್ಡಿ ವಿಧಿಸುವ ಲೇವಾದೇವಿಗಾರರಿಗೆ 10 ವರ್ಷ ಶಿಕ್ಷೆ ವಿಧಿಸುವ ಕಠಿಣ ಕಾನೂನಿನ ತಿದ್ದುಪಡಿಗೆ ಸಹಕಾರ ಇಲಾಖೆಯೂ ಸಿದ್ಧತೆ ನಡೆಸಿದೆ.

ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು, ಕಿರುಕುಳ ನೀಡುತ್ತಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳು, ಲೇವಾದೇವಿಗಾರರ ವಿರುದ್ಧ ನಿಯಂತ್ರಣ ಹೇರಲು ಇರುವ ಕಾನೂನನ್ನೇ ಪ್ರಯೋಗ ಮಾಡುವ ಇಂಗಿತ ವ್ಯಕ್ತಪಡಿಸಿದ್ದಾರೆ. ಸುಗ್ರೀವಾಜ್ಞೆ ತರುವ ಅಗತ್ಯತೆಯನ್ನು ಅವರು ಪ್ರಶ್ನಿಸಿದ್ದಾರೆ. ಇರುವ ಕಾನೂನನ್ನೇ ಇನ್ನಷ್ಟು ಕಠಿಣಗೊಳಿಸಿದರೆ ಅನಧಿಕೃತ ಹಣಕಾಸು ಸಂಸ್ಥೆಗಳು, ಲೇವಾದೇವಿಗಾರರ ಕಿರುಕುಳಕ್ಕೆ ಅಂಕುಶ ಹಾಕಬಹುದಾಗಿದೆ ಎಂಬುದು ಅವರ ವಾದವಾಗಿದೆ. ಈ ನಿಟ್ಟಿನಲ್ಲಿ ಅವರು ತಮ್ಮ ಸಹಕಾರ ಇಲಾಖೆಯ ವ್ಯಾಪ್ತಿಗೆ ಬರುವ ಕಾಯ್ದೆಯನ್ನೇ ಇನ್ನಷ್ಟು ಬಲಪಡಿಸಲು ತಯಾರಿ ನಡೆಸಿದ್ದಾರೆ.

ಮಿತಿಮೀರಿ ಬಡ್ಡಿ ವಿಧಿಸಿದರೆ 10 ವರ್ಷ ಕಠಿಣ ಸಜೆ: ರಾಜ್ಯದಲ್ಲಿ ಇನ್ನು ಮುಂದೆ ಮಿತಿಮೀರಿ ಬಡ್ಡಿ ವಿಧಿಸುವ ಲೇವಾದೇವಿಗಾರರು, ಪಾನ್ ಬ್ರೋಕರ್ಸ್, ಯಾವುದೇ ವ್ಯಕ್ತಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ಕಾನೂನು ತಿದ್ದುಪಡಿ ತರಲು ಸಹಕಾರ ಇಲಾಖೆ ■5ನೇ ಪುಟಕ್ಕೆ

ಮೈಕ್ರೋ ಫೈನಾನ್ಸ್ ಕಂಪನಿ ಹಾವಳಿ ತಡೆಗೆ ಕಾನೂನು: ಸುಗ್ರೀವಾಜ್ಞೆ ಕರಡು ಮುಖ್ಯಮಂತ್ರಿಗೆ ರವಾನೆ



ಗದಗ: ಮೈಕ್ರೋ ಫೈನಾನ್ಸ್ ಕಂಪನಿಗಳಿಂದ ಸಾಲ ಪಡೆಯುವವರನ್ನು ರಕ್ಷಿಸುವ ಸುಗ್ರೀವಾಜ್ಞೆಯ ಕರಡು ಸಿದ್ಧವಾಗಿದ್ದು, ಅದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅನುಮೋದನೆಗಾಗಿ ಕಳುಹಿಸಲಾಗಿದೆ ಎಂದು ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಭಾನುವಾರ ಹೇಳಿದ್ದಾರೆ. ಮುಖ್ಯಮಂತ್ರಿಗಳು ಒಪ್ಪಿಗೆ ನೀಡಿದ ನಂತರ ಸುಗ್ರೀವಾಜ್ಞೆಯನ್ನು ರಾಜ್ಯಪಾಲರ ಅನುಮೋದನೆಗಾಗಿ ಕಳುಹಿಸಲಾಗುವುದು ಎಂದು ಅವರು ತಿಳಿಸಿದ್ದಾರೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಕ್ರೋ ಫೈನಾನ್ಸ್ ಕಂಪನಿಗಳು ಅಮಾನವೀಯ ರೀತಿಯಲ್ಲಿ ಸಾಲಗಾರರಿಂದ ಹಣವನ್ನು ವಸೂಲಿ ಮಾಡುತ್ತಿದ್ದು, ಅಪಾರ ಹಿಂಸೆ ನೀಡುತ್ತಿವೆ. ಈ ಹಿನ್ನೆಲೆಯಲ್ಲಿ ಕಿರುಕುಳ ತಡೆಗಟ್ಟಲು ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಕರಡು ಸಿದ್ಧಪಡಿಸಿದೆ. ಅದನ್ನು ಪರಿಶೀಲನೆಗಾಗಿ ಮುಖ್ಯಮಂತ್ರಿಗೆ ಕಳುಹಿಸಲಾಗಿದೆ.ಅವರು ಒಪ್ಪಿಗೆ ನೀಡಿದ ನಂತರ ರಾಜ್ಯಪಾಲರಿಗೆ ಕಳುಹಿಸಲಾಗುವುದು ಎಂದು ಪಾಟೀಲ್ ಹೇಳಿದರು.

ಆಪರೇಷನ್ ಹಸ್ತ: ಬಹಿರಂಗವಾಗಿಯೇ ಜೆಡಿಎಸ್ ಶಾಸಕರಿಗೆ ಆಫರ್ ನೀಡಿದ ಡಿಕೆಶಿ

ಚನ್ನಪಟ್ಟಣ, ಫೆ.2– ಹಳೇ ಮೈಸೂರು ಭಾಗದಲ್ಲಿ 'ಆಪರೇಷನ್ ಹಸ್ತ'ದ ಮಾತುಗಳು ಕೆಲ ದಿನಗಳಿಂದ ಕೇಳಿಬರುತ್ತಿದೆ. ಇದಕ್ಕೆ ಇಂಬು ನೀಡುವಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದು ಬಹಿರಂಗವಾಗಿಯೇ ಜೆಡಿಎಸ್ ಶಾಸಕರಿಗೆ ಆಫರ್ ನೀಡಿದ್ದಾರೆ.

ಚನ್ನಪಟ್ಟಣದಲ್ಲಿ ಇಂದು ನಡೆದ ಮತದಾರರಿಗೆ ಕೃತಜ್ಞತಾ ಸಮಾವೇಶದಲ್ಲಿ ಮಾತನಾಡಿದ ಅವರು, ಪಾಪ ಜೆಡಿಎಸ್ ಕಾರ್ಯಕರ್ತರಿಗೆ ಹೇಳಬೇಕು. ಅವರು ಟೈಮ್ ವೇಸ್ಟ್ ಮಾಡಿಕೊಳ್ಳುವುದು ಬೇಡ. ಬೆಂಗಳೂರು ದಕ್ಷಿಣ ಜಿಲ್ಲೆಯಾಗುತ್ತಿದೆ. ಒಬ್ಬ ವ್ಯಕ್ತಿಗೋಸ್ಕರ ಇಡೀ ಪಕ್ಷವನ್ನು ಬಲಿಕೊಟ್ಟಿದ್ದಾರೆ. ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ. ನಾನು ಮತ್ತು ಸಿದ್ದರಾಮಯ್ಯ ನಿಮ್ಮ ಜೊತೆಗೆ ನಿಲ್ಲುತ್ತೇವೆ ಎಂದು ಹೇಳುವ ಮೂಲಕ ಪರೋಕ್ಷವಾಗಿ ಕಾಂಗ್ರೆಸ್‌ಗೆ ಬರುವಂತೆ ಆಹ್ವಾನ ನೀಡಿದರು.

ಮತದಾರರು ಈ ಜಿಲ್ಲೆಯಲ್ಲಿ ನಾಲ್ಕು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರನ್ನು ಆಯ್ಕೆ ಮಾಡಿ ಸರ್ಕಾರಕ್ಕೆ ಶಕ್ತಿ ನೀಡಿದ್ದು, ಮುಂದಿನ ಮೂರು ವರ್ಷಗಳಲ್ಲಿ ಎಲ್ಲಾ ನಾಯಕರು ಸೇರಿ ಚನ್ನಪಟ್ಟಣ ಹಾಗೂ ಇಡೀ ಜಿಲ್ಲೆಯ ಚಿತ್ರಣ ಬದಲಿಸುತ್ತೇವೆ ಎಂದರು. ಇದೇ ವೇಳೆ ಸಂಸದ ಕುಮಾರಸ್ವಾಮಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಡಿ.ಕೆ.ಶಿವಕುಮಾರ್, 2 ಬಾರಿ ಸಿಎಂ ಆದರೂ ದೇವಾಲಯ, ಶಾಲೆ ಕಟ್ಟಿಸಲಿಲ್ಲ. ಅಭಿವೃದ್ಧಿ ಮಾಡಿದ್ದೇವೆ ಎಂಬುದಕ್ಕೆ ಸಾಕ್ಷಿ ಗುಡ್ಡೆ ಏನು ಎಂದು ಪ್ರಶ್ನಿಸಿದರು. ಡಿ.ಕೆ.ಸುರೇಶ್ ಹಾಗೂ ನನ್ನ ಬಗ್ಗೆ ತುಂಬಾ ಕೀಳಾಗಿ ಮಾತನಾಡಿದ್ದಾರೆ. ಆದರೆ, ನಾವು ಏನನ್ನೂ ಮಾತನಾಡಿಲ್ಲ. ಎಲ್ಲರಿಗೂ ಈ ಚನ್ನಪಟ್ಟಣವೇ ಉತ್ತರ ನೀಡಲಿದೆ ಎಂದರು. ನಾನು ಯಾರನ್ನೂ ಟೀಕಿಸುವ ಅಗತ್ಯವಿಲ್ಲ. ನಮ್ಮನ್ನು ಅಪೂರ್ವ ಸಹೋದರರು ಎಂದವರು, ನಮ್ಮ ಬಗ್ಗೆ ತುಚ್ಛವಾಗಿ ಮಾತನಾಡಿದ ದೇವೇಗೌಡರು, ಕುಮಾರಸ್ವಾಮಿ, ಯಡಿಯೂರಪ್ಪ ಸೇರಿದಂತೆ ಬಿಜೆಪಿ ಹಾಗೂ ದಳದ ಎಲ್ಲ ನಾಯಕರಿಗೆ ನಿಮ್ಮ ತಟ್ಟೆ ಮರೆ ಏಟು ■5ನೇ ಪುಟಕ್ಕೆ



ಮಂಡ್ಯ ಶಾಲೆ ಆವರಣದಲ್ಲೇ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ



ಮಂಡ್ಯ, ಫೆ.2– ಎಂಟು ವರ್ಷದ ಅಪ್ರಾಪ್ತ ಬಾಲಕಿ ಮೇಲೆ ಮೂವರು ದುರುಳರು ಸಾಮೂಹಿಕ ಅತ್ಯಾಚಾರ ವೆಸಗಿದ್ದು, ಸಂತ್ರಸ್ತ ಬಾಲಕಿಯನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಪರಾರಿಯಾಗಿರುವ ಆರೋಪಿಗಳನ್ನು ಬಂಧಿಸಲು ಪೊಲೀಸರು ಬಲೆ ಬೀಸಿದ್ದಾರೆ.

ಮಂಡ್ಯದ ಸೆಂಟ್ರಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಎಂಟು ವರ್ಷದ ಬಾಲಕಿಯನ್ನು ಮೂವರು ದುರುಳರು ಕೇಕ್ ಕೊಡಿಸಿ, ಬಳಿಕ ಸರ್ಕಾರಿ ಶಾಲೆಯ ಆವರಣಕ್ಕೆ ಕರೆದೊಯ್ದು ಚಾಕು ತೋರಿಸಿ ಬೆದರಿಸಿ, ಅತ್ಯಾಚಾರವೆಸಗಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಕಳೆದ ಎರಡು ದಿನಗಳ ಹಿಂದೆ ಘಟನೆ ನಡೆದಿದ್ದು, ಬಾಲಕಿ ಈ ವಿಚಾರವನ್ನು ಮನೆಯಲ್ಲಿ ಹೇಳಿಲ್ಲ. ಇಂದು ಹೊಟ್ಟೆನೋವು ಕಡಿಮೆಯಾಗದಿದ್ದಾಗ ಸಂಬಂಧಿಕರು ಬಾಲಕಿಯನ್ನು ವಿಚಾರಿಸಿದ ಮೇಲೆ ಕೃತ್ಯ ಬೆಳಕಿಗೆ ಬಂದಿದೆ. ಸದ್ಯ ಅಸ್ವಸ್ಥಗೊಂಡಿರುವ ಬಾಲಕಿಯನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸುತ್ತಿದ್ದು, ಬಾಲಕಿ ಹಾಗೂ ಕುಟುಂಬಸ್ಥರಿಂದ ಪ್ರತ್ಯೇಕ ಮಾಹಿತಿ ಪಡೆಯಲಾಗಿದೆ. ಜೊತೆಗೆ ಪೋಕ್ಸೋ ■5ನೇ ಪುಟಕ್ಕೆ

ಭೂಕಬಳಿಕೆ ಆರೋಪ: ಹೆಚ್‌ಡಿಕೆ ವಿರುದ್ಧ ತನಿಖೆಗೆ ಮುಂದಾದ ಸರ್ಕಾರ



ಬೆಂಗಳೂರು, ಫೆ.2– ಕೇತಗಾನಹಳ್ಳಿ ಬಳಿಯ ಸರ್ಕಾರದ ಜಮೀನು ಒತ್ತುವರಿ ಮಾಡಿರುವ ಆರೋಪ ಕುರಿತು ಹೈಕೋರ್ಟ್ ಸೂಚನೆಯಂತೆ ಕೇಂದ್ರ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ತನಿಖೆ ನಡೆಸಲು ರಾಜ್ಯ ಸರ್ಕಾರ ಮುಂದಾಗಿದೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಕಂದಾಯ ಸಚಿವ ಕೃಷ್ಣ ಭೈರೇಗೌಡ, ಹೈಕೋರ್ಟ್ ಸೂಚನೆಯಂತೆ ತನಿಖೆಗೆ ನಡೆಸಲು ಉನ್ನತ ಅಧಿಕಾರಿಗಳ ತಂಡ ರಚಿಸಲಾಗಿದ್ದು, ಹೈಕೋರ್ಟ್ ಸೂಚನೆಗಳ ಪಾಲಿಸುವಂತೆ ಸೂಚಿಸಲಾಗಿದೆ. ಹೈಕೋರ್ಟ್ ಸೂಚನೆ ನೀಡಿದಾಗ ಸರ್ಕಾರ ಅದನ್ನು ಗೌರವಿಸಬೇಕಾಗುತ್ತದೆ. ಹೈಕೋರ್ಟ್ ನೀಡಿದ ಸಮಯದೊಳಗೆ ಎಸ್‌ಐಟಿ ತನ್ನ ವರದಿಯನ್ನು ಸಲ್ಲಿಸಲಿದೆ ಎಂದು ಹೇಳಿದರು. ಕೇತಗಾನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 8, 9, 10, 16 ಮತ್ತು 79 ರಲ್ಲಿ 14.04 ಎಕರೆ ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಲಾಗಿದೆ ಎಂದು ಕುಮಾರಸ್ವಾಮಿ ಅವರ ವಿರುದ್ಧ ಆರೋಪ ಕೇಳಿ ಬಂದಿದೆ.

ಕುಮಾರಸ್ವಾಮಿ ಮತ್ತು ಮಾಜಿ ಸಚಿವ ಡಿ.ಸಿ.ತಮ್ಮಣ್ಣ ವಿರುದ್ಧ ಮಂಡ್ಯದ ಮಾಜಿ ಸಂಸದ ದಿವಂಗತ ಜಿ. ಮಾದೇಗೌಡ ಅವರು ನೀಡಿದ ದೂರಿನ ಆಧಾರದ ಮೇಲೆ, ಕರ್ನಾಟಕ ಲೋಕಾಯುಕ್ತರು 2014ರಲ್ಲಿ ಭೂಮಿಯನ್ನು ವಶಪಡಿಸಿಕೊಳ್ಳಲು ಆದೇಶಿಸಿದ್ದರು. ಯಾವುದೇ ಕ್ರಮ ಕೈಗೊಳ್ಳದ ಕಾರಣ, ಸಮಾಜ ಪರಿವರ್ತನಾ ಸಮುದಾಯ ಎಂಬ ಸರ್ಕಾರೇತರ ಸಂಸ್ಥೆಯು 2020ರಲ್ಲಿ ಸರ್ಕಾರದ ವಿರುದ್ಧ ಹೈಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಮೊಕದ್ದಮೆ ಹೂಡಿತ್ತು. ನ್ಯಾಯಾಲಯದ ಸೂಚನೆಯಂತೆ ಇದೀಗ ಸರ್ಕಾರ ಕ್ರಮ ಕೈಗೊಂಡಿದ್ದು, ಕುಮಾರಸ್ವಾಮಿ ವಿರುದ್ಧದ ಭೂಕಬಳಿಕೆ ಆರೋಪಗಳ ಕುರಿತ ತನಿಖೆಗಾಗಿ ಬೆಂಗಳೂರು ಪ್ರಾದೇಶಿಕ ಆಯುಕ್ತ ಅಮ್ಲನ್ ಆದಿತ್ಯ ಬಿಸ್ವಾಸ್ ನೇತೃತ್ವದಲ್ಲಿ ಐದು ಸದಸ್ಯರ ಎಸ್‌ಐಟಿಯನ್ನು ರಚಿಸಿದೆ.

ಸ್ನೇಹಿತನ ಮೋಸ, ಬ್ಯಾಂಕ್ ಏಜೆಂಟರ ಕಿರುಕುಳ: ನಂಜನಗೂಡು ವ್ಯಕ್ತಿ ನೇಣಿಗೆ ಶರಣು

● ಸಾವಿಗೂ ಮುನ್ನ ವಿಡಿಯೋ ಮಾಡಿ ಸ್ನೇಹಿತ, ಖಾಸಗಿ ಬ್ಯಾಂಕ್ ವಿರುದ್ಧ ಆರೋಪ ● ಕುಟುಂಬಕ್ಕೆ ಸಹಾಯ ಮಾಡುವಂತೆ ಸಿಎಂ ಸಿದ್ದರಾಮಯ್ಯ, ಡಾ.ಯತೀಂದ್ರಗೆ ಮನವಿ

ಮೈಸೂರು,ಫೆ.2(ಎಂಟಿವೈ)–ಸ್ನೇಹಿತ ಮಾಡಿದ ಮೋಸ ಹಾಗೂ ಸಾಲ ಮರುಪಾವತಿಸುವಂತೆ ಖಾಸಗಿ ಬ್ಯಾಂಕ್ ಸಾಲ ವಸೂಲಿ ಏಜೆಂಟರು ನೀಡಿದ ಕಿರುಕುಳದಿಂದ ವ್ಯಕ್ತಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರು ತಾಲೂಕಿನ ದಂಡಿಕೆರೆ ಬಳಿ ನಡೆದಿದೆ.

ನಂಜನಗೂಡು ತಾಲೂಕಿನ ಬಿಳಿಗೆರೆ ಹೋಬಳಿಯ ಮಲ್ಲೂಪುರ ಗ್ರಾಮದ ರಾಜಪ್ಪ ಎಂಬುವರ ಮಗ ಸಿದ್ದೇಶ್(36) ಎಂಬಾತನೆ ಆತ್ಮಹತ್ಯೆ ಮಾಡಿಕೊಂಡಿದ್ದು, ಸಾವಿಗೂ ಮುನ್ನ 7 ನಿಮಿಷಗಳ ವಿಡಿಯೋ ಹೇಳಿಕೆ ದಾಖಲಿಸಿ, ನನ್ನ ಸಾವಿಗೆ ಸ್ನೇಹಿತ ಉತ್ತನಹಳ್ಳಿ ಮಣಿಕಂಠ ಹಾಗೂ ಖಾಸಗಿ ಬ್ಯಾಂಕ್‌ನವರು ಕಾರಣ ಎಂದು ಆರೋಪಿಸಿದ್ದಾರಲ್ಲದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ನನ್ನ ಕುಟುಂಬಕ್ಕೆ ನೆರವು ನೀಡುವಂತೆ ಮನವಿ ಮಾಡಿದ್ದಾರೆ.

ನಂಜನಗೂಡಿನಲ್ಲಿ ಈ ಹಿಂದೆ ಟೀ ಅಂಗಡಿ ಇಟ್ಟುಕೊಂಡಿದ್ದ ಸಿದ್ದೇಶ್, ವ್ಯಾಪಾರ ಲಾಸ್ ಆದ ಹಿನ್ನೆಲೆಯಲ್ಲಿ ಪ್ರಯಾಣಿಕರ ಆಟೋ ರಿಕ್ಷಾವೊಂದನ್ನು ಖರೀದಿಸಿ ಬಾಡಿಗೆಗೆ ಓಡಿಸುತ್ತಿದ್ದರು. ಆದರೆ, ಸ್ನೇಹಿತನಿಗೆ ಸಾಲ ಕೊಡಿಸಿದ ಪರಿಣಾಮ ಇದೀಗ ಬ್ಯಾಂಕ್ ಏಜೆಂಟರು ನೀಡಿದ ಕಿರುಕುಳ ಹಾಗೂ ಸ್ನೇಹಿತ ಮಾಡಿದ ಮೋಸದಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸಿದ್ದೇಶ ಮಲ್ಲೂಪುರದಲ್ಲಿ ಪತ್ನಿ ರೂಪ, ಮಕ್ಕಳಾದ ಸಮಂತ್(11), ಸಮೃದ್ಧ್(3) ವಾಸಿಸುತ್ತಿದ್ದರು. ಕಳೆದ ರಾತ್ರಿ ಮನೆಗೆ ವಾಪಸಾಗದೇ ಇದ್ದುದರಿಂದ ಮನೆಯವರಲ್ಲಿ ಆತಂಕ ಮನೆ ಮಾಡಿತ್ತು. ಆದರೆ, ಮನೆಯಿಂದ 25 ಕಿ.ಮೀ ದೂರದಲ್ಲಿ ದಂಡಿಕೆರೆ ಗ್ರಾಮದ ಮಹದೇಶ್ವರ ದೇವಾಲಯದ ಸಮೀಪದ ರಸ್ತೆಯಲ್ಲಿ ಮರವೊಂದಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಸ್ಥಿತಿಯಲ್ಲಿ ಸಿದ್ದೇಶ್ ಮೃತದೇಹ ಪತ್ತೆಯಾಗಿದೆ. ಇಂದು ಬೆಳಗ್ಗೆ ದಂಡಿಕೆರೆ ಗ್ರಾಮಸ್ಥರು ಮೃತದೇಹವನ್ನು ಕಂಡು ವರುಣ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಪರಿಶೀಲಿಸಿದಾಗ ಆತ್ಮಹತ್ಯೆ ಮಾಡಿಕೊಂಡಿರುವ ವ್ಯಕ್ತಿ ಮಲ್ಲೂಪುರದ ಸಿದ್ದೇಶ್ ಎಂದು ಖಚಿತವಾಗಿದೆ. ಸ್ಥಳಕ್ಕೆ ಮೃತರ ಸಂಬಂಧಿಕರನ್ನು ಕರೆಸಿ, ಮಹಜರು ಮಾಡಿದ ನಂತರ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜಿನ ಶವಾಗಾರಕ್ಕೆ ಸಾಗಿಸಿದರು.



ಆತ್ಮಹತ್ಯೆ ಮಾಡಿಕೊಂಡ ಸಿದ್ದೇಶ್

ವಿಡಿಯೋ ಹೇಳಿಕೆ: ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಕಳೆದ ರಾತ್ರಿಯೇ ಸಿದ್ದೇಶ್ ಸೆಲ್ಫಿ ವಿಡಿಯೋ ಮಾಡಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಹಾಗೂ ಅದಕ್ಕೆ ಕಾರಣರಾದವರ ಬಗ್ಗೆ ಮತ್ತು ತಾನು ಅನುಭವಿಸಿದ ಯಾತನೆಯ ಬಗ್ಗೆ ಹೇಳಿಕೆ ದಾಖಲಿಸಿದ್ದಾರೆ. ವಿಡಿಯೋದಲ್ಲಿ ಖಾಸಗಿ ಬ್ಯಾಂಕ್‌ನಿಂದ ಕಾರ್ ಲೋನ್ ಪಡೆದಿದ್ದೆ. ಸ್ನೇಹಿತ ಉತ್ತನಹಳ್ಳಿ ಮಣಿಕಂಠ ಎಂಬಾತನಿಗೆ ಸಾಲ ಕೊಡಿಸಲು ನನ್ನ ದಾಖಲೆ ನೀಡಿದ್ದೆ. ಗಾರೆ ಕೆಲಸ ಮಾಡುವ ಮಣಿಕಂಠ ಐದಾರು ವರ್ಷದಿಂದ ಸ್ನೇಹಿತ. ಆತನಿಗೆ ನನ್ನ ಚೆಕ್ ಕೊಟ್ಟು ವೀರೇಗೌಡನಹುಂಡಿ ಪುಟ್ಟಬುದ್ಧಿ ಅವರಿಂದ 1 ಲಕ್ಷ ರೂ., ಅಳಗಂಚಿಪುರ ಕುಮಾರ್ ಅವರಿಂದ 50 ಸಾವಿರ ಹಾಗೂ ಕಾರ್ತಿಕ್ ಬಸವಟ್ಟಿಗೆ ಅವರಿಂದ 50 ಸಾವಿರ ರೂ. ಸಾಲ ಕೊಡಿಸಿದ್ದೆ. ಅಲ್ಲದೆ, ಹೊಸ ಕಾರು ಖರೀದಿಸಬೇಕು ಎಂದಾಗ ನಾನೇ ಶೋರೂಮ್‌ಗೆ ಕರೆದೊಯ್ದಿದ್ದೆ. ಆಲ್ಟೋ ಕಾರು ಖರೀದಿಸಲು ಇಚ್ಛಿಸಿದಾಗ ಆತನ ಸಿಬಿಲ್ ಸ್ಕೋರ್ ಕಡಿಮೆ ಇರುವುದರಿಂದ ಆತನಿಗೆ ಲೋನ್ ನೀಡಲಿಲ್ಲ. ಆಗ ನನ್ನ ದಾಖಲೆ ನೀಡಿ, ನನ್ನ ಹೆಸರಿನಲ್ಲೇ ಲೋನ್ ಮಾಡಿಸಿ ಕಾರು ತೆಗೆದುಕೊಟ್ಟಿದ್ದೆ. ಕೇವಲ 87 ಸಾವಿರ ಡೌನ್ ಪೇಮೆಂಟ್ ಕಟ್ಟಿ ಕಾರು ಪಡೆದಿದ್ದ ಮಣಿಕಂಠ ಸರಿಯಾಗಿ ಇಎಂಐ ಕಟ್ಟುತ್ತಿರಲಿಲ್ಲ. ಕಳೆದ 3–4 ತಿಂಗಳಿಂದ ಕಂತು ಕಟ್ಟದೇ ಇರುವುದರಿಂದ ಬ್ಯಾಂಕ್ ರಿಕವರಿ ಏಜೆಂಟರು ಮನೆ ಬಳಿ ಬಂದು ನಿಂದಿಸುತ್ತಿದ್ದರು.

ರಾತ್ರಿ 10, 11 ಗಂಟೆಯಲ್ಲೂ ಕರೆ ಮಾಡಿ ಬೈಯ್ಯುತ್ತಿದ್ದರು. ಇದರಿಂದ ಅವಮಾನಕ್ಕೆ ಒಳಗಾಗಿದ್ದೇನೆ. ಊರಲ್ಲಿ ಮರ್ಯಾದೆ ಹೋಗುತ್ತಿದೆ. ಸ್ನೇಹಿತರಿಗಾಗಿ ನಾನು ಬೀದಿಗೆ ಬಿದ್ದಿದ್ದೇನೆ. ಹೆಂಡತಿ, ಮಕ್ಕಳನ್ನು ಬೀದಿಗೆ ತಳ್ಳಿದ್ದೇನೆ. ವ್ಯವಹಾರದಲ್ಲಿ ಲಾಸ್ ಆದೆ. ಸ್ನೇಹಿತರು ಮಾಡಿದ ಮೋಸದಿಂದ ಝರ್ಜರಿತನಾಗಿದ್ದೇನೆ. ಬ್ಯಾಂಕ್‌ನವರು ಬಂದು ನನಗೆ ಚಿತ್ರಹಿಂಸೆ ಕೊಡುತ್ತಿದ್ದಾರೆ. ನಂಬಿದ ಸ್ನೇಹಿತರು ಮೋಸ ಮಾಡಿದ್ದಾರೆ. ನಾನು ಎಲ್ಲರನ್ನು ನಂಬಿ ದಡ್ಡನಾದೆ. ಯಾರೋ ಮಾಡಿದ ತಪ್ಪಿಗೆ ನಾನು ಸಿಲುಕಿ ನರಕಯಾತನೆ ಅನುಭವಿಸುತ್ತಿದ್ದೇನೆ. ನನ್ನ ಸಾವಿಗೆ ಮಣಿಕಂಠ, ಖಾಸಗಿ ಬ್ಯಾಂಕ್‌ನವರು ಕಾರಣ. ವರುಣ ಕ್ಷೇತ್ರದವರೇ ಆಗಿರುವ ಸಿಎಂ ಸಿದ್ದರಾಮಯ್ಯ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ನನ್ನ ಕುಟುಂಬಕ್ಕೆ ನೆರವು ನೀಡಿ, ನನ್ನನ್ನು ಕ್ಷಮಿಸಿ. ಯಾರಾದರೂ ನನ್ನ ಕುಟುಂಬಕ್ಕೆ ದಾನ, ಧರ್ಮ ಮಾಡಿ ಎಂದು ಮನವಿ ಮಾಡಿ ವಿಡಿಯೋ ಕೊನೆಗೊಳಿಸಿದ್ದಾರೆ. ಈ ಸಂಬಂಧ ಮೃತರ ಸಂಬಂಧಿಕರು ನೀಡಿದ ದೂರಿನ ಮೇರೆಗೆ ವರುಣ ಠಾಣೆಯಲ್ಲಿ ಮಣಿಕಂಠ ಹಾಗೂ ಖಾಸಗಿ ಬ್ಯಾಂಕಿನ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ಕುದುರೆಮುಖ ಕಂಪನಿಯ ಮಂಗಳೂರು ಕಾರ್ಖಾನೆ ಮುಚ್ಚಿಸಲು ರಾಜ್ಯ ಸರ್ಕಾರ ಷಡ್ಯಂತ್ರ



ಹಾಸನ, ಫೆ.2– ನನ್ನ ಮೇಲಿನ ರಾಜಕೀಯ ಹಗೆತನದಿಂದ ಕರ್ನಾಟಕದ ಪ್ರತಿಷ್ಠಿತ ಕೈಗಾರಿಕೆ, ಅಸಂಖ್ಯಾತರಿಗೆ ಉದ್ಯೋಗ ಕಲ್ಪಿಸಿದ್ದ ಕುದುರೆಮುಖ ಕಬ್ಬಿಣ ಅದಿರು ಸಂಸ್ಥೆಯ (KIOCL) ಮಂಗಳೂರು ಕಾರ್ಖಾನೆಯನ್ನು ಮುಚ್ಚಿಸಲು ರಾಜ್ಯ ಕಾಂಗ್ರೆಸ್ ಸರ್ಕಾರ ಷಡ್ಯಂತ್ರ ನಡೆಸಿದೆ ಎಂದು ಕೇಂದ್ರದ ಸಚಿವ ಹೆಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ.

ಚನ್ನರಾಯಪಟ್ಟಣದಲ್ಲಿ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ನಾನು ಸಚಿವನಾಗಿ ಅಧಿಕಾರ ವಹಿಸಿಕೊಂಡ ಮೇಲೆ ಮೊದಲ ಸಹಿ ಹಾಕಿದ್ದೇ ಕುದುರೆಮುಖ ಕಬ್ಬಿಣ ಅದಿರು ಸಂಸ್ಥೆ ಉಳಿಸಲು. 2011ರಲ್ಲಿ ಸಿದ್ದರಾಮಯ್ಯ ಅವರ ಸರ್ಕಾರವೇ ಒಪ್ಪಿಗೆ ನೀಡಿದ್ದ ಸಂಡೂರಿನ ದೇವದಾರಿ ಗಣಿ ಯೋಜನೆ ಅನುಷ್ಠಾನಕ್ಕೆ ಹಣಕಾಸು ನೆರವು ಪಡೆಯಲು ಅನುಮತಿ ಕೊಡುವ ಬಗ್ಗೆ ಹಣಕಾಸು ಸಚಿವಾಲಯಕ್ಕೆ ಶಿಫಾರಸು ಮಾಡಿದ್ದೆ. ಅದನ್ನೇ ತಿರುಚಿ ಹೇಳಿದ ಕಾಂಗ್ರೆಸ್ ನಾಯಕರು, ನನ್ನ ಮೇಲಿನ ರಾಜಕೀಯ ಹಗೆತನಕ್ಕೆ ನನ್ನ ಒಳ್ಳೆಯ ಪ್ರಯತ್ನಕ್ಕೆ ವ್ಯವಸ್ಥಿತವಾಗಿ ಅಡ್ಡಿಪಡಿಸಿದರು ಎಂದು ದೂರಿದರು. ಕುದುರೆಮುಖ ಕಂಪನಿಯ ಮಂಗಳೂರು ಕಾರ್ಖಾನೆಯನ್ನು ಮುಚ್ಚಿಸಲು ರಾಜ್ಯ ಕಾಂಗ್ರೆಸ್ ಸರ್ಕಾರ ಏನೇನು ಷಡ್ಯಂತ್ರ ಮಾಡಬೇಕೋ ಎಲ್ಲವನ್ನೂ ಮಾಡಿತು ಎಂದು ಅವರು ನೇರ ಆರೋಪ ಮಾಡಿದರಲ್ಲದೆ, ದೇವದಾರಿ ಗಣಿ ಯೋಜನೆಗೆ ರಾಜ್ಯ ಸರಕಾರ ಅಡ್ಡಿಪಡಿಸಿದ ಕಾರಣದಿಂದ ಮಂಗಳೂರಿನ ಕುದುರೆಮುಖ ಕಬ್ಬಿಣದ ಅದಿರು ಕಂಪನಿ ಕಾರ್ಖಾನೆಯಲ್ಲಿ ನೂರಾರು ಕಾರ್ಮಿಕರು ಕೆಲಸ ಕಳೆದುಕೊಂಡರು. ಅವರೆಲ್ಲರೂ ನನ್ನಲ್ಲಿ ಬಂದು ದುಃಖ ತೋಡಿಕೊಂಡರು. ನನ್ನ ರಾಜ್ಯದ ಪ್ರತಿಷ್ಠಿತ ಕಾರ್ಖಾನೆಗೆ ಬೀಗ ಬೀಳಬಾರದು ಎಂಬ ಸದುದ್ದೇಶದಿಂದ ಕುದುರೆಮುಖ ಕಂಪನಿಯನ್ನು ರಾಷ್ಟ್ರೀಯ ಖನಿಜಾಭಿವೃದ್ಧಿ ನಿಗಮ (NMDC)ದಲ್ಲಿ ವಿಲೀನ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ. ರಾಜ್ಯ ಸರಕಾರದ ರಾಜಕೀಯ ಪ್ರತಿಷ್ಠೆಯಿಂದ ಕೈಗಾರಿಕೆಗಳ ಕತ್ತು ಹಿಸುಕಲು ಪ್ರಯತ್ನ ಮಾಡುತ್ತಿದ್ದರೆ ನರೇಂದ್ರ ಮೋದಿ ಅವರ ಸರಕಾರ ಅವುಗಳಿಗೆ ಜೀವ ಕೊಡುವ ಕೆಲಸ ಮಾಡುತ್ತಿದೆ ಎಂದು ಕೇಂದ್ರ ಸಚಿವರು ಹೇಳಿದರು.

ಹೆಚ್‌ಎಂಟಿ ವಿಷಯದಲ್ಲಿಯೂ ಅಡ್ಡಿ: ಹೆಚ್‌ಎಂಟಿಗೆ ಜೀವ ಕೊಡಲು ನಾನು ಹೊರಟರೆ ಅದಕ್ಕೂ ರಾಜ್ಯ ಕಾಂಗ್ರೆಸ್ ಸರ್ಕಾರ ಕೊಕ್ಕೆ ಹಾಕುತ್ತಿದೆ. ಅರಣ್ಯ ಇಲಾಖೆ ಭೂಮಿ ಅಂತ ಕಿತಾಪತಿ ಶುರು ಮಾಡಿದೆ. ಅವರಿಗೆ ಅಭಿವೃದ್ಧಿ ಬೇಕಿಲ್ಲ, ಕೇವಲ ರಾಜಕೀಯ ಬೇಕಷ್ಟೇ. ಜನತೆಗೆ ಶಾಶ್ವತವಾಗಿ ಬದುಕು ರೂಪಿಸಿ ಕೊಡುವ ಉದ್ದೇಶ ಇಲ್ಲ. ಕೇವಲ ಚುನಾವಣೆ ರಾಜಕೀಯಕ್ಕಾಗಿ ಶಾಶ್ವತ ಅಭಿವೃದ್ಧಿಯನ್ನು ಕಾಂಗ್ರೆಸ್ ಸರ್ಕಾರ ಹಾಳು ಮಾಡುತ್ತಿದೆ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು. ಭದ್ರಾವತಿಯಲ್ಲಿ ಮೈಸೂರು ಮಹಾರಾಜರು ಮತ್ತು ಸರ್ ಎಂ ವಿಶ್ವೇಶ್ವರಯ್ಯ ಅವರು ಕಟ್ಟಿರುವ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ ಮುಚ್ಚಿ ಹೋಗಿದೆ. ಅದಕ್ಕೆ ಮರುಜೀವ ಪ್ರಯತ್ನಕ್ಕೂ ಕೈ ಹಾಕಿದ್ದೇನೆ. ಅದಕ್ಕೆ ಈ ಕಾಂಗ್ರೆಸ್ ಸರ್ಕಾರ ಎಷ್ಟರಮಟ್ಟಿಗೆ ನನಗೆ ಬೆಂಬಲ ಕೊಡುತ್ತೋ, ಬಿಡುತ್ತೋ ಗೊತ್ತಿಲ್ಲ ಎಂದರು.

ಬಜೆಟ್ ಟೀಕಿಸುವ ನೈತಿಕತೆ ಕಾಂಗ್ರೆಸ್ ನಾಯಕರಿಗೆ ಇಲ್ಲ: ದೇಶದಲ್ಲಿ ಸುದೀರ್ಘ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷ ರಾಜ್ಯಕ್ಕೆ ಏನು ಮಾಡಿದೆ ಎನ್ನುವುದು ಗೊತ್ತಿದೆ. ಕೇಂದ್ರ ಬಜೆಟ್ ಬಗ್ಗೆ ಟೀಕೆ ಮಾಡುವುದಕ್ಕೆ ಕಾಂಗ್ರೆಸ್‌ನವರಿಗೆ ಏನು ನೈತಿಕತೆ ಇದೆ ಎಂದು ಸಚಿವ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರಲ್ಲದೆ, ವಿಕಸಿತ ಭಾರತ ಸಾಕಾರಕ್ಕೆ ಸಮಗ್ರ ಆಯವ್ಯಯವನ್ನು ಕೇಂದ್ರದ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ್ದಾರೆ. ಎಲ್ಲಾ ರಾಜ್ಯಗಳಿಗೂ ಆದ್ಯತೆ ಕೊಟ್ಟಿದ್ದಾರೆ ಎಂದರು.

ಪಟ್ಟಾ ಜಮೀನು ಹೊಂದಿರುವವರ ಅರಣ್ಯ ಹಕ್ಕು ಅರ್ಜಿ ಪರಿಶೀಲನೆಗೆ ಸಚಿವ ಈಶ್ವರ್ ಖಂಡ್ರೆ ಸೂಚನೆ



ಬೆಂಗಳೂರು, ಫೆ.2– ಅರಣ್ಯ ಹಕ್ಕು ಕಾಯ್ದೆಯಡಿ ಸೌಲಭ್ಯಕ್ಕಾಗಿ ಪಟ್ಟಾ ಜಮೀನು ಹೊಂದಿರುವವರೂ ಅರ್ಜಿ ಹಾಕಿದ್ದರೆ ಪರಿಶೀಲಿಸಿ ಕೈಬಿಡುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ. ಈ ಸಂಬಂಧ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ಸೂಚನೆ ನೀಡಿದ ಅವರು, ಅರಣ್ಯ ಹಕ್ಕು ಕಾಯ್ದೆಯಡಿ ಅರ್ಹ ಫಲಾನುಭವಿಗಳಿಗೆ ಅಂದರೆ 2005ರ ಡಿ.13ಕ್ಕೆ ಮೊದಲು ಜೀವನೋಪಾಯಕ್ಕಾಗಿ ಅರಣ್ಯ ಭೂಮಿ ಬಳಸುತ್ತಿರುವ ಮತ್ತು ಅರಣ್ಯದಲ್ಲಿ ವಾಸಿಸುತ್ತಿರುವವರಿಗೆ ಅನ್ಯಾಯವಾಗದಂತೆ ರಾಜ್ಯ ಸರ್ಕಾರ ಕ್ರಮ ವಹಿಸಿದೆ ಎಂದು ತಿಳಿಸಿದ್ದಾರೆ. ಅರಣ್ಯ ಹಕ್ಕು ಕಾಯ್ದೆಯಡಿ ಇನ್ನೂ ಸಾವಿರಾರು ಅರ್ಜಿಗಳು ಇತ್ಯರ್ಥವಾಗದೆ ಬಾಕಿ ಉಳಿದಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಕಂದಾಯ ಭೂಮಿ (ಪಟ್ಟಾ ಜಮೀನು) ಮಾಲೀಕತ್ವ ಹೊಂದಿರುವವರು ಅರಣ್ಯ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದರೆ ಪರಿಶೀಲಿಸಿ ಕ್ರಮವಹಿಸಲು ಸೂಚಿಸಿದ್ದಾರೆ. ಅರಣ್ಯ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿರುವವರಿಂದ ತಮಗಾಗಲಿ, ತಮ್ಮ ಕುಟುಂಬದ ಸದಸ್ಯರಿಗಾಗಲಿ 2005ರ ಡಿಸೆಂಬರ್ 13ಕ್ಕೆ ಮೊದಲು ಅರಣ್ಯ ಮತ್ತು ಪಟ್ಟಾ ಜಮೀನು ಸೇರಿದಂತೆ 3 ಎಕರೆಗಿಂತ ಹೆಚ್ಚು ಜಮೀನು ಇರಲಿಲ್ಲ ಎಂಬ ಬಗ್ಗೆ ಸ್ವಯಂ ಘೋಷಣೆ (ಡಿಕ್ಲರೇಷನ್) ಬರೆಸಿಕೊಳ್ಳಲು ತಿಳಿಸಿದ್ದಾರೆ.

ಗುಜರಾತ್‌ನಲ್ಲಿ ಕಂದಕಕ್ಕೆ ಉರುಳಿಬಿದ್ದ ಬಸ್, ಐವರು ಯಾತ್ರಿಕರು ಸಾವು



ಡಾಂಗ್, ಫೆ.2–ಗುಜರಾತ್‌ನ ಡಾಂಗ್ ಜಿಲ್ಲೆಯಲ್ಲಿ ಭಾನುವಾರ ನಸುಕಿನ ಜಾವ ಧಾರ್ಮಿಕ ಸ್ಥಳಗಳಿಗೆ ಪ್ರವಾಸಕ್ಕೆ ಹೋಗುತ್ತಿದ್ದ ಯಾತ್ರಾರ್ಥಿಗಳನ್ನು ಕರೆದೊಯ್ಯುತ್ತಿದ್ದ ಖಾಸಗಿ ಬಸ್ ಆಳವಾದ ಕಂದಕಕ್ಕೆ ಉರುಳಿ ಬಿದ್ದ ಪರಿಣಾಮ ಐವರು ಮೃತಪಟ್ಟು, 35 ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಾಯಾಳುಗಳಲ್ಲಿ 17 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಸಪುತಾರಾ ಗಿರಿಧಾಮದ ಬಳಿ ಬಸ್ ಚಾಲಕನ ನಿಯಂತ್ರಣ ತಪ್ಪಿ ನಸುಕಿನ ಜಾವ 4.15 ಗಂಟೆಗೆ ಆಳವಾದ ಕಂದಕಕ್ಕೆ ಬಿದ್ದಿದೆ ಎಂದು ಉಸ್ತುವಾರಿ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಿ.ಪಾಟೀಲ್ ತಿಳಿಸಿದ್ದಾರೆ.

48 ಯಾತ್ರಿಕರನ್ನು ಕರೆದೊಯ್ಯುತ್ತಿದ್ದ ಬಸ್ ತಡೆಗೋಡೆಯನ್ನು ಮುರಿದು ಸುಮಾರು 35 ಅಡಿ ಆಳದ ಕಂದಕಕ್ಕೆ ಬಿದ್ದಿದೆ. ಐವರು ಸ್ಥಳದಲ್ಲೇ ಮೃತಪಟ್ಟು 17 ಮಂದಿ ಗಂಭೀರವಾಗಿ ಗಾಯಗೊಂಡರು. ಅವರನ್ನು ಅಹ್ವಾದ ನಾಗರಿಕ ಆಸ್ಪತ್ರೆಗೆ ಸಾಗಿಸಲಾಗಿದೆ. ಇನ್ನು ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ರಕ್ಷಣಾ ಕಾರ್ಯಾಚರಣೆ ಬಹುತೇಕ ಮುಗಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಿರಿಧಾಮದಿಂದ 2.5 ಕಿಲೋಮೀಟರ್ ದೂರದಲ್ಲಿ ಅಪಘಾತ ಸಂಭವಿಸಿದಾಗ ಅವರು ತಮ್ಮ ಪ್ರಯಾಣವನ್ನು ಪುನರಾರಂಭಿಸುವ ಮೊದಲು ಚಹಾ ವಿರಾಮಕ್ಕಾಗಿ ಸಪುತಾರದಲ್ಲಿ ಸ್ವಲ್ಪ ಸಮಯ ನಿಲ್ಲಿಸಿದ್ದರು. ಮಧ್ಯಪ್ರದೇಶದ ಗುಣ, ಶಿವಪುರಿ ಮತ್ತು ಅಶೋಕ್ ನಗರ ಜಿಲ್ಲೆಗಳಿಂದ ಬಂದ ಯಾತ್ರಿಕರು ಡಿ.23, 2024 ರಂದು ವಿವಿಧ ರಾಜ್ಯಗಳ ಧಾರ್ಮಿಕ ಸ್ಥಳಗಳಿಗೆ ಪ್ರವಾಸಕ್ಕೆ ನಾಲ್ಕು ಬಸ್‌ಗಳಲ್ಲಿ ಹೊರಟಿದ್ದರು. ಯಾತ್ರಿಕರನ್ನು ಹೊತ್ತೊಯ್ಯುತ್ತಿದ್ದ ನಾಲ್ಕು ಬಸ್‌ಗಳಲ್ಲಿ ಒಂದು ಕಮರಿಗೆ ಬಿದ್ದು ಈ ದುರ್ಘಟನೆ ಸಂಭವಿಸಿದೆ ಎಂದು ಡ್ಯಾಂಗ್ ಜಿಲ್ಲಾಧಿಕಾರಿ ಮಹೇಶ್ ಪಟೇಲ್ ತಿಳಿಸಿದ್ದಾರೆ.

ಮೃತರನ್ನು ಬಸ್ ಚಾಲಕ ರತನ್ ಲಾಲ್ ಜಾತವ್, ಭೋಲಾರಾಮ್ ಕೋಸ್ವಾ ಮತ್ತು ಬಿಜ್ರೋನಿ ಯಾದವ್ ಮತ್ತು ಇಬ್ಬರು ಮಹಿಳೆಯರು ಗುಡ್ಡಿಬಾಯಿ ಯಾದವ್ ಮತ್ತು ಕೈಲಾಶ್ ಬಾಯಿ ಯಾದವ್ ಎಂದು ಗುರುತಿಸಲಾಗಿದೆ. ಸ್ಥಳೀಯರು ಮತ್ತು ಪೊಲೀಸ್ ಸಿಬ್ಬಂದಿಯ ತಂಡವು ರಕ್ಷಣಾ ಕಾರ್ಯಾಚರಣೆ ನಡೆಸಿತು.

ವ್ಯಕ್ತಿ ನಾಪತ್ತೆ



ಮೈಸೂರು, ಫೆ.2– ತಾಲೂಕಿನ ಚಿಕ್ಕಳ್ಳಿ ಗ್ರಾಮದ ನಿವಾಸಿ ಪುಟ್ಟನಂಜಪ್ಪ(78) ಅವರು ಕಾಣೆಯಾಗಿರುವುದಾಗಿ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇವರು ಮನೆಯಿಂದ ಹೊರಹೋದವರು ಈವರೆಗೂ ವಾಪಸ್ ಬಂದಿಲ್ಲ. ಎಲ್ಲ ಕಡೆ ಹುಡುಕಿದರೂ ಪತ್ತೆಯಾಗಿಲ್ಲ ಎಂದು ಅವರ ಕುಟುಂಬದವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕರೆ ಆಲನಹಳ್ಳಿ ಪೊಲೀಸ್ ಠಾಣೆ(0821–2418311)ಗೆ ಮಾಹಿತಿ ನೀಡುವಂತೆ ಕೋರಲಾಗಿದೆ.


ಶಿಕ್ಷಣಕ್ಕೆ ನೀಡುವ ಕೋಟ್ಯಾಂತರ ಹಣ ಸದ್ವಿನಿಯೋಗವಾಗಬೇಕು

ಹಿರಿಯ ಸಾಹಿತಿ ಹಿರೇಮಗಳೂರು ಕಣ್ಣನ್ ಅಭಿಮತ

ಮೈಸೂರು,ಫೆ.2(ಎಸ್‌ಪಿಎನ್)– ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಗುಣಮಟ್ಟದ ಶಿಕ್ಷಣ ನೀಡಲು ಕೋಟ್ಯಾಂತರ ರೂ. ವ್ಯಯಿಸುತ್ತಿದೆ. ಇದರ ಸದುಪಯೋಗವಾಗಬೇಕು ಎಂದು ಹಿರಿಯ ಸಾಹಿತಿ ಹಿರೇಮಗಳೂರು ಕಣ್ಣನ್ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ರೋಟರಾಕ್ಟ್ ಕ್ಲಬ್ ಮೈಸೂರು ಈಸ್ಟ್ ವತಿಯಿಂದ ಏರ್ಪಡಿಸಿದ್ದ ನುಡಿನಾದ ಕನ್ನಡ ನುಡಿಯ ವೈಭವ ಕಾರ್ಯಕ್ರಮದಲ್ಲಿ 'ನಮ್ಮ ನಡೆ ಕನ್ನಡ ಶಾಲೆಯ ಅಭಿವೃದ್ಧಿ ಕಡೆ' ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕೆ ರಾಜ್ಯ ಸರ್ಕಾರ ಅನೇಕ ಸೌಲಭ್ಯ ಜಾರಿಗೆ ತಂದಿದೆ. ಗುಣಮಟ್ಟದ ಶಿಕ್ಷಣ ನೀಡಲು ಕೋಟ್ಯಂತರ ರೂ., ವ್ಯಯಿಸುತ್ತಿದೆ. ತರಬೇತಿ ಹೊಂದಿದ ಅನುಭವಿ ಶಿಕ್ಷಕರ ನೇಮಕ, ಬಿಸಿಯೂಟ, ಪಠ್ಯಪುಸ್ತಕ, ಸಮವಸ್ತ್ರ, ಶೂ, ಸಾಕ್ಸ್, ಕ್ಷೀರಭಾಗ್ಯ ವಿತರಣೆಗೆ ಆದ್ಯತೆ ನೀಡಿದೆ. ಹಾಗಾಗಿ ನಮ್ಮ ಮಕ್ಕಳು ಸರ್ವತೋಮುಖ ಬೆಳವಣಿಗೆ ಹೊಂದಲು ಸರ್ಕಾರಿ ಶಾಲೆಗೆ ದಾಖಲಿಸಿ ಮಾತೃ ಭಾಷೆ ಕಲಿಸಬೇಕು ಕನ್ನಡಿಗರಲ್ಲಿ ಮನವಿ ಮಾಡಿದರು. 'ಕನ್ನಡ ನಾಡಿನ ಧ್ವನಿ' ದುಂಬಿಯಂತೆ ಝೇಂಕರಿಸಬೇಕು. ಹಾಗೆ ಹೃದಯ ತುಂಬಿ ಕನ್ನಡವನ್ನು ಆಸ್ವಾದಿಸುತ್ತ, ಕನ್ನಡವನ್ನು ಉಳಿಸಿ ಬೆಳೆಸೋಣ ಎಂದ ಅವರು, ಮಾತಿಗೆ ಮಾತು ಸೇರಿದರೆ, ತಾಕಿದರೆ, ಕಿಡಿ, ವಿವಾದ ಆಗಬಾರದು. ಅದು ನಾದ ಆಗಬೇಕು. ನಾದಕ್ಕೆ ಪ್ರತಿ ನಾದ ಬೇಕು ಎಂದರಲ್ಲದೆ, ಪ್ರತಿಯೊಬ್ಬರು ಕನ್ನಡ ಉಳಿಸಿ ಬೆಳೆಸುವುದರ ಜೊತೆಗೆ ಕಡ್ಡಾಯವಾಗಿ ಕನ್ನಡ ಬಳಸುವಂತಾಗಬೇಕು ಎಂದರು. ಈ ವೇಳೆ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಹಿರಿಯ ಗಾಯಕಿ ಶುಭ ರಾಘವೇಂದ್ರ, ಬಸ್ ಕಂಡಕ್ಟರ್ ಚೌಡಯ್ಯ ಅವರನ್ನು ಸನ್ಮಾನಿಸಲಾಯಿತು,.

ಕಾರ್ಯಕ್ರಮದಲ್ಲಿ ರೋಟರಿ ಮೈಸೂರು ಈಸ್ಟ್ ಅಧ್ಯಕ್ಷ ರೋ.ರೋಹಿತ್ ಸುಬ್ಬಯ್ಯ, ಜಿಲ್ಲಾ ರೋಟರಾಕ್ಟ್ ಪ್ರತಿನಿಧಿ ರೋ. ಆರ್.ಸಂಜಯ್, ಜಿಲ್ಲಾ ರೋಟರಾಕ್ಟ್ ಕಾರ್ಯದರ್ಶಿ ರೋ. ಎಸ್.ರವಿಶಂಕರ್, ರೋ. ಪಿ.ಪಿ.ಶ್ರೀರಕ್ಷಾ, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಯಶಸ್ವಿ ಸೋಮಶೇಖರ್ ಮತ್ತಿತರರಿದ್ದರು.



'ನಮ್ಮ ನಡೆ ಕನ್ನಡ ಶಾಲೆಯ ಅಭಿವೃದ್ಧಿ ಕಡೆ' ಸಮಾರಂಭದಲ್ಲಿ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಹಿರಿಯ ಗಾಯಕಿ ಶುಭ ರಾಘವೇಂದ್ರ, ಬಸ್ ಕಂಡಕ್ಟರ್ ಚೌಡಯ್ಯ ಅವರನ್ನು ಹಿರಿಯ ಸಾಹಿತಿ ಹಿರೇಮಗಳೂರು ಕಣ್ಣನ್ ಸನ್ಮಾನಿಸಿದರು.

ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪೋಷಕರು, ಶಿಕ್ಷಕರ ಪಾತ್ರ ಮಹತ್ತರವಾದುದು



ಕಲಾಮಂದಿರದಲ್ಲಿ ನವ್‌ಕೀಸ್ ಎಜುಕೇಷನಲ್ ಸೆಂಟರ್‌ನ ಶಾಲಾ ವಾರ್ಷಿಕೋತ್ಸವ ಸಮಾರಂಭ ನಡೆಯಿತು.

ಮೈಸೂರು, ಫೆ.2(ಎಂಕೆ)– ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪೋಷಕರು ಹಾಗೂ ಶಿಕ್ಷಕರ ಪಾತ್ರ ಮಹತ್ವದ್ದಾಗಿದ್ದು, ಪ್ರತಿ ಮಗುವಿನಲ್ಲೂ ಅಡಗಿರುವ ಅದಮ್ಯ ಚೇತನವನ್ನು ಗುರುತಿಸಿ ಪ್ರೋತ್ಸಾಹಿಸಬೇಕು ಎಂದು ಡಿಸಿಪಿ ಎಂ.ಮುತ್ತುರಾಜ್ ಸಲಹೆ ನೀಡಿದರು. ಮೈಸೂರಿನ ಕಲಾಮಂದಿರದಲ್ಲಿ ಎರಡು ದಿನಗಳ ಕಾಲ ನಡೆದ ನವ್‌ಕೀಸ್ ಎಜುಕೇಷನಲ್ ಸೆಂಟರ್‌ನ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ಶಿಸ್ತು ಹಾಗೂ ಸಮಯಪಾಲನೆಯ ಬಗ್ಗೆ ಅರಿವು ಮೂಡಿಸುವುದು ಅವಶ್ಯವಾಗಿದೆ. ಮಕ್ಕಳು ಭವಿಷ್ಯತ್ತಿನ ಉತ್ತಮ ಪ್ರಜೆಗಳಾಗಲು ಶಾಲೆ ಹಾಗೂ ಪೋಷಕರು ಒಟ್ಟಾಗಿ ಕೈಜೋಡಿಸಿ ಜವಾಬ್ದಾರಿ ನಿರ್ವಹಿಸಬೇಕು ಎಂದು ಹೇಳಿದರು.

ನಂತರ ಶಾಲೆಯ ವಿದ್ಯಾರ್ಥಿಗಳು ಆದಿವಾಸಿಗಳ ನೃತ್ಯ, ಹುಲಿ ಕುಣಿತ, ಬಿದುರು ಕೋಲು ನೃತ್ಯ, ಸಂಪ್ರದಾಯಿಕ ನೃತ್ಯ, ಒನಕೆ ಓಬವ್ವ, ನಾದಬ್ರಹ್ಮ, ಪಂಜಾಬಿ ನೃತ್ಯ, ಕೋಲಾಟ, ಚೈನಾ, ಮಂಗೋಲಿಯಾ, ಯುರೋಪಿಯನ್ ಅರೇಬಿಕ್, ಫ್ರೆಂಚ್, ರೀಲ್ಸ್ ರಿಮಿಕ್ಸ್, ಹಿಪ್– ಹಾಪ್, ಯಕ್ಷಗಾನ, ಚಂಡೆ ವಾದ್ಯ ಪ್ರದರ್ಶನ, ಬಾಲಿವುಡ್, ಜಿಂಗಲ್ಸ್ ನವರಸ ರೋಬೋಟಿಕ್ ನೃತ್ಯ ಹೀಗೆ ಹಲವು ನೃತ್ಯ ಪ್ರಕಾರದ ನೃತ್ಯ ಪ್ರದರ್ಶನ ನೀಡಿ ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರು.

ಸೈಬರ್ ಕ್ರೈಂ ವಿಭಾಗದ ಎಸಿಪಿ ಸ್ನೇಹರಾಜ್, ಡಾ.ಉಷಾ ಹೆಗ್ಡೆ, ಡಾ.ಎಂ.ಮಲ್ಲಿಕಾ, ಶಾಲಾ ಚೇರ್ಮನ್ ಆನಂದ್ ರಾಮ್, ವೈಸ್ ಚೇರ್ಮನ್ ನವಕೋಟಿರಾಮ್, ಸಿ.ಇಓ ವಿಶ್ವನಾಥ್ ಕುಮಾರ್, ಪ್ರಾಂಶುಪಾಲರಾದ ತಾರಕೇಶ್ವರಿ, ಶಾಲಾ ವ್ಯವಸ್ಥಾಪಕ ಅನೂಪ್ ಮತ್ತಿತರರು ಉಪಸ್ಥಿತರಿದ್ದರು.

ತಪಾಸಣೆ, ಚಿಕಿತ್ಸಾ ಶಿಬಿರ

ಮೈಸೂರು,ಫೆ.2– ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ನ್ಯೂ ಸಯ್ಯಾಜಿ ರಾವ್ ರಸ್ತೆ ವಿಶ್ವೇಶ್ವರಯ್ಯ ವೃತ್ತದ ಕಾಯ ಚಿಕಿತ್ಸಾ ಹೊರರೋಗಿ ವಿಭಾಗದಲ್ಲಿ ವಿವಿಧ ಖಾಯಿಲೆಗಳಿಗೆ ತಜ್ಞ ವೈದ್ಯರಿಂದ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರವನ್ನು ಫೆ.3ರಿಂದ ಮಾರ್ಚ್ 3 ರವರೆಗೆ ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಸಲಾಗುವುದು. ಉಚಿತ ಆಯುರ್ವೇದ ಔಷಧಗಳನ್ನು ವಿತರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಮೂತ್ರಕೋಶದ ಕಲ್ಲು ಕಾಯಿಲೆಗೆ ಡಾ .ಪೂಜಾ ಬಿ.ಜಿ 6363681618, ಋತುಬಂಧ, ಮುಟ್ಟು ನಿಲ್ಲುವಿಕೆ ಕಾಯಿಲೆಗೆ ಡಾ. ಹಸೀನಾ ಬೇಗಂ.ಪಿ 9380327391, ಮಂಡಿ ನೋವು, ಮೊಣಕಾಲು ನೋವು ಕಾಯಿಲೆಗೆ ಡಾ. ಪಲ್ಲವಿ ಎನ್.ಎಂ 8747028584, ಹೊಟ್ಟೆಯ ಅಸ್ವಸ್ಥತೆ ಅಥವಾ ನೋವು ಮತ್ತು ಕರುಳಿನ ಸಮಸ್ಯೆಗೆ ಡಾ. ಶ್ವೇತಾ ಜೈನ್.ಹೆಚ್.ಎ 8762052998, ಸಕ್ಕರೆ ಕಾಯಿಲೆಗೆ ಡಾ.ಪೂಜಾ ಐ.ಎಂ.ಎಂ 8904458532 ಸಂಪರ್ಕಿಸಬಹುದು.

ಕೇಂದ್ರ, ರಾಜ್ಯ ಸರ್ಕಾರ ವಿಶೇಷಚೇತನರಿಗೆ ಬದುಕು ರೂಪಿಸುವ ವಾತಾವರಣ ಕಲ್ಪಿಸಬೇಕಿದೆ

ಮೈಸೂರು, ಫೆ.2(ಎಸ್‌ಪಿಎನ್)– ವಿಶೇಷಚೇತನರಿಗೆ ಸಮಾಜದಲ್ಲಿ ಸ್ವಾಭಿಮಾನದ ಬದುಕಿಗಾಗಿ ಸೂಕ್ತ ವಾತಾವರಣವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರ ರೂಪಿಸಬೇಕು ಎಂದು ಕನಕಪುರ ಸ್ತುತಿ ಕಂಪ್ಯೂಟರ್ ಶಿಕ್ಷಕರ ತರಬೇತಿ ಕೇಂದ್ರದ ಸಂಸ್ಥಾಪಕ ಎನ್. ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ನಜರ್‌ಬಾದ್‌ನಲ್ಲಿರುವ ಜಿಲ್ಲಾ ಆರೋಗ್ಯಾಧಿಕಾರಿಗಳ ಕಚೇರಿ ಆವರಣದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಚೆನ್ನೈನ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಹಾಗೂ ಸ್ಥಳೀಯ ವಿವಿಧ ಸಂಘ–ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಸಾಧಕ ವಿಕಲಚೇತನರಿಗೆ ಪ್ರಶಸ್ತಿ ಪ್ರದಾನ ಮತ್ತು ಬಲವರ್ಧನ ಕಾರ್ಯಾಗಾರದ ಸಮಾರೋಪದಲ್ಲಿ ಮಾತನಾಡಿದರು. ನಮ್ಮ ಶರೀರಕ್ಕೆ ಅಂಗವೈಕಲ್ಯ ಇದೆಯೇ ಹೊರತು ಮನಸ್ಸಿಗಲ್ಲ. ಆತ್ಮವಿಶ್ವಾಸದಿಂದ ಕೆಲಸ ಮಾಡಿದಾಗ ಮಾತ್ರ ಸಮಾಜದಲ್ಲಿ ಉಳಿದುಕೊಳ್ಳಲು ಸಾಧ್ಯ. ವಿಕಲಚೇತನರು ಕೇವಲ ಬಸ್ ಪಾಸ್, ಪಿಂಚಣಿ ಸೌಲಭ್ಯಕ್ಕಾಗಿ ಬದುಕುವುದಲ್ಲ. ಸಮಾಜದಲ್ಲಿ ಬದಲಾವಣೆ ತರಲು ಹುಟ್ಟಿದ್ದೇವೆ ಎಂಬ ಮನೋಸ್ಥೈರ್ಯ ಬೆಳೆಸಿಕೊಳ್ಳಬೇಕು ಎಂದರು.


ನನಗೆ 16 ವರ್ಷದವರೆಗೆ ಎಲ್ಲಾ ಅಂಗಾಂಗಗಳು ಸರಿಯಿತ್ತು. ಅಪಘಾತದ ಕಾರಣದಿಂದಾಗಿ ಅಂಗವಿಕಲನಾದೆ, ಕುತ್ತಿಗೆಯ ಕೆಳಗಿನ ಭಾಗದ ಬಲ ಇಲ್ಲದಾಯಿತು. ನಂತರ ಎರಡು ವರ್ಷ ನಿರಂತರ ಥೆರಪಿ ಬಳಿಕ ಗಾಲಿಕುರ್ಚಿಯಲ್ಲಿ ಕೂರುವಂತಾಯಿತು. ಮೊದಲು ಕಾಯಿನ್ ಬೂತ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಇದು ಮರೆಯಾದ ನಂತರ ಬಂದ್ ಆಗುತ್ತಿದ್ದ ಕಂಪ್ಯೂಟರ್ ಕೇಂದ್ರವನ್ನು ಖರೀದಿಸಿ ಇಂದಿಗೂ ಮುನ್ನಡೆಸುತ್ತಿದ್ದೇನೆ ಎಂದು ಹೇಳಿದರು. ನನ್ನ ಕೇಂದ್ರದಲ್ಲಿ 20 ಕಂಪ್ಯೂಟರ್‌ಗಳಿವೆ. ಪ್ರಸ್ತುತ ಮೂರು ಜನ ಶಿಕ್ಷಕಿಯರು ಕೆಲಸ ಮಾಡುತ್ತಿದ್ದಾರೆ. ಸುಮಾರು 6 ಸಾವಿರ ವಿದ್ಯಾರ್ಥಿಗಳು ಇದೇ ಕೇಂದ್ರದಲ್ಲಿ ಕಂಪ್ಯೂಟರ್ ಶಿಕ್ಷಣ ಪಡೆದುಕೊಂಡಿದ್ದಾರೆ. ತಿಂಗಳಿಗೆ 40 ಸಾವಿರ ಗಳಿಸಿ, ಸ್ವಾಭಿಮಾನದ ಬದುಕು ರೂಪಿಸಿಕೊಂಡಿದ್ದೇನೆ. ಮುಂದೆ ಸಾವಿರ ಮಂದಿ ವಿಕಲಚೇತನರಿಗೆ ಉದ್ಯೋಗ ನೀಡಬೇಕೆಂಬ ಕನಸು ಕಂಡಿದ್ದೇನೆ. ಆತ್ಮವಿಶ್ವಾಸ ವಿದ್ದರೆ ಎಲ್ಲವೂ ಸಾಧ್ಯ ಎಂದು ಹೇಳಿದರು.

ವಿಕಲಚೇತನರಿಗೆ ಪ್ರೋತ್ಸಾಹ ನೀಡಿದ ಕೊಡಗು ಜಿಲ್ಲೆಯ ಗೋಣಿಕೊಪ್ಪಲು ಪಂಚಾಯಿತಿ ಹಾಗೂ ನಂಜನಗೂಡಿನ ದೇವಿರಮ್ಮ ಪಂಚಾಯಿತಿ, ಮಾದರಿ ಕೆಲಸ ಮಾಡಿದ ನಂಜನಗೂಡು ಹೊಸಕೋಟೆ ಬಸವೇಶ್ವರ ವಿಶೇಷಚೇತನರ ಸಂಘ ಮತ್ತು ಎಚ್.ಡಿ.ಕೋಟೆ ತಾಲೂಕಿನ ಹೈರಿಗೆ ಗ್ರಾಮದ ಶ್ರೀ ಕೃಷ್ಣ ಸ್ವಸಹಾಯ ಸಂಘದ ಸದಸ್ಯರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕೊಡಗು ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಕೆ.ಜಿ.ವಿಮಲಾ, ಭಾರತ್ ಪೆಟ್ರೋಲಿಯಂ ಕಾರ್ಪೊರೇಶನ್ ಸಂಸ್ಥೆಯ ಪ್ರಾದೇಶಿಕ ವ್ಯವಸ್ಥಾಪಕ ವಿಕ್ರಾಂತ್ ಹಟೆ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಡಾ.ಜಿ.ಎಸ್. ಕುಮಾರ್, ಎಸ್.ಆರ್.ದೀಪಶ್ರೀ ಇದ್ದರು.



ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿಕಲಚೇತನರನ್ನು ಸನ್ಮಾನಿಸಲಾಯಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.02.2025 ಸೋಮವಾರ, ಮಳೆ ನಕ್ಷತ್ರ: ಶ್ರವಣ 24.01.2025 ರಿಂದ 05.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 7.30 ರಿಂದ 9 ರವರೆಗೆ

* **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 9 ಗಂಟೆಗೆ ಹಿಮ್ಮಡಿ ಮುಳ್ಳು, ಪಿತ್ತಗಂಧೆ (ಶೀತ ಪಿತ್ತ) ಚಿಕಿತ್ಸಾ ಶಿಬಿರ; ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
* **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.
* **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ತ್ಯಾಗರಾಜ ಆರಾಧನೆ ಪ್ರಯುಕ್ತ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ವಿ॥ ಫಣೀಂದ್ರ ಶರ್ಮ, ಅನೂರು ಅವರಿಂದ ಗಾಯನ, ವಾದ್ಯ ಸಹಕಾರ: ವಿ॥ ಕೇಶವ ಮೋಹನ್‌ಕುಮಾರ್, ವಿ॥ ವಿಕ್ರಮ್ ಭಾರದ್ವಾಜ್, ವಿ॥ ಶ್ರೀನಿಧಿ ಆರ್. ಕೌಂಡಿನ್ಯ, ಸ್ಥಳ: ಶ್ರೀ ಕೃಷ್ಣ ಗಾನಸಭಾ, ಶ್ರೀ ಕೃಷ್ಣ ಮಂದಿರ, 3ನೇ ಹಂತ, ಗೋಕುಲಂ, ಸಂಜೆ 6.30ರಿಂದ 8.30ರವರೆಗೆ.

ನೇರಳೆ ಗ್ರಾಮ, ಹೆಚ್.ಡಿ. ಕೋಟೆ ತಾ.

* **ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2, ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು (ಹೆಚ್.ಡಿ. ಕೋಟೆ) :** 23ನೇ ವಾರ್ಷಿಕ ವಿಶೇಷ ಶಿಬಿರ–2024–25, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ, ಬೆಳಗ್ಗೆ 7ಕ್ಕೆ ಸರಳ ವ್ಯಾಯಾಮ, ಬೆಳಗ್ಗೆ 8.30 ರಿಂದ ಶ್ರಮದಾನ, ಗ್ರಾಮ ಸಮೀಕ್ಷೆ, ಸಂಜೆ 4ಕ್ಕೆ ಉಪನ್ಯಾಸ, ಸ್ಥಳ: ನೇರಳೆ ಗ್ರಾಮ, ಹೆಚ್.ಡಿ. ಕೋಟೆ ತಾ.

ಹೆಬ್ಬಾಡಿ ಗ್ರಾಮ, ಶ್ರೀರಂಗಪಟ್ಟಣ ತಾ.

* **ಮುಜರಾಯಿ ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಕೋಡಿಲಿಂಗೇಶ್ವರ ಸ್ವಾಮಿ ನೂತನ ದೇವಸ್ಥಾನ ಪ್ರತಿಷ್ಠಾಪನೆ, ಮುಂಜಾನೆ 4.30ರಿಂದ ಕಳಸ ಪ್ರತಿಷ್ಠಾಪನೆ, ಗಣಪತಿ, ಶ್ರೀ ಕೋಡಿಲಿಂಗೇಶ್ವರ, ಶ್ರೀ ಪಾರ್ವತಿದೇವಿ, ಶ್ರೀ ನಂದೀಶ್ವರ ದೇವತಾ ಪ್ರತಿಷ್ಠಾನ, ಗಣಪತಿ ಹೋಮ, ರುದ್ರ ಹೋಮ, ಪೂರ್ಣಾಹುತಿ, ಸ್ಥಳ: ಹೆಬ್ಬಾಡಿ ಗ್ರಾಮ, ಶ್ರೀರಂಗಪಟ್ಟಣದ ತಾಲೂಕು, ಮಂಡ್ಯ ಜಿಲ್ಲೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ – ಧೀರೇಂದ್ರ ನಾಗರಹಳ್ಳಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: 'ಆಧಾರ ಶಿಲೆ' – ಮೈಸೂರು ಸುತ್ತಲಿನ ಪ್ರಾಗೈತಿಹಾಸಿಕ ತಾಣಗಳ ಪರಿಚಯ ಮಾಲಿಕೆ. ಪ್ರಸ್ತುತಿ: ಡಾ. ರಾಮದಾಸ್ ರೆಡ್ಡಿ, 6.40 ಅರಿವಿನ ಶಿಖರ – ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಟಿ.ಎಸ್. ಸ್ನೇಹಾ, ಬಿ. ಶ್ರೀರಾಂಭಟ್, ಕೆ. ಶ್ರೇಯಾ, ವ್ಯಾಖ್ಯಾನ: ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 'ಭರವಸೆ ಹೊನಲು – ವೈದ್ಯರ ಕಿವಿಮಾತು' ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು – ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ. ರಸ್ತೆ, ಬೆಂಗಳೂರು, 8.30 ಸುತ್ತೂರು ಜಾತ್ರಾ ಮಹೋತ್ಸವ 2025 ಬಾನುಲಿ ವರದಿ, ಪ್ರಾಯೋಜಕರು – ಸುತ್ತೂರು ಜಾತ್ರಾ ಮಹೋತ್ಸವ ಸಮಿತಿ, ಸುತ್ತೂರು ಶ್ರೀ ಕ್ಷೇತ್ರ, ಮೈಸೂರು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ), 1. ಹಿರಿಯ ಸಾಹಿತಿ ಡಾ. ಎಸ್. ಎಲ್. ಭೈರಪ್ಪ ಅವರೊಂದಿಗೆ ದಿವಾಕರ ಹೆಗಡೆ ನಡೆಸಿದ್ದ ಸಂವಾದ. (DR : 01. 12. 2020), 2. ಮೈಸೂರು ಆಕಾಶವಾಣಿಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ಹಿರಿಯ ಅಧಿಕಾರಿ ಎಸ್. ಪುಟ್ಟತಾಯಮ್ಮ ಅವರ ಮನದಾಳದ ಮಾತುಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಗಾಯತ್ರಿ ವೆಂಕಟರಾಘವನ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ – ಗೇಮ್ ಶೋ, ಪ್ರಸ್ತುತಿ : ದಿಗ್ವಿಜಯ್ .ಬಿ.

ಮಧ್ಯಾಹ್ನ: 12.05 ವನಿತಾ ವಿಹಾರ: 12.35 ದೇವರನಾಮ, 12.45 ನಮ್ಮ ಆರೋಗ್ಯ: ವಿಶ್ವ ಕ್ಯಾನ್ಸರ್ ದಿನಾಚರಣೆಯ ಸಂಬಂಧವಾಗಿ 'ಕ್ಯಾನ್ಸರ್ ಜಾಗೃತಿ' ಕುರಿತು ಮಾಹಿತಿ ನೀಡುತ್ತಾರೆ ಮೈಸೂರಿನ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಕನ್ಸಲ್ಟಂಟ್ ಪೀಡಿಯಾಟ್ರಿಕ್ ಹೆಮಟಾಲಜಿಸ್ಟ್ ಮತ್ತು ಆಂಕಾಲಜಿಸ್ಟ್ ಡಾ. ತರಂಗಿಣಿ ದುರುಗಪ್ಪ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, ಪ್ರಧಾನಮಂತ್ರಿಗಳ 15 ಅಂಶಗಳ ಕಾರ್ಯಕ್ರಮ, ಮಾತನಾಡುತ್ತಾರೆ – ಎಂ.ಜೆ. ಇಂದುಮತಿ, 1.20 ಭಾವಗೀತೆಗಳು – ವಸಂತ ಪಿ.ಎಸ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ. ಬಿ. ದೇವೇಂದ್ರಪ್ಪ – ಜಲತರಂಗ್, 4.00 ಮಹಿಳಾರಂಗ – 'ನಾನು ನನ್ನ ಕಂಪನಿ' ವಿವಿಧ ರೀತಿಯ ಅಗರಬತ್ತಿಗಳನ್ನು ತಯಾರಿಸುವ ಮೋಹನ ಕುಮಾರಿ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನ 4.45 ಹಿಂದಿ ಪಾಠ – ಪ್ರಸ್ತುತಿ: ಡಾ. ಜಯಂತಿ ಪ್ರಸಾದ್ ನೌಟಿಯಾಲ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ.

ಮಧ್ಯಾಹ್ನ: 6.50 ಕೃಷಿರಂಗ : ವ್ಯವಸಾಯದ ಅನುಭವ ಹಂಚಿಕೊಳ್ಳುತ್ತಾರೆ ಮಂಡ್ಯ ತಾಲೂಕು ಕೆರೆಗೋಡು ಹೋಬಳಿ ಬಿಳಿದೇಗಲು ಗ್ರಾಮದ ಬಿ.ಪಿ. ಗೋಪಾಲ್. ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ಆಕಾಶ ವೀಕ್ಷಣೆ – ಗ್ರಹತಾರೆಗಳ ಮಾಹಿತಿ, ವೀಕ್ಷಕ ವಿವರಣೆಕಾರರು: ಅಮೋಘವರ್ಷ .ಎನ್, ಎಸ್.ಎನ್. ಲಿಂಗರಾಜು, ನಡೆಸಿಕೊಡುತ್ತಾರೆ: ಟಿ.ವಿ. ವಿದ್ಯಾಶಂಕರ್ ಮತ್ತು ಬೇದ್ರೆ ಮಂಜುನಾಥ್.

ರಾತ್ರಿ: 9.15 ಸಂಸದ್ ಸಮೀಕ್ಷಾ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ತುಮಕೂರು. ಟಿ.ವಿ. ಭದ್ರಾಚಾರ್ – ತಾಳವಾದ್ಯ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

ಸಂಸ್ಕೃತ ಕಾವೇರಿ ಪ್ರಾಂತ ಸಮ್ಮೇಳನದ ಸಮಾರೋಪ

ಶಿಲ್ಪ ಕಲೆ, ಶಾಸ್ತ್ರ ಎರಡಕ್ಕೂ ಸಂಸ್ಕೃತ ಭಾಷೆ ಬಹುಮುಖ್ಯ

ಶಿಲ್ಪಿ ಅರುಣ್ ಯೋಗಿರಾಜ್ ಅಭಿಮತ



ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಭಾನುವಾರ ನಡೆದ ಸಂಸ್ಕೃತ ಕಾವೇರಿ ಪ್ರಾಂತ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಫೆ.2(ಪಿಎಂ)– ಶಿಲ್ಪ ಕಲೆ ಮತ್ತು ಶಾಸ್ತ್ರ ಎರಡಕ್ಕೂ ಸಂಸ್ಕೃತ ಭಾಷೆ ಬಹುಮುಖ್ಯ ಎಂದು ಶಿಲ್ಪಿ ಅರುಣ್ ಯೋಗಿರಾಜ್ ಹೇಳಿದರು.

ಮೈಸೂರಿನ ನಂಜನಗೂಡು ರಸ್ತೆಯ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ಸಂಸ್ಕೃತ ಭಾರತಿ ಕರ್ನಾಟಕ ದಕ್ಷಿಣದ ವತಿಯಿಂದ ಹಮ್ಮಿಕೊಂಡಿದ್ದ ಸಂಸ್ಕೃತ ಕಾವೇರಿ ಶೀರ್ಷಿಕೆಯಡಿಯ ಎರಡು ದಿನಗಳ ಸಂಸ್ಕೃತ ಭಾಷೆಯ ಪ್ರಾಂತ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಸಂಸ್ಕೃತ ಭಾರತಿ ಕಳೆದ 24 ವರ್ಷಗಳಿಂದ ಸಂಸ್ಕೃತ ಭಾಷೆ ಉಳಿಸಿ ಬೆಳೆಸುವ ಕಾಯಕದಲ್ಲಿ ತೊಡಗಿರುವುದು ಶ್ಲಾಘನೀಯ. ಮೈಸೂರು ತನ್ನದೇ ಆದ ಪರಂಪರೆ ಮತ್ತು ಸಂಸ್ಕೃತಿ ಹೊಂದಿದೆ. ಮೈಸೂರಿನಲ್ಲಿ ಸಂಸ್ಕೃತ ಸಮ್ಮೇಳನ ನಡೆದಿರುವುದು ಸಂತಸದ ಸಂಗತಿ. ಅಯೋಧ್ಯೆಯಲ್ಲಿ ಶ್ರೀ ಬಾಲರಾಮನ ವಿಗ್ರಹ ಕೆತ್ತನೆ ಪೂರ್ಣಗೊಳಿಸಿ ಮರಳಿದ ನನ್ನನ್ನು ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಇದೇ ನಾದಮಂಟಪದಲ್ಲಿ ಚಿನ್ನದ ಕಡಗ ತೊಡಿಸಿ ಸನ್ಮಾನಿಸಿದರು. ಅಲ್ಲದೆ, ಇನ್ನುಷ್ಟು ಶಿಲ್ಪಿಗಳಿಗೂ ಉತ್ತೇಜನ ನೀಡಿದರು. ಬಹಳಷ್ಟು ಶಿಲ್ಪಿಗಳಿಗೆ ಆಶ್ರಯ ನೀಡಿರುವ ಜಾಗವಿದು ಎಂದರು.

ನಮ್ಮ ತಾತನವರು ಶಿಲ್ಪಿ ಸಿದ್ದಲಿಂಗ ಸ್ವಾಮಿಯವರಲ್ಲಿ ಗುರುಕುಲ ಪದ್ಧತಿಯಡಿ 25 ವರ್ಷಗಳ ಕಾಲ ಶಿಲ್ಪ ಕಲೆಯ ಅಭ್ಯಾಸ ಮಾಡಿದ್ದರು. ನಂತರ ಸ್ವತಂತ್ರವಾಗಿ ಶಿಲ್ಪ ಕತ್ತನೆಯಲ್ಲಿ ನೆಲೆ ಕಂಡುಕೊಂಡರು. ನಮ್ಮ ಕುಟುಂಬ 300 ವರ್ಷಗಳಿಂದ ಶಿಲ್ಪ ಕೆತ್ತನೆ ಕಾಯಕದಲ್ಲಿ ತೊಡಗಿದೆ. ಕೇದಾರನಾಥ ಕ್ಷೇತ್ರದಲ್ಲಿ ಪ್ರತಿಷ್ಠಾಪಿಸಿರುವ ಆದಿ ಶಂಕರಾಚಾರ್ಯರ ಪ್ರತಿಮೆ ಕತ್ತನೆಯು ನನ್ನ ಜೀವನದ ಬಹುದೊಡ್ಡ ತಿರುವು. ಶಂಕರಾಚಾರ್ಯರ ಪ್ರತಿಮೆ ಕೆತ್ತನೆ ಸಂದರ್ಭದಲ್ಲಿ ರಾತ್ರಿ ಮಲಗಿದ್ದಾಗ ಕೆಲವೊಮ್ಮೆ ನನ್ನನ್ನು ಯಾರೋ ಕೈ ಹಿಡಿದು ಕರೆದೊಯ್ಯದಂತೆ, ನಂತರ ಶಂಕರಾಚಾರ್ಯರ ದರ್ಶನವಾದಂತೆ ಬಾಸವಾಗುತ್ತಿತ್ತು. ನಂತರ ನಿದ್ದೆಯಿಂದ ಎಚ್ಚರಗೊಳ್ಳುತ್ತಿದ್ದೆ. ಈ ಘಟನೆಯನ್ನು ಎಂದೂ ಮರೆಯಲಾರೆ ಎಂದು ಶಂಕರಾಚಾರ್ಯರ ಕುರಿತು ಭಕ್ತಿಭಾವ ವ್ಯಕ್ತಪಡಿಸಿದರು.

ಅಯೋಧ್ಯೆ ಬಾಲರಾಮ ಪ್ರತಿಮೆ ಕೆತ್ತನೆ ಸಂದರ್ಭದಲ್ಲಿ ರಾತ್ರಿ ನಿದ್ದೆ ಬರುತ್ತಿರಲಿಲ್ಲ. ಕಾರಣ ಈವರೆಗೆ ಯಾರ ಕಲ್ಪನೆಗೂ ಬಾರದ ಬಾಲರಾಮನ ಕೆತ್ತನೆ ಸವಾಲಾಗಿತ್ತು. ಅಲ್ಲದೆ, ದೇಶದ ಜನತೆಗೆ 500 ವರ್ಷಗಳಿಂದ ಕಾಯುತ್ತಿದ್ದ ಸಂದರ್ಭದ ದೊಡ್ಡ ಜವಾಬ್ದಾರಿಯಾಗಿತ್ತು. ಕೊನೆಗೆ ಆ ರಾಮನೇ ತನಗೆ ಬೇಕಾದಂತೆ ತನ್ನ ವಿಗ್ರಹವನ್ನು ನನ್ನಿಂದ ಕೆತ್ತನೆ ಮಾಡಿಸಿದ ಎಂದೇ ನಂಬಿದ್ದೇನೆ. ಬಾಲರಾಮನ ಕೆತ್ತನೆಯಲ್ಲಿ ನಾನೂ ಒಂದು ಸಾಧನವಷ್ಟೇ ಎಂದೇ ಭಾವಿಸಿದ್ದೇನೆ ಎಂದು ಬಾಲರಾಮನ ಕೆತ್ತನೆಯಲ್ಲಿ ತಾವು ಬಳಸಿದ್ದ ಸಣ್ಣ ಕಲ್ಲೊಂದನ್ನು ತೋರಿಸಿ, ಶ್ರೀರಾಮನಲ್ಲಿ ಭಕ್ತಿಭಾವ ಸಮರ್ಪಿಸಿದರು.

ಸಾವಿರಕ್ಕೂ ಹೆಚ್ಚು ಮಂದಿ ಭಾಗಿ: ಸಂಸ್ಕೃತ ಭಾರತಿ ಕರ್ನಾಟಕ ದಕ್ಷಿಣದ ಅಧ್ಯಕ್ಷ ಪ್ರೊ.ಪ.ನಾ.ಶಾಸ್ತ್ರಿ ಮಾತನಾಡಿ, ಮೈಸೂರಿನ ರಾಜಮನೆತನ ಮತ್ತು ಮಹಾಜನತೆ ಸಂಸ್ಕೃತ ಭಾಷೆಯನ್ನು ಶತಮಾನಗಳಿಂದ ಪೋಷಿಸುತ್ತಿದೆ. ಕರ್ನಾಟಕ ದಕ್ಷಿಣ ಪ್ರಾಂತದ ಸುಮಾರು 12 ಜಿಲ್ಲೆಗಳಿಂದ ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ತಮ್ಮದೇ ಖರ್ಚಿನಲ್ಲಿ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಸಮ್ಮೇಳನದ ಪೂರ್ವಭಾವಿಯಾಗಿ ಮೈಸೂರಿನ 15 ಕೇಂದ್ರಗಳಲ್ಲಿ 10 ದಿನಗಳ ಉಚಿತ ಸಂಸ್ಕೃತ ಸಂಭಾಷಣ ಶಿಬಿರಗಳನ್ನು ನಡೆಸಲಾಯಿತು. ಮಕರ ಸಂಕ್ರಾಂತಿಯಿಂದ ಮೈಸೂರಿನಲ್ಲಿ ಸಂಸ್ಕೃತದ ನವೋತ್ಥಾನ ಕಾಲ ಆರಂಭವಾಗಿದೆ ಎಂದು ನುಡಿದರು.

ಸಂಸ್ಕೃತ ಕಲಿಕೆಗೆ ದೇಶ–ವಿದೇಶದಲ್ಲಿ ಆಸಕ್ತಿ: ಸಂಸ್ಕೃತ ಭಾರತಿ ಅಖಿಲ ಭಾರತೀಯ ಪ್ರಧಾನ ಕಾರ್ಯದರ್ಶಿ ಸತ್ಯನಾರಾಯಣ ಭಟ್ ಮಾತನಾಡಿ, ಪ್ರಾಥಮಿಕ ಶಾಲೆಯಿಂದ ಪದವಿ ಹಂತದವರೆಗೆ ಸಂಸ್ಕೃತದ ಪಠ್ಯವು ಸಿದ್ಧವಾಗುತ್ತಿದೆ. ಸಂಸ್ಕೃತ ಕಲಿಕೆ ಆಸಕ್ತಿ ಶ್ರೀಸಾಮಾನ್ಯರಲ್ಲಿ ಹೆಚ್ಚುತ್ತಿದೆ. ದೇಶ–ವಿದೇಶಗಳಲ್ಲಿ ಸಂಸ್ಕೃತದ ಅಧ್ಯಯನಕ್ಕೆ ಹೆಚ್ಚಿನ ಬೇಡಿಕೆ ಉಂಟಾಗುತ್ತಿದೆ. ಸಂಸ್ಕೃತ ಚಳವಳಿ ಸಂಸ್ಥಾಪಕರು ದೀರ್ಘಕಾಲಿಕ ಚಿಂತನೆ ಮತ್ತು ಸಮರ್ಪಣೆ ಆಧಾರದಲ್ಲಿ ಸಂಸ್ಕೃತ ಭಾರತಿ ಸಂಘಟನೆ ಕಟ್ಟಿದ್ದಾರೆ. ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳೆಂಬ 3 ಶಕ್ತಿಗಳನ್ನು ಸಂಸ್ಕೃತದ ಕಾರ್ಯಕರ್ತರು ಸಂಪಾದಿಸಬೇಕು. ಪ್ರತಿಯೊಂದು ಮನೆಯೂ ಸಂಸ್ಕೃತದ ಗೃಹವಾಗಬೇಕು. ಈ ನಿಟ್ಟಿನಲ್ಲಿ ಸಂಸ್ಕೃತದ ಕಾರ್ಯಕ್ಕೆ ನಾವೆಲ್ಲರೂ ಕೈಜೋಡಿಸೋಣ ಎಂದು ತಿಳಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಸಂಗೀತಕ್ಕೆ ರೋಗಗಳನ್ನು ಗುಣಪಡಿಸುವ ಸಾಮರ್ಥ್ಯವಿದೆ ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ತೋರಿಸಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಪ್ರತಿನಿತ್ಯ 10 ಸಾವಿರ ಆಹಾರದ ಪೊಟ್ಟಣಗಳನ್ನು ಪೂರೈಸಿದ್ದರು. ಸಂಸ್ಕೃತ ಕಾವೇರಿ ಸಮ್ಮೇಳನಕ್ಕೆ ಎಲ್ಲಾ ವ್ಯವಸ್ಥೆಯನ್ನು ಉದಾರವಾಗಿ ಮತ್ತು ಉಚಿತವಾಗಿ ನೀಡಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಉಭಯ ಶ್ರೀಗಳಿಗೆ ಚಿರಋಣಿ ಎಂದರು. ಇದೇ ವೇಳೆ ಅರುಣ್ ಯೋಗಿರಾಜ್ ಅವರನ್ನು ಸನ್ಮಾನಿಸಲಾಯಿತು. ಸಂಸ್ಕೃತಭಾರತಿ ಕರ್ನಾಟಕ ದಕ್ಷಿಣದ ಪ್ರಾಂತ ಮಂತ್ರಿ ಗುರುರಾವ್ ಕುಲಕರ್ಣಿ, ಹಿರಿಯ ನ್ಯಾಯವಾದಿ ಅ.ಮ.ಭಾಸ್ಕರ, ಸಮ್ಮೇಳನದ ಸಂಚಾಲಕರಾದ ಡಾ.ರುಕ್ಮಾಂಗದ ಆರ್ಯ ಮತ್ತಿತರರು ಹಾಜರಿದ್ದರು.

ಸಮ್ಮೇಳನದ ನಿರ್ಣಯಗಳು...

ರಾಜ್ಯದ ಶಾಲಾ ಕಾಲೇಜುಗಳಲ್ಲಿ ಸಂಸ್ಕೃತ ಅಭ್ಯಾಸಕ್ಕೆ ಸರ್ಕಾರ ಕೂಡಲೇ ಅವಕಾಶ ಕಲ್ಪಿಸಬೇಕು. ಎಲ್ಲೆಡೆ ಸಂಸ್ಕೃತ ಶಿಕ್ಷಕರ ನೇಮಿಸಬೇಕು. ಸಂಸ್ಕೃತ ಅಕಾಡೆಮಿ ಸ್ಥಾಪನೆಯಾಗಬೇಕು. ಆ ಮೂಲಕ ಸಂಸ್ಕೃತ ಲೇಖಕರಿಗೆ ಉತ್ತೇಜನ ನೀಡಬೇಕು. ಶಾಲಾ ಕಾಲೇಜುಗಳಲ್ಲಿ ಸಂಸ್ಕೃತ ಶಿಕ್ಷಕರ ಖಾಲಿ ಸ್ಥಾನಗಳನ್ನು ಕೂಡಲೇ ಭರ್ತಿ ಮಾಡಬೇಕು. ಕನ್ನಡ ಪಂಡಿತ ಪರೀಕ್ಷೆಯು ಪುನರಾರಂಭಿಸಬೇಕು. ಸಂಸ್ಕೃತ ಪಾಠಶಾಲೆಗಳ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯಪುಸ್ತಕ–ಲೇಖನ ಸಾಮಗ್ರಿಗಳನ್ನು ಒದಗಿಸಬೇಕು. ಈ ವಿದ್ಯಾರ್ಥಿಗಳಿಗೂ ಬಿಸಿಯೂಟ ವ್ಯವಸ್ಥೆ ಕಲ್ಪಿಸಬೇಕು. ಸಂಸ್ಕೃತ ಸಲಹಾ ಸಮಿತಿ ರಚಿಸಬೇಕೆಂಬ ಬೇಡಿಕೆಗಳನ್ನು ಮುಂದಿಡಲು ನಿರ್ಣಯ ಕೈಗೊಳ್ಳಲಾಯಿತು.

ರಾಷ್ಟ್ರಪತಿ ಭವನದಲ್ಲಿ ಸಿಆರ್‌ಪಿಎಫ್ ಅಧಿಕಾರಿ ಮದುವೆ ಆಯೋಜನೆ

ವಿಶೇಷ ಅವಕಾಶ ನೀಡಿದ ದ್ರೌಪದಿ ಮುರ್ಮು



ಪೂನಂ ಗುಪ್ತಾ

ಹೊಸದಿಲ್ಲಿ, ಫೆ.2– ಇತಿಹಾಸಲ್ಲಿ ಇದೇ ಮೊದಲ ಬಾರಿಗೆ ರಾಷ್ಟ್ರಪತಿ ಭವನವು ವಿವಾಹ ಸಮಾರಂಭವನ್ನು ಆಯೋಜಿಸಲು ಮುಂದಾಗಿದೆ. ಸಿಆರ್‌ಪಿಎಫ್ ಸಹಾಯಕ ಕಮಾಂಡೆಂಟ್ ಪೂನಂ ಗುಪ್ತಾ ಅವರಿಗೆ ಫೆಬ್ರವರಿ 12ರಂದು ರಾಷ್ಟ್ರಪತಿ ಭವನದಲ್ಲಿ ವಿವಾಹವವಾಗಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅನುಮತಿ ನೀಡಿದ್ದಾರೆ ಎಂದು ವರದಿಯಾಗಿದೆ.

ಪ್ರಸ್ತುತ ರಾಷ್ಟ್ರಪತಿ ಭವನದಲ್ಲಿ ವೈಯಕ್ತಿಕ ಭದ್ರತಾ ಅಧಿಕಾರಿಯಾಗಿ (ಪಿಎಸ್‌ಒ) ನೇಮಕಗೊಂಡಿರುವ ಸಹಾಯಕ ಕಮಾಂಡೆಂಟ್ ಪೂನಂ ಗುಪ್ತಾ ಅವರು 74 ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಸಿಆರ್‌ಪಿಎಫ್‌ನ ಎಲ್ಲಾ ಮಹಿಳಾ ತುಕಡಿಯನ್ನು ಮುನ್ನಡೆಸಿದ್ದರು. ಇವರ ವಿಶಿಷ್ಟ ಸೇವೆಯಿಂದ ಪ್ರಭಾವಿತರಾದ ರಾಷ್ಟ್ರಪತಿ ದ್ರೌಪತಿ ಮುರ್ಮು ಅವರು ಮದುವೆ ಆಯೋಜಿಸಲು ಅನುಮತಿ ನೀಡಿದ್ದಾರೆ.

ಪೂನಂ ಗುಪ್ತಾ ಅವರು ಪ್ರಸ್ತುತ ಜಮ್ಮು ಮತ್ತು ಕಾಶ್ಮೀರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಆರ್‌ಪಿಎಫ್ ಸಹಾಯಕ ಕಮಾಂಡೆಂಟ್ ಅವನೀಶ್ ಕುಮಾರ್ ಅವರನ್ನು ವಿವಾಹವಾಗಲಿದ್ದಾರೆ. ರಾಷ್ಟ್ರಪತಿ ಭವನದಲ್ಲಿರುವ ಮದರ್ ತೆರೇಸಾ ಕ್ರೌನ್ ಕಾಂಪ್ಲೆಕ್ಸ್‌ನಲ್ಲಿ ಆಯೋಜಿಸಲಾಗುವ ಮದುವೆ ಕಾರ್ಯಕ್ರಮದಲ್ಲಿ ವಧು–ವರರ ಆಪ್ತ ವಲಯ ಮಾತ್ರ ಭಾಗವಹಿಸಲಿದೆ.

ಯಾರು ಈ ಸಿಆರ್‌ಪಿಎಫ್ ಅಧಿಕಾರಿ ಪೂನಂ ಗುಪ್ತಾ?: ಸಿಆರ್‌ಪಿಎಫ್ ಅಧಿಕಾರಿ ಪೂನಂ ಗುಪ್ತಾ ಅವರು ಗಣಿತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ, ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಮತ್ತು ಗ್ವಾಲಿಯರ್‌ನ ಜಿವಾಜಿ ವಿಶ್ವವಿದ್ಯಾಲಯದಿಂದ ಶಿಕ್ಷಣದಲ್ಲಿ ಪದವಿ ಬಿ.ಎಡ್ ಪದವಿ ಪಡೆದಿದ್ದಾರೆ. 2018ರ ಯುಪಿಎಸ್‌ಸಿ ಪರೀಕ್ಷೆಯಲ್ಲಿ 81ನೇ ರ‍್ಯಾಂಕ್ ಗಳಿಸಿದ್ದಾರೆ. ಬಳಿಕ ಸಿಆರ್‌ಪಿಎಫ್ ಸೇರಿ ಬಿಹಾರದ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ರಾಷ್ಟ್ರಪತಿ ಭವನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ನಾಳೆ ರಥಸಪ್ತಮಿ: ಮೈಸೂರಲ್ಲಿ ಸೂರ್ಯ ನಮಸ್ಕಾರ, ಸೂರ್ಯ ಯಜ್ಞ ಕಾರ್ಯಕ್ರಮ

ಮೈಸೂರು, ಫೆ.2(ಜಿಎ)–ಮೈಸೂರು ಯೋಗ ಒಕ್ಕೂಟದ ವಾರ್ಷಿಕೋತ್ಸವ ಮತ್ತು ರಥಸಪ್ತಮಿ ಪ್ರಯುಕ್ತ ಫೆ.4 ರಂದು ಬೆಳಗ್ಗೆ 5.45ಕ್ಕೆ ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಸಾಮೂಹಿಕ 108 ಸೂರ್ಯ ನಮಸ್ಕಾರ ಹಾಗೂ ಸೂರ್ಯ ಯಜ್ಞ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಅಧ್ಯಕ್ಷ ಕೆ.ಜಿ.ದೇವರಾಜು ಈ ವಿಷಯ ತಿಳಿಸಿ, ಅಂದಿನ ಕಾರ್ಯಕ್ರಮವನ್ನು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ಉದ್ಘಾಟಿಸುವರು. ಒಕ್ಕೂಟದ ಗೌರವಾಧ್ಯಕ್ಷ ಡಾ.ಎ.ಎಸ್.ಚಂದ್ರಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಸುಮಾರು 500 ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದ್ದು, ಎಲ್ಲರಿಗೂ ಪ್ರಮಾಣಪತ್ರ ಹಾಗೂ ಉಚಿತ ಟೀ ಶರ್ಟ್ ವಿತರಿಸಲಾಗುವುದು. ಯೋಗಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಗೌರವಾಧ್ಯಕ್ಷ ಟಿ.ಜಲೇಂದ್ರಕುಮಾರ್, ಡಾ.ಬಿ.ಪಿ.ಮೂರ್ತಿ, ಶಿವಪ್ರಕಾಶ್, ನರಸಿಂಹ ಉಪಸ್ಥಿತರಿದ್ದರು.

ಸಂಸ್ಕೃತಿ ಉಳಿಸಲು ಎಲ್ಲರೂ ಮುಂದಾಗಬೇಕು

ಶಾಸಕ ಟಿ.ಎಸ್.ಶ್ರೀವತ್ಸ ಕರೆ



10ನೇ ವರ್ಷದ ಶ್ರೀ ಮಧ್ವ ಪುರಂದರೋತ್ಸವದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಸಂಸ್ಕೃತ ಉಪನ್ಯಾಸಕ ಡಾ.ಬೆ.ನ.ವಿಜಯೇಂದ್ರಾಚಾರ್, ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಎನ್.ಆರ್ ಮಂಜುನಾಥ್ ಸೇರಿದಂತೆ ಇತರರಿದ್ದರು.

ಮೈಸೂರು, ಫೆ.2(ಎಸ್‌ಪಿಎನ್)– ನಮ್ಮ ಸಂಸ್ಕೃತಿ ನಶಿಸುತ್ತಿರುವ ಕಾಲಘಟ್ಟದಲ್ಲಿ ಸಂಸ್ಕೃತಿ ಉಳಿಸುವ ಕಾರ್ಯಕ್ಕೆ ನಾವು–ನೀವೆಲ್ಲರೂ ಮುಂದಾಗಬೇಕು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟರು.

ಮೈಸೂರು ನಂಜುಮಳಿಗೆಯ ಗೋಪಾಲಸ್ವಾಮಿ ವಿದ್ಯಾಸಂಸ್ಥೆ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀಗೌರಿ ಸಂಗೀತ ಶಾಲೆ ಸಹಯೋಗದೊಂದಿಗೆ ಆಯೋಜಿಸಿದ್ದ 10ನೇ ವರ್ಷದ ಶ್ರೀ ಮಧ್ವ ಪುರಂದರೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನಮ್ಮ ಸಂಸ್ಕೃತಿ ನಶಿಸಿ ಹೋಗುತ್ತಿರುವ ಕಾಲಘಟ್ಟದಲ್ಲಿ ಸಂಸ್ಕೃತಿ ಉಳಿಸುವ ಕೆಲಸಕ್ಕೆ ಶ್ರೀಗೌರಿ ಸಂಗೀತ ಶಾಲೆಯ ಪದಾಧಿಕಾರಿಗಳು ಶ್ರಮಿಸುತ್ತಿರುವುದು ಅತ್ಯಂತ ಶ್ಲಾಘನೀಯ. ನಮ್ಮ ಸಂಸ್ಕೃತಿ ಇಂದಿಗೂ ಉಳಿದಿರುವುದು ಮಠ–ಮಾನ್ಯಗಳು ಹಾಗೂ ಕೆಲವು ಸಂಘ ಸಂಸ್ಥೆಗಳಿಂದ ಮಾತ್ರ ಎಂದು ತಿಳಿಸಿದರು.

ಬಳಿಕ ಶ್ರೀ ಗೌರಿ ಸಂಗೀತ ಶಾಲೆ ಏರ್ಪಡಿಸಿದ್ದ ಸಂಗೀತ ಸ್ಪರ್ಧೆಯಲ್ಲಿ ಜೂನಿಯರ್ ವಿಭಾಗದಿಂದ ಭಾವನ(ಪ್ರ), ಸುಗೋಷ್(ದ್ವಿ), ಸಂಜನ(ತೃ), ಆಯುಷಿ ಸಂತೋಷ್, ಧನ್ಯಾ ಜಿ.ರಾವ್ ಅವರಿಗೆ ಬಹುಮಾನ ವಿತರಿಸಲಾಯಿತು. ಸೀನಿಯರ್ ವಿಭಾಗದಲ್ಲಿ ಭೂಮಿಕಾ ಅರುಣ್(ಪ್ರ), ಹೆಚ್.ಜಿ.ರಶ್ಮಿ(ದ್ವಿ), ಸಿಂಚನಾ ಬಾರದ್ವಜ್(ತೃ), ಹರಿಣಿ, ಪಿ.ಸೌಮ್ಯ ಬಹುಮಾನ ವಿತರಿಸಲಾಯಿತು. ಭಜನಾ ಮಂಡಳಿ ವಿಭಾಗದಲ್ಲಿ ವಾಗೀಶ್ವರಿ ಭಜನಾ ಮಂಡಳಿ(ಪ್ರ), ಲಹರಿ ಭಜನಾ ಮಂಡಳಿ(ದ್ವಿ), ಸೀತಾರಾಮ ಭಜನಾ ಮಂಡಳಿ (ತೃ), ನಿಂಬುಜಾದೇವಿ, ಚಿಗುರು ಭಜನಾ ಮಂಡಳಿಗೆ ಬಹುಮಾನ ವಿತರಿಸಲಾಯಿತು. ಸಬ್ ಜೂನಿಯರ್ ವಿಭಾಗದಲ್ಲಿ ವಿ.ಅಕ್ಷರ, ಆಚಾರ್ಯ, ಬಿ.ವಿ.ನೀಲ, ಎ.ಪ್ರೇರನಾ, ಶ್ರೀಹಾನ್ ಕರ್ವೆ, ಲಕ್ಷಣಕುಲಕರ್ಣಿ ಅವರಿಗೆ ಬಹುಮಾನ ವಿತರಿಸಲಾಯಿತು.

ಈ ವೇಳೆ ಸಂಸ್ಕೃತ ಉಪನ್ಯಾಸಕ ಡಾ.ಬೆ.ನ.ವಿಜಯೇಂದ್ರಾಚಾರ್, ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಎನ್.ಆರ್ ಮಂಜುನಾಥ್, ಪಿಟೀಲು ವಾದಕ ವಿ.ಅಂಬಾಪ್ರಸಾದ್, ಶ್ರೀ ಗೌರಿ ಸಂಗೀತ ಶಾಲೆ ಮುಖ್ಯಸ್ಥೆ ರಮಾಮಣಿ ಗುರುಪ್ರಸಾದ್ ಉಪಸ್ಥಿತರಿದ್ದರು.

ಕನ್ನಡ ಬರೆಯಲು ತಡಕಾಡಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ!

ಕೊಪ್ಪಳ, ಫೆ2– ಕೊಪ್ಪಳ ಜಿಲ್ಲೆಯ ಕಾರಟಗಿ ತಾಲೂಕಿನ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದ್ದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿಯವರು ಅಂಗನವಾಡಿಯಲ್ಲಿನ ಬೋರ್ಡ್ ಮೇಲೆ ಕನ್ನಡ ಬರೆಯಲು ಹೋಗಿ ತಪ್ಪಾಗಿ ಬರೆದಿದ್ದಾರೆ. ಆನಂತರ, ಜೊತೆಯಲ್ಲಿದ್ದ ಅಧಿಕಾರಿಗಳು ಅವರ ಬರಹದಲ್ಲಿನ ತಪ್ಪುಗಳನ್ನು ಗಮನಿಸಿದಾಗ ಅವರು ಆ ತಪ್ಪನ್ನು ತಿದ್ದಲು ಗೊತ್ತಾಗದೇ ತಡಕಾಡಿದ್ದಾರೆ. ಈ ವಿಡಿಯೋ ಫೆ2ರಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಕಾರಟಗಿಯ ಅಂಗನವಾಡಿ ಶಾಲೆಯಲ್ಲಿನ ಕಾರ್ಯಕ್ರಮವೊಂದಕ್ಕೆ ಭೇಟಿ ನೀಡಿದ್ದ ಸಚಿವರು, ಕಾರ್ಯಕ್ರಮ ಮುಗಿಸಿಕೊಂಡು ತರಗತಿಯೊಂದಕ್ಕೆ ಹೋಗಿ ಅಲ್ಲಿ ವಿದ್ಯಾರ್ಥಿಗಳನ್ನು ಮಾತನಾಡಿಸಿದರು. ಆ ವೇಳೆ, ತರಗತಿಯಲ್ಲಿನ ಬೋರ್ಡ್ ಮೇಲೆ 'ಕಾರಟಗಿ ಅಂಗನವಾಡಿ ಕೇಂದ್ರ', ಜೆ.ಪಿ.ನಗರ, ಉದ್ಘಾಟನಾ ಸಮಾರಂಭ ಎಂದು ಬರೆಯಲಾಗಿತ್ತು. ಈ ಮೂರೂ ವಾಕ್ಯಗಳು ನಂತರ ನಾಲ್ಕನೇ ವಾಕ್ಯವಾಗಿ, ಶುಭವಾಗಲಿ ಎಂದು ಬರೆಯಲು ಸಚಿವರು ಮುಂದಾದರು.

ಕೈಯ್ಯಲ್ಲಿ ಚಾಕ್ ಪೀಸ್ ಹಿಡಿದು 'ಶುಭವಾಗಲಿ' ಎಂದು ಬರೆಯಲು ಹೋದ ಸಚಿವರಿಗೆ ಅದನ್ನು ಸರಿಯಾಗಿ ಬರೆಯಲು ಆಗಲೇ ಇಲ್ಲ. ಮೊದಲು 'ಶ' ಅಕ್ಷರ ಬರೆದರು. ಆನಂತರ, 'ಬ' ಅಕ್ಷರ ಬರೆದರು. ಆಗ ಪಕ್ಕದಲ್ಲಿದ್ದವರೊಬ್ಬರು, 'ಶ' ಅಕ್ಷರಕ್ಕೆ ಕೊಂಬು ಕೊಡಬೇಕು ಎಂದಾಗ, ಸಚಿವರು 'ಶ' ಅಕ್ಷರಕ್ಕೆ ಕೊಂಬು ಗೀಚಿದರು. ಅತ್ತ 'ಬ' ಅಕ್ಷರಕ್ಕೂ ತಲೆಕಟ್ಟು ಹಾಕಬೇಕು ಹಾಗೂ 'ಬ' ಅಕ್ಷರಕ್ಕೆ ಕೆಳಗೆ ಬಾಲ ಬರೆಯಬೇಕು ಎಂದು ಪಕ್ಕದಲ್ಲಿದ್ದವರು ಬಿಡಿಸಿ ಹೇಳಿದಾಗ ಸಚಿವರು ಅದನ್ನು ಪಾಲಿಸಿದರು.

ಆನಂತರ, ಶುಭ ಪದವನ್ನು ತಿದ್ದಿ ತೀಡಿ ಸರಿಯಾಗಿ ಬರೆದ ನಂತರ ಅದರ ಮುಂದೆ 'ವಾಗಲಿ' ಎಂದು ಸಚಿವರು ಸರಾಗವಾಗಿ ಬರೆದರು. ಆದರೆ, ಸ್ಟಾರ್ಟಿಂಗ್ ಟ್ರಬಲ್ ಎಂಬ ರೀತಿಯಲ್ಲಿ 'ಶುಭಾಶಯ' ಎಂಬ ಪದದ ಮೊದಲೆರಡು ಅಕ್ಷರಗಳನ್ನು ಬರೆಯುವುವಾಗ ಸಚಿವರು ಗೊಂದಲ ಕ್ಕೊಳಲಾಗಿದ್ದು ಮಾತ್ರ ನಿಜ.

ಆರೋಗ್ಯದ ಬಗ್ಗೆ ಸೋಷಿಯಲ್ ಮೀಡಿಯಾದಲ್ಲಿ ತಪ್ಪು ಮಾಹಿತಿ

ಎಚ್ಚರ ವಹಿಸುವಂತೆ ವೈದ್ಯ ಸಾಹಿತಿ ಡಾ. ನಾ.ಸೋಮೇಶ್ವರ ಸಲಹೆ



ಮೈಸೂರಿನ ರಾಮಕೃಷ್ಣ ನಗರದ ಸುಯೋಗ್ ಆಸ್ಪತ್ರೆಯಲ್ಲಿ ಭಾನುವಾರ ತಾಯಮ್ಮ ಪ್ರಕಾಶನದ 'ಸುಯೋಗ ವಾಣಿ ಮಾಸ ಪತ್ರಿಕೆ'ಯನ್ನು ವೈದ್ಯ ಸಾಹಿತಿ ಡಾ.ನಾ.ಸೋಮೇಶ್ವರ ಬಿಡುಗಡೆ ಮಾಡಿದರು.

ಮೈಸೂರು, ಫೆ.2(ಬಿಎಲ್‌ಯು)– ಆರೋಗ್ಯದ ಬಗ್ಗೆ ಸಾಮಾಜಿಕ ಮಾಧ್ಯಮ (ಸೋಷಿಯಲ್ ಮೀಡಿಯಾ)ಗಳು ತಪ್ಪು ಮಾಹಿತಿ ನೀಡುತ್ತಿದ್ದರೂ ಜನರು ಅದನ್ನೇ ಅನುಸರಿಸುತ್ತಿದ್ದಾರೆ ಎಂದು ವೈದ್ಯ ಸಾಹಿತಿ ಡಾ. ನಾ.ಸೋಮೇಶ್ವರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ರಾಮಕೃಷ್ಣ ನಗರದ ಸುಯೋಗ್ ಆಸ್ಪತ್ರೆಯಲ್ಲಿ ಇಂದು ತಾಯಮ್ಮ ಪ್ರಕಾಶನದ 'ಸುಯೋಗ ವಾಣಿ' ಮಾಸ ಪತ್ರಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಆರೋಗ್ಯ ಕುರಿತಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಶೇಕಡ 90ರಷ್ಟು ಮಾಹಿತಿ ತಪ್ಪಾಗಿರುತ್ತದೆ ಎಂದು ಹೇಳಿದರು.

ಆರೋಗ್ಯದ ಬಗ್ಗೆ ದಾರಿ ತಪ್ಪಿಸುವ ಮಾಹಿತಿಗಳೆ ಹೆಚ್ಚಾಗಿರುತ್ತದೆ. ಆದರೂ ಜನರು ಆರೋಗ್ಯ ಕುರಿತಂತೆ ಮಾಹಿತಿ ಪಡೆಯಲು ಸಾಮಾಜಿಕ ಮಾಧ್ಯಮಗಳತ್ತ ಗಮನ ಹರಿಸುತ್ತಿದ್ದಾರೆ. ಈ ಹಿನ್ನೆಲೆ ಆರೋಗ್ಯದ ಬಗ್ಗೆ ಸ್ಪಷ್ಟ ಮಾಹಿತಿ ತಿಳಿಯಲು ನಿಯತಕಾಲಿಕ ಪುಸ್ತಕಗಳನ್ನು ಓದಿ ಎಂದು ಡಾ. ಸೋಮೇಶ್ವರ ಸಲಹೆ ನೀಡಿದರು.

ಆರೋಗ್ಯಕರ ನಡವಳಿಕೆ ಅಳವಡಿಸಿಕೊಳ್ಳುವುದು ಒಂದು ಹೂಡಿಕೆ ಇದ್ದಂತೆ, ಇದರಿಂದ ನಮ್ಮ ನಡವಳಿಕೆಗೆ ನಾವೇ ಜವಾಬ್ದಾರರಾಗಿರುತ್ತೇವೆ. ಆರೋಗ್ಯಕರ ನಡವಳಿಕೆಯಿಂದ ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಸಾಧಿಸಬಹುದು ಎಂದು ಅಭಿಪ್ರಾಯಪಟ್ಟರು.

1.30 ಲಕ್ಷ ಮಂದಿ ವೈದ್ಯಕೀಯ ಪದವಿ ಪಡೆದಿದ್ದಾರೆ. ಆದರೆ ಇವರಲ್ಲಿ 150 ಮಂದಿ ಬರೆಯುವ ಹವ್ಯಾಸ ರೂಢಿಸಿಕೊಂಡಿರುವುದೇ ಹೆಚ್ಚು ಎಂದು ಅಸಮಾಧಾನ ವ್ಯಕ್ತಪಡಿಸಿದ ಡಾ.ಸೋಮೇಶ್ವರ್, ಕನ್ನಡದ ಬಗ್ಗೆ ಅಸಡ್ಡೆ ತೋರಬಾರದು. ನಮ್ಮ ಮಕ್ಕಳಿಗೆ ಕನ್ನಡ ಎಂದರೆ ಕೇವಲ ಭಾಷೆಯಲ್ಲ, ಅದು ಹೃದಯ ತುಂಬಿದ ಭಾಷೆ ಎಂದು ತಿಳಿಸಬೇಕು. ಈ ಮೂಲಕ ಕನ್ನಡ ಭಾಷೆಯ ಮಹತ್ವವನ್ನು ಮಕ್ಕಳಿಗೆ ತಿಳಿಸಬೇಕು ಎಂದು ಹೇಳಿದರು.

ಇಂಗ್ಲೀಷ್ ಭಾಷೆ ಬಗ್ಗೆ ಅರಿವಿಲ್ಲದಿದ್ದರೂ ನಮ್ಮ ಮಕ್ಕಳು ಇಂಗ್ಲಿಷ್ ಕಲಿಯಬೇಕು ಎಂಬ ಮನೋಭಾವ ಹೊಂದಿರುತ್ತೇವೆ. ಇಂಗ್ಲೀಷ್ ಭಾಷೆಯನ್ನು ಕಲಿಸೋಣ ಆದರೆ ತಾಯಿ ಭಾಷೆ ಕನ್ನಡ ಮರೆಯಬಾರದು ಎಂದು ಹೇಳಿದರು.

ಈ ವೇಳೆ ಮಾತನಾಡಿದ ಹಿರಿಯ ಪತ್ರಕರ್ತ ರವೀಂದ್ರ ಭಟ್, ಪ್ರತಿದಿನ ಪತ್ರಿಕೆ ಓದುವಂತೆ ಸಲಹೆ ನೀಡಿದರೆ, ಅದರಿಂದ ಏನು ಲಾಭವಾಗುತ್ತದೆ ಎಂದು ಕೆಲವರು ಪ್ರಶ್ನಿಸುತ್ತಾರೆ ಎಂದು ವಿಷಾದಿಸಿದರು.

'ಸುಯೋಗ ವಾಣಿ' ಮಾಸ ಪತ್ರಿಕೆ ವಿವರ ಉಲ್ಲೇಖಿಸಿದ ಅವರು, ಗಿರಿಜನರ ಹಾಡಿಗಳಲ್ಲಿ ಇಂದು ಕೂಡ ದೇಶಿ ಔಷಧಿ ಬಳಸುತ್ತಾರೆ. ಅಷ್ಟೆ ಅಲ್ಲದೆ ಅಲ್ಲೇ ಪೌಷ್ಟಿಕಾಂಶ ಆಹಾರ ಕೂಡ ದೊರೆಯುತ್ತದೆ ಎಂದು ತಿಳಿಸಿದರು.

ಸುಯೋಗ್ ಆಸ್ಪತ್ರೆ ಸಂಸ್ಥಾಪಕರೂ ಆದ ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ, ಸುಯೋಗ ವಾಣಿ ಮಾಸ ಪತ್ರಿಕೆ ಸಂಪಾದಕರಾದ ಡಾ.ಸೀಮಾ ಯೋಗಣ್ಣ, ಸಹ ಸಂಪಾದಕ ಡಾ.ಆರ್.ರಾಜೇಂದ್ರ, ಡಾ. ಸುಯೋಗ್ ಯೋಗಣ್ಣ ಹಾಗೂ ಡಾ.ಯತಿ ರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರಾಜ್ಯದ ಗ್ಯಾರಂಟಿ ಬಿಜೆಪಿಯಿಂದ ಬೇರೆ ರಾಜ್ಯಗಳಲ್ಲಿ ನಕಲು

ಡಾ. ಪುಷ್ಪಾ ಅಮರನಾಥ್ ಕಿಡಿ



ಮೈಸೂರಿನ ವಿಶ್ವಮೈತ್ರಿ ಬುದ್ಧವಿಹಾರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಗಂಗಾಧರ್ ಕಂದೇಗಾಲ ರಚನೆಯ 'ಬೆಂಕಿ ಬಿರುಗಾಳಿ' ಕೃತಿಯನ್ನು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಬಿಡುಗಡೆ ಮಾಡಿದರು

ಮೈಸೂರು, ಫೆ.2(ಎಂಟಿವೈ)– ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿರುವ ಮಹತ್ವಾಕಾಂಕ್ಷೆಯ ಗ್ಯಾರಂಟಿ ಯೋಜನೆಗಳನ್ನು ಟೀಕಿಸುತ್ತಿದ್ದ ಬಿಜೆಪಿಗರು ಇದೀಗ ಚುನಾವಣೆಯಲ್ಲಿ ರಾಜಕೀಯ ಲಾಭ ಮಾಡಿಕೊಳ್ಳಲು ಬೇರೆ ರಾಜ್ಯಗಳಲ್ಲಿ ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡುತ್ತಿವೆ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಕಿಡಿಕಾರಿದ್ದಾರೆ.

ಮೈಸೂರಿನ ಅಶೋಕ ವೃತ್ತ(ಬಲ್ಲಾಳ್ ವೃತ್ತ)ದ ಸಮೀಪವಿರುವ ವಿಶ್ವಮೈತ್ರಿ ಬುದ್ಧವಿಹಾರದಲ್ಲಿ ಭಾನುವಾರ ನಡೆದ ಗಂಗಾಧರ್ ಕಂದೇಗಾಲ ರಚನೆಯ 'ಬೆಂಕಿ ಬಿರುಗಾಳಿ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿಗರು ಗ್ಯಾರಂಟಿ ಯೋಜನೆಗಳನ್ನು ಟೀಕಿಸುವ ಮೂಲಕ ಫಲಾನುಭವಿಗಳನ್ನು ಅವಮಾನಿಸುತ್ತಿದ್ದಾರೆ. ಅಲ್ಲದೆ, ಅಪಪ್ರಚಾರ ಮಾಡುವ ಮೂಲಕ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಇದೀಗ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಬಿಜೆಪಿ ನಕಲು ಮಾಡಿ ವಿವಿಧ ರಾಜ್ಯಗಳ ಚುನಾವಣೆಯಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದೆ. ಇದನ್ನು ರಾಜ್ಯದ ಜನತೆ ಅರ್ಥ ಮಾಡಿಕೊಳ್ಳಬೇಕು. ಬಿಜೆಪಿಗರಿಂದ ರಾಜ್ಯಕ್ಕೂ, ರಾಜ್ಯದ ಜನರಿಗೂ ಪದೇ ಪದೇ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದರು.

ಗ್ಯಾರಂಟಿ ಯೋಜನೆಗಳು ಉತ್ತಮವಾಗಿ ಅನುಷ್ಠಾನವಾಗುತ್ತಿದ್ದರೂ, ಇಲ್ಲ ಸಲ್ಲದ ಅವಹೇಳನ, ಬೊಕ್ಕಸ ಬರಿದಾಗುತ್ತಿವೆ ಎಂಬ ಅಪಪ್ರಚಾರ ನಿರಂತರವಾಗಿದೆ. ಜನರಲ್ಲಿ ಯೋಜನೆ ಪ್ರಯೋಜನಗಳ ಅರಿವು ಮೂಡಿಸಲು ರಾಜ್ಯಾದ್ಯಂತ ಚರ್ಚಾ ಗೋಷ್ಠಿ ನಡೆಸಲು ಉದ್ದೇಶಿಸಲಾಗಿದೆ. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಟೀಕಿಸುವ ರಾಜ್ಯ ಬಿಜೆಪಿ ನಾಯಕರು ದೆಹಲಿ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಬಿಜೆಪಿ ಘೋಷಿಸಿರುವ ಗ್ಯಾರಂಟಿ ಭರವಸೆ ಕುರಿದಂತೆ ಮಾತನಾಡಬೇಕು ಎಂದರು.

ಇದೇ ವೇಳೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಕೃತಿ ಬಿಡುಗಡೆ ಮಾಡಿ ಮಾತನಾಡಿ, ಬೆಂಕಿ ಬಿರುಗಾಳಿ ಕೃತಿ ಹಲವು ವಿಷಯಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಈ ಭಾಗದ ದಲಿತ ನಾಯಕರ ಬಗ್ಗೆ, ರಾಜಕಾರಣದ ಬಗ್ಗೆ ಮಾಹಿತಿ ಒದಗಿಸುತ್ತದೆ. ಬೀದಿ ಹೋರಾಟಗಳಷ್ಟೇ ದೊಡ್ಡ ಶಕ್ತಿಯೂ ಕವನ, ಲೇಖನಗಳಿಗೆ ಇವೆ ಸಂವಿಧಾನವನ್ನು ಅಂಬೇಡ್ಕರ್ ಬರೆಯದೆ ಹೋಗಿದ್ದರೆ ದಲಿತರ ಬದುಕಿಗೆ ಮಾರ್ಗ ಸೂಚಿಯೇ ಇರುತ್ತಿರಲಿಲ್ಲ. ಇಂದು ಸಂವಿಧಾನ ವಿರೋಧಿ ಧೋರಣೆಯ ಕೆಲವರು ರಾಜ್ಯದಿಂದ ಸಂಸದರಾಗಿದ್ದಾರೆ. 'ಸಂವಿಧಾನವನ್ನು ಬದಲಾಯಿಸುತ್ತೇವೆ, ನಮ್ಮ ಸ್ವಾತಂತ್ರ್ಯ ದಿನವೇ ಬೇರೆ' ಎಂದು ಪ್ರಚಾರ ಮಾಡುತ್ತಿದ್ದರೂ ಸಮುದಾಯದ ಯುವಜನರು ಹೋರಟಕ್ಕಿಳಿಯುತ್ತಿಲ್ಲ. ಅರಿವಿನ ಕೊರತೆಯಿರುವ ಜನರನ್ನು ಇಂಥ ಕೃತಿಗಳು ಬಡಿದೆಚ್ಚರಿಸಲಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಮೇಯರ್ ಪುರುಷೋತ್ತಮ್ ವಹಿಸಿದ್ದರು. ಇದೇ ವೇಳೆ ಲೇಖಕ ಹರಕುಮಾರ್, ಕವಿಗಳಾದ ಹನಸೋಗೆ ಸೋಮಶೇಖರ್, ಗೋವಿಂದಸ್ವಾಮಿ ಗುಂಡಾಪುರ ಮಾತನಾಡಿದರು. ಕಾರ್ಯಕ್ರಮದಲ್ಲಿ ಬಿ.ಎಂ.ನಾಗೇಶ್ ರಾಜ್, ಪತ್ರಕರ್ತ ಸೋಮಯ್ಯ ಮಲಿಯೂರು, ಲೇಖಕ ಸಿದ್ಧಸ್ವಾಮಿ, ಬದನವಾಳ ಬಸವಣ್ಣ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ನಿನ್ನ ಹೆಸರೇನು?
ವಿದ್ಯಾರ್ಥಿ : ಪಿರಿಯಾಪಟ್ಟಣ ಶಾಮಣ್ಣ ಚಿನ್ಮಯಮೂರ್ತಿ ಸರ್.
ಮೇಷ್ಟ್ರು : ಹೆಸರು ದೊಡ್ಡದು ಚಿಕ್ಕದಾಗಿ ಹೇಳು?
ವಿದ್ಯಾರ್ಥಿ : ಪಿಶಾಚಿ

ಮೈಸೂರು ಮಿತ್ರ
ಸೋಮವಾರ, 3 ಫೆಬ್ರವರಿ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

'ಕಣ್ಣು ಚೆನ್ನಾಗಿದ್ದರೆ ನಾವು ಜಗತ್ತನ್ನು ನೋಡಬಹುದು. ನಮ್ಮ ನಾಲಿಗೆ ಮತ್ತು ಗುಣ ಶ್ರೇಷ್ಠವಾಗಿದ್ದರೆ ಜಗತ್ತೇ ನಮ್ಮನ್ನು ನೋಡುತ್ತದೆ. ಜಗತ್ತು ನಮ್ಮನ್ನು ನೋಡುವಂತೆ ಜೀವಿಸೋಣ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ದುಡಿಯುವ ಗಂಡಸು, ಬಸುರಿ ಹೆಂಗಸು ನೋಡಲು ಚೆಂದ'

ನಿಮ್ಮ ಪತ್ರಗಳು

ಕನ್ನಡ ಕ್ರಿಯಾ ಸಮಿತಿಯ ಅರ್ಜಿ ಏನಾಯ್ತು!

ಮಾನ್ಯರೇ,

ಮಾನ್ಯ ಮುಖ್ಯಮಂತ್ರಿಗಳು ಭುವನೇಶ್ವರಿ ಪ್ರತಿಮೆಯ ಅನಾವರಣದ ಸಂದರ್ಭದಲ್ಲಿ ಕನ್ನಡ ಹೋರಾಟಗಾರರ ಮೇಲಿನ ದಾವೆಯನ್ನು ಅರ್ಜಿ ಸಲ್ಲಿಸಿದರೆ ಹಿಂತೆಗೆದು ಕೊಳ್ಳುವುದಾಗಿ ಹೇಳಿರುವುದು ಸ್ವಾಗತಾರ್ಹವಾದರೂ ಪೊಲೀಸ್ ಇಲಾಖೆಯ ಅಧಿಕಾರಿಗಳು 'ಮುಖ್ಯಮಂತ್ರಿಗಳ ಆಶಯ'ಕ್ಕೆ ಪೂರಕವಾಗಿ ಸ್ಪಂದಿಸುತ್ತಿಲ್ಲ.

ಕನ್ನಡ ಕ್ರಿಯಾ ಸಮಿತಿ ಸದಸ್ಯರ ಮೇಲೆ ಕಳೆದ ಏಳು ವರ್ಷಗಳಿಂದ ಎರಡು ಪ್ರಕರಣಗಳ ವಿಚಾರಣೆ ನಡೆಯುತ್ತಲೇ ಇದೆ. ನ್ಯಾಯಾಲಯಕ್ಕೆ ತಿಂಗಳಿಗೊಮ್ಮೆ ಅಲೆದಾಡುವುದು ನಡೆಯುತ್ತಲೇ ಇದೆ. ಹಿರಿಯ ಹೋರಾಟಗಾರ ದಿವಂಗತ ಪ.ಮಲ್ಲೇಶ್ ಅವರು 'ನಾವೇಕೆ ಅರ್ಜಿ ಸಲ್ಲಿಸಬೇಕು, ಬೇಕಿದ್ದರೆ ಸರ್ಕಾರವೇ ಪ್ರಕರಣವನ್ನು ಹಿಂದೆ ತೆಗೆದುಕೊಳ್ಳಲಿ' ಎಂದು ಪ್ರತಿಪಾದಿಸಿದ್ದರಿಂದ ನಾವು ಅರ್ಜಿಯನ್ನು ಸಲ್ಲಿಸಲೇ ಇಲ್ಲ. ಆದರೆ ಅವರು ಕಾಲವಾದ ಮೇಲೆ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆದ ನಂತರ ಕನ್ನಡ ಹೋರಾಟಗಾರರ ಮೇಲಿನ ಪ್ರಕರಣವನ್ನು ಹಿಂತೆಗೆದುಕೊಳ್ಳುತ್ತೇವೆ ಎಂದು ಪ್ರಕಟಿಸಿದಾಗ ಕ್ರಿಯಾ ಸಮಿತಿಯ ಪರವಾಗಿ ಅರ್ಜಿಯನ್ನು ಕಳೆದ ಜನವರಿಯಲ್ಲಿ ಸಲ್ಲಿಸಲಾಗಿತ್ತು.

ಅದು ಮುಖ್ಯಮಂತ್ರಿಯ ಕಚೇರಿಯಿಂದ ಗೃಹ ಇಲಾಖೆ ಕಾರ್ಯದರ್ಶಿಗಳಿಗೆ 15 ದಿನಗಳಲ್ಲಿ ರವಾನೆಯಾಗಿದೆ. ಆದರೆ ಈವರೆಗೆ ಮುಂದೇನಾಯಿತು ಎಂಬ ಬಗ್ಗೆ ಮಾಹಿತಿಯೂ ಇಲ್ಲ, ಪ್ರಕರಣವನ್ನು ಹಿಂಪಡೆಯಲಾಗಿಲ್ಲ. ಬಹುಶಃ ನಮ್ಮ ಅರ್ಜಿ ಆಮೆ ವೇಗದಲ್ಲಿ ಸಾಗುತ್ತಿರಬೇಕು. ಆಮೆ ವೇಗದಲ್ಲಿ ಸಾಗಿದ್ದರೂ ಬೀದರ್‌ಗೆ ಹೋಗಿ ಬರಬಹುದಿತ್ತು. ಆದರೆ ಈ ಅರ್ಜಿ ಬೆಂಗಳೂರಿನ ಒಂದು ಕಚೇರಿಯಿಂದ ಇನ್ನೊಂದು ಕಚೇರಿಗೆ ತೆರಳಿದೆಯೋ ಇಲ್ಲವೋ ತಿಳಿಯದು. ಮುಖ್ಯಮಂತ್ರಿಗಳಿಂದ ಬಂದ ಪತ್ರಗಳಿಗೂ ಇಲಾಖೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ.

ಕನ್ನಡ ಕ್ರಿಯಾ ಸಮಿತಿ ಕನ್ನಡ ಮಾಧ್ಯಮದ ವಿಷಯದಲ್ಲಿ ಮುಖ್ಯಮಂತ್ರಿಗಳಿಗೆ ಕೊಟ್ಟ ಮನವಿಗೆ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಅದೇ ರೀತಿ ಈವರೆಗೆ ಸ್ಪಂದಿಸಿಲ್ಲ. ಅಧಿಕಾರಶಾಹಿಯನ್ನು ಮುಖ್ಯಮಂತ್ರಿಗಳು ಉತ್ತರದಾಯಿ ಮಾಡದಿದ್ದರೆ ಅವರ ಸದುದ್ದೇಶ ಮತ್ತು ಬದ್ಧತೆಗಳು ಅರ್ಥ ಕಳೆದುಕೊಳ್ಳುತ್ತೇವೆ. ಇಲ್ಲದಿದ್ದರೆ ಸಾರ್ವಜನಿಕರ ಮನವಿಗಳಿಗೆ ಮುಖ್ಯಮಂತ್ರಿಗಳು ಕೇವಲ 'ರವಾನೆ ಗುಮಾಸ್ತ' ರಾಗುತ್ತಾರೆ. ಹಾಗಾಗಬಾರದು ಎಂಬುದು ಕ್ರಿಯಾ ಸಮಿತಿ ಆಶಯ.

– ಸ.ರ. ಸುದರ್ಶನ, ಪ್ರಧಾನ ಕಾರ್ಯದರ್ಶಿ, ಕನ್ನಡ ಕ್ರಿಯಾ ಸಮಿತಿ, ಮೈಸೂರು

ವಿಜಯನಗರ 4ನೇ ಹಂತದಲ್ಲಿ ನೀರಿನ ಕೊರತೆ

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತ, 2ನೇ ಘಟ್ಟದಲ್ಲಿರುವ ಮನೆಗಳಿಗೆ ನೀರು ಸರಬರಾಜು ಮಾಡಲು 2 ಬೋರ್‌ವೆಲ್‌ಗಳಿದ್ದು ಯಾವುದೇ ಒಂದು ಬೋರ್‌ವೆಲ್ ಕೆಟ್ಟು ಹೋದರೂ 5 ರಿಂದ 10 ದಿನಗಳು ನೀರು ಬಿಡುವುದಿಲ್ಲ. ಈ ಬಾರಿ ಡಿ. 15 ರಿಂದ ಜ. 15ರವರೆಗೆ ಅಂದರೆ ಒಂದು ತಿಂಗಳು ನೀರು ಬಿಡದೆ ಬಡಾವಣೆ ನಿವಾಸಿಗಳು ಹಣ ಕೊಟ್ಟು ಟ್ಯಾಂಕರ್ ನೀರು ಹಾಕಿಸಿಕೊಂಡಿದ್ದಾರೆ. ಒಂದು ಬೋರ್‌ವೆಲ್ ಕೆಟ್ಟು ಹೋಗಿ ಮೋಟರ್ 70 ಅಡಿಯಲ್ಲಿ ಸಿಕ್ಕಿಕೊಂಡ ಕಾರಣ ಅದನ್ನು ತೆಗೆಯಲು ಸಾಧ್ಯವಾಗದೇ ಹೊಸ ಮೋಟರ್ ಅನ್ನು 70 ಅಡಿವರೆಗೆ ಮಾತ್ರ ಇಳಿಸಿದ್ದಾರೆ. 140 ಅಡಿ ಇಳಿಸಬೇಕಾದ ಮೋಟರ್ ಅನ್ನು 70 ಅಡಿವರೆಗೆ ಮಾತ್ರ ಇಳಿಸಲು ಸಾಧ್ಯವಾದ ಕಾರಣ ಅಗತ್ಯ ಪ್ರಮಾಣದಲ್ಲಿ ನೀರು ಸಿಗುತ್ತಿಲ್ಲ.

ಬೋರ್‌ವೆಲ್‌ಗಳು ಆಗಾಗ್ಗೆ ದುರಸ್ತಿಗೆ ಬರುತ್ತಿರುವ ಕಾರಣ ಪರ್ಯಾಯವಾಗಿ ಇನ್ನೂ 2 ಬೋರ್‌ವೆಲ್‌ಗಳನ್ನು ಕೊರೆಸುವಂತೆ ಶಾಸಕರಿಗೆ, ಮುಡಾ ಆಯುಕ್ತರಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಬೇಸಿಗೆ ಬಂದರಂತೂ ಬೋರ್‌ವೆಲ್‌ಗಳು ಬತ್ತಿ ಹೋಗುತ್ತವೆ. ಈ ಹಿನ್ನೆಲೆಯಲ್ಲಿ ಈ ಮನೆಗಳಿಗೆ 2 ಬೋರ್‌ವೆಲ್‌ಗಳ ಅವಶ್ಯಕತೆ ಇದ್ದು, ಬೇಸಿಗೆ ಬರುವುದರೊಳಗೆ ತುರ್ತಾಗಿ 2 ಬೋರ್‌ವೆಲ್ ಕೊರೆಸಿ ಮೋಟರ್ ಅಳವಡಿಸಬೇಕಾಗಿ ಈ ಮೂಲಕ ಮನವಿ.

– ಬಿ.ಜಿ. ರಂಗೇಗೌಡ, ವಿಜಯನಗರ 4ನೇ ಹಂತ, ಮೈಸೂರು.

ಮಾರಿಕಣ್ಣು ಹಸು ಮೇಲೆ!

ಮಾನ್ಯರೆ,

'ಮಾರಿ ಕಣ್ಣು ಹೋರಿ ಮ್ಯಾಲೆ' ಎಂಬುದು ಪ್ರಸಿದ್ಧ ನಾಣ್ಣುಡಿ. ರಾಜ್ಯದಲ್ಲಿ ಇತ್ತೀಚೆಗೆ ಹಸುಗಳ ಮೇಲೆ ನಡೆಸಲಾಗುತ್ತಿರುವ ಪೈಶಾಚಿಕ ಕೃತ್ಯಗಳನ್ನು ನೋಡಿದ ಮೇಲೆ ಈ ಮಾತನ್ನು 'ಮಾರಿ ಕಣ್ಣು ಹಸು ಮೇಲೆ' ಎಂದು ಬದಲಾಯಿಸುವ ಕಾಲ ಬಂದಿದೆ.

ಇತ್ತೀಚೆಗೆ ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ, ತಾನು ಕಸ ಕಡ್ಡಿ ತಿಂದರೂ ಸಹ ಜನರಿಗೆ ಅಮೃತಕ್ಕೆ ಸಮಾನವಾದ ಹಾಲನ್ನು ನೀಡುತ್ತಿದ್ದ ಗೋವೊಂದರ ಕೆಚ್ಚಲನ್ನು ಕತ್ತರಿಸಿ, ದುಷ್ಕರ್ಮಿಗಳು ತಮ್ಮ ವಿಕೃತಿ ಮೆರೆದಿದ್ದರು. ಇದರ ಬೆನ್ನಲ್ಲೇ, ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಸ್ಥಾನಕ್ಕೆ ಹರಕೆ ರೂಪದಲ್ಲಿ ಬಿಟ್ಟಿದ್ದ ಹಸುವಿನ ಬಾಲ ಕತ್ತರಿಸಿ, ಚಿತ್ರಹಿಂಸೆ ನೀಡಿದ ಪ್ರಕರಣ ಬೆಳಕಿಗೆ ಬಂದಿದೆ. ನಂತರ ಈಗ ಹೊನ್ನಾವರ ತಾಲೂಕಿನ ಸಾಲ್ಕೊಂಡ ಗ್ರಾಮದಲ್ಲಿ ಗಬ್ಬದ ಆಕಳೊಂದನ್ನು ಕಡಿದು, ಗರ್ಭದಿಂದ ಕರು ತೆಗೆದು ಬಿಸಾಡಿ, ಮಾಂಸವನ್ನು ಹೊತ್ತೊಯ್ದ ಅಮಾನವೀಯ ಹಾಗೂ ಅಮಾನುಷ ಕೃತ್ಯ ವರದಿಯಾಗಿದೆ.

ಗೋವುಗಳ ಮೇಲೆ ನಡೆಸಲಾಗುತ್ತಿರುವ ಈ ಸರಣಿ ಹಿಂಸಾಚಾರ ರಾಜ್ಯದಲ್ಲಿ ತಲ್ಲಣವನ್ನು ಉಂಟುಮಾಡಿದೆ. ಭಾರತೀಯರಾದ ನಾವು ಗೋವನ್ನು ದೇವರೆಂದು ಭಾವಿಸಿ ಪೂಜಿಸಿ ಆರಾಧಿಸುತ್ತೇವೆ. ಗೋವಿನಲ್ಲಿ 33 ಕೋಟಿ ದೇವತೆಗಳು ಇದ್ದಾರೆಂಬ ನಂಬಿಕೆ ನಮ್ಮದಾಗಿದೆ. ಗೋವುಗಳನ್ನು ಹಿಂಸಿಸುವುದೂ ಒಂದೇ, ಹೆತ್ತ ತಾಯಿಯ ಮೇಲೆ ಅತ್ಯಾಚಾರ ನಡೆಸುವುದೂ ಒಂದೇ. ಇಂತಹ ನೀಚ ಕೃತ್ಯಗಳಲ್ಲಿ ತೊಡಗಿರುವ ವಿಕೃತ ಮನಸ್ಸಿನ ಅಧಮರನ್ನು ರಾಜ್ಯದ ಪೊಲೀಸರು ಸಾಧ್ಯವಾದಷ್ಟು ಬೇಗ ಬಂಧಿಸಿ, ಇವರ ವಿರುದ್ಧ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕು.

– ಕೆ.ವಿ.ವಾಸು, ವಿವೇಕಾನಂದ ನಗರ, ಮೈಸೂರು.

ಜವರೇಗೌಡ ಪಾರ್ಕ್ ಅವ್ಯವಸ್ಥೆ ಸರಿಪಡಿಸಿ

ಮಾನ್ಯರೆ,

ಮೈಸೂರಿನ ಸರಸ್ವತಿಪುರಂನಲ್ಲಿರುವ ಕೆ.ಜವರೇಗೌಡ ಪಾರ್ಕ್ ಕಳೆದ ಐದು ವರ್ಷಗಳ ಹಿಂದೆ ಮೈಸೂರಿನಲ್ಲೇ ಅತ್ಯಂತ ಸುಂದರ ಪಾರ್ಕ್ ಎನಿಸಿಕೊಂಡಿತ್ತು. ಆದರೆ ಇತ್ತೀಚೆಗೆ ಅಲ್ಲಲ್ಲಿ ಕಸ-ಕಡ್ಡಿಗಳಿಂದ ತುಂಬಿಹೋಗಿದೆ, ಮುರಿದ ಬೆಂಚುಗಳಿವೆ. ಎಲ್ಲಕ್ಕಿಂತ ಮುಖ್ಯವಾಗಿ ಕಳೆದ ಎರಡು ವರ್ಷಗಳ ಹಿಂದೆಯೇ ಸಾರ್ವಜನಿಕರ ಉಪಯೋಗಕ್ಕೆ ಕಟ್ಟಲಾದ ಸಾರ್ವಜನಿಕ ಶೌಚಾಲಯಕ್ಕೆ ಬೀಗ ಹಾಕಲಾಗಿದೆ. ಇದು ಈ ಪಾರ್ಕ್‌ನಲ್ಲಿ ತೋರಿಕೆಗಾಗಿ ಇದೆ ಎನಿಸುತ್ತಿದೆ. ಈ ಶೌಚಾಲಯದ ಬೀಗವನ್ನು ತೆಗೆಸುವ ಕೆಲಸವನ್ನು ಯಾವ ಜನಪ್ರತಿನಿಧಿಗಳು ಮಾಡಲಿಲ್ಲ. ಒಟ್ಟಿನಲ್ಲಿ ಪಾರ್ಕ್ ಅವ್ಯವಸ್ಥೆಗಳ ತಾಣವಾಗಿದ್ದು, ಸಂಬಂಧಪಟ್ಟ ಪಾಲಿಕೆ ಕಣ್ಮುಚ್ಚಿ ಕುಳಿತಿದೆ. ಮೈಸೂರು ನಗರ ಪಾಲಿಕೆಯ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.

– ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು.

ಕೆರೆಗಳ ನುಂಗಿ ನೀರು ಕುಡಿದರಣ್ಣಾ





ಮಿರ್ಲೆ ಚಂದ್ರಶೇಖರ
ಮೊ: 9916129654

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ದಾಖಲೆಯಂತೆ ಬೆಂಗಳೂರು ನಗರದಲ್ಲಿರುವ ಕೆರೆಗಳ ಸಂಖ್ಯೆ 211. ಇವುಗಳು ಕೆಲವು ವರ್ಷಗಳ ಹಿಂದಿನವರೆಗೂ ನಗರಕ್ಕೆ ನೀರಿನ ಪೂರೈಕೆಯ ತಾಣಗಳಾಗಿದ್ದವು. ಈಗ ಬೆಂಗಳೂರು ಜಲಮಂಡಳಿಯು ಕಾವೇರಿ–ಕಬಿನಿ ನದಿಗಳ ನೀರನ್ನು ಪಂಪ್ ಮಾಡುವ ಮೂಲಕ ಜನರಿಗೆ ಸರಬರಾಜು ಮಾಡುತ್ತಿದೆ. ಕಾವೇರಿ ಆರನೇ ಹಂತವು ಪರಿಪೂರ್ಣವಾಗಿ ಅನುಷ್ಠಾನ ಆದಾಗ ಬೆಂಗಳೂರು ನಗರಕ್ಕೆ 35 ಟಿಎಂಸಿಯಷ್ಟು ನೀರನ್ನು ಸರಬರಾಜು ಮಾಡುವ ಸಾಮರ್ಥ್ಯದ ಗುರಿ ಸಾಧಿಸುತ್ತದೆ.

ಬೃಹತ್ ಜಲಾಶಯಗಳು ಹಾಗೂ ಕೊಳವೆ ಬಾವಿಗಳು ಇಲ್ಲದಿದ್ದ ಕಾಲದಲ್ಲಿ ಜನರ ಜೀವ ನಾಡಿಯಾಗಿ ಇದ್ದವುಗಳೆಂದರೆ ಊರು ಮುಂದಿನ ಕೆರೆಗಳು. ಕೆರೆಗಳು (Tanks) ಹಾಗೂ ತೆರೆದ ಬಾವಿಗಳು (Open wells) ನಿತ್ಯದ ನೀರಿನ ಅವಶ್ಯಕತೆಗಳನ್ನು ಪೂರೈಸುತ್ತಿದ್ದವು. ಕೆರೆ, ಕಲ್ಯಾಣಿ ಹಾಗೂ ಬಾವಿಗಳ ಇತಿಹಾಸ ಪುರಾತನವಾದದ್ದು, ಚಿತ್ರದುರ್ಗದಿಂದ ಮೂರು ಕಿ.ಮೀ. ದೂರದಲ್ಲಿರುವ ಚಂದ್ರವಳ್ಳಿ ಕೆರೆಯು ಇದನ್ನು ಪುಷ್ಟೀಕರಿಸುತ್ತದೆ. ಬನವಾಸಿ ರಾಜ್ಯದ ಸಂಸ್ಥಾಪಕ ಮಯೂರ ವರ್ಮನು ಕ್ರಿ.ಶ.350ರ ಆಸುಪಾಸಿನಲ್ಲಿ ಚಂದ್ರವಳ್ಳಿ ಕೆರೆಯನ್ನು ನಿರ್ಮಿಸಿದನು. 1996ರಲ್ಲಿ ಒಮ್ಮೆ ಚಿತ್ರದುರ್ಗದ ಕಲ್ಲುಗುಡ್ಡಗಳಡಿಯ ಸುಂದರ ಕೆರೆಗೆ ಭೇಟಿ ನೀಡಿದ್ದೆ. ತನ್ನ ಅಸ್ತಿತ್ವನ್ನು ಕಳೆದುಕೊಳ್ಳುತ್ತಿದ್ದ ಕೆರೆಯನ್ನು ಪುನರುಜ್ಜೀವನಗೊಳಿಸಿ ಉಪಯೋಗವಾಗುವಂತೆ ಮಾಡಲಾಗಿದೆ. ಕದಂಬ ರಾಜವಂಶಸ್ಥರು ಕೆರೆಗಳಿಗೆ ಒತ್ತು ಕೊಟ್ಟಿರುವುದನ್ನು ಶಾಸನಗಳಲ್ಲಿ ಕಾಣಬಹುದಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಕೆರೆಗಳ ಸಂಖ್ಯೆಯೂ ಗಣನೀಯವಾಗಿ ಕುಸಿದಿದೆ. ಸಣ್ಣ ನೀರಾವರಿ ಇಲಾಖೆಯ ಅಂಕಿ–ಅಂಶಗಳ ಅನುಸಾರ ರಾಜ್ಯದಲ್ಲಿ ಮೂವತ್ತಾರು ಸಾವಿರಕ್ಕಿಂತಲೂ ಹೆಚ್ಚು ಕೆರೆಗಳಿವೆ. ಕೆರೆಗಳ ಸಂರಕ್ಷಣಾ ಹಾಗೂ ಅಭಿವೃದ್ಧಿ ಪ್ರಾಧಿಕಾರ ಇದ್ದಾಗ್ಯೂ ಅಕ್ರಮವಾಗಿ ಒತ್ತುವರಿಯು ನಗರಗಳು ಸುತ್ತುವರಿದಿರುವ ಕೆರೆ, ಕೆರೆಗಳನ್ನು ಸಂಪರ್ಕಿಸುವ ರಾಜಕಾಲುವೆ ಹಾಗೂ ಪೋಷಕ ಕಾಲುವೆಗಳಲ್ಲಿ ನಡೆಯುತ್ತಲೇ ಇದೆ. ಮಹಾನಗರ ಬೆಂಗಳೂರಿನಲ್ಲಿ ಇದೊಂದು ದೊಡ್ಡ ಸಮಸ್ಯೆ, ರಾಜಕಾಲುವೆಗಳ ಒತ್ತುವರಿಯಿಂದಾಗಿ ಮಳೆಗಾಲದಲ್ಲಿ ರಸ್ತೆಗಳು ನದಿಗಳಾಗಿ ಜೀವ ತಳೆಯುತ್ತವೆ, ಜೋರು ಮಳೆ ಬಂತೆಂದರೆ ಬಡಾವಣೆ ನಿವಾಸಿಗಳು ನಿದ್ರೆ ಇಲ್ಲದೆ ಮನೆಯೊಳಗಿನ ನೀರನ್ನು ಹಿಡಿಶಾಪ ಹಾಕುತ್ತಾ ಹೊರಹಾಕುವುದು ತಪ್ಪುವುದಿಲ್ಲ, ಆದರೆ ನಮ್ಮ ತಪ್ಪಿನಿಂದಾಗಿಯೇ ಉದ್ಭವಿಸಿರುವ ಸಮಸ್ಯೆ ಎನ್ನುವುದನ್ನು ಮರೆತಿರುತ್ತಾರೆ.

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ದಾಖಲೆಯಂತೆ ಬೆಂಗಳೂರು ನಗರದಲ್ಲಿರುವ ಕೆರೆಗಳ ಸಂಖ್ಯೆ 211. ಇವುಗಳು ಕೆಲವು ವರ್ಷಗಳ ಹಿಂದಿನವರೆಗೂ ನಗರಕ್ಕೆ ನೀರಿನ ಪೂರೈಕೆಯ ತಾಣಗಳಾಗಿದ್ದವು. ಈಗ ಬೆಂಗಳೂರು ಜಲಮಂಡಳಿಯು ಕಾವೇರಿ–ಕಬಿನಿ ನದಿಗಳ ನೀರನ್ನು ಪಂಪ್ ಮಾಡುವ ಮೂಲಕ ಜನರಿಗೆ ಸರಬರಾಜು ಮಾಡುತ್ತಿದೆ. ಕಾವೇರಿ ಆರನೇ ಹಂತವು ಪರಿಪೂರ್ಣವಾಗಿ ಅನುಷ್ಠಾನ ಆದಾಗ ಬೆಂಗಳೂರು ನಗರಕ್ಕೆ 35 ಟಿಎಂಸಿಯಷ್ಟು ನೀರನ್ನು ಸರಬರಾಜು ಮಾಡುವ ಸಾಮರ್ಥ್ಯದ ಗುರಿ ಸಾಧಿಸುತ್ತದೆ. ಜಲಾಶಯಗಳ ಬಹುಪಾಲು ನೀರನ್ನು ಬೆಂಗಳೂರಿಗೇ ಕೊಟ್ಟರೆ ಅನ್ನದಾತರು ಏನು ಬೆಳೆಯಬೇಕು? (ಕೃಷ್ಣರಾಜಸಾಗರ ಜಲಾಶಯದ ಸಂಗ್ರಹಣಾ ಸಾಮರ್ಥ್ಯ 49.52 ಟಿಎಂಸಿ ಹಾಗೂ ಕಬಿನಿ ಜಲಾಶಯದ ಸಾಮರ್ಥ್ಯ 19.52 ಟಿಎಂಸಿ) ಹಾಗೂ ಮೈಸೂರು, ಮಂಡ್ಯ ಭಾಗದ ಜನರ ಪರಿಸ್ಥಿತಿಯ ಕಥೆ ಏನು?.

ಜಲಮೂಲಗಳನ್ನು ಸಂರಕ್ಷಿಸಿಕೊಳ್ಳದಿದ್ದರೆ ಭವಿಷ್ಯವನ್ನು ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಸರ್ಕಾರ, ಸಂಘಸಂಸ್ಥೆಗಳು ಹಾಗೂ ನಗರವಾಸಿಗಳು ಜಲಮೂಲಗಳ ಸಂರಕ್ಷಣೆ, ನೀರಿನ ಶೇಖರಣೆ ಹಾಗೂ ನಿರ್ವಹಣೆಯಲ್ಲಿ ಜಾಗೃತರಾಗಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ಬೀಳುವ ಮಳೆಯನ್ನು ಮಳೆಕೊಯ್ಲು ಮೂಲಕ ಸಂಗ್ರಹ ಮಾಡಿದರೆ ಸರಬರಾಜಿನ ಶೇ.70ರಷ್ಟು ಪ್ರಮಾಣದ ನೀರನ್ನು ಜಲಾಶಯಗಳಲ್ಲಿ ಉಳಿಸಿಕೊಳ್ಳಬಹುದಾಗಿದೆ.

"ಏರಿ ನೀರುಂಬಡೆ.. ಬೇಲಿ ಕೊಯ್ಯ(ಹೊಲ/ಗದ್ದೆ/ತೋಟ)ಮೇವಡೆ, ನಾರಿ ತನ್ನ ಮನೆಯಲ್ಲಿ ಕಳುವಡೆ, ತಾಯ ಮೊಲೆವಾಲು ನಂಜಾಗಿ ಕೊಲುವಡೆ.. ಇನ್ನಾರಿಗೆ ದೂರುವೆ"ಎಂದು ಬಸವಣ್ಣನವರು ತಮ್ಮ ವಚನವೊಂದರಲ್ಲಿ ಹೇಳಿದ್ದಾರೆ. ಇಂದಿಗೆ ಈ ವಚನವು ನಶಿಸಿ ಹೋಗುತ್ತಿರುವ ನಮ್ಮ ಕೆರೆಗಳ ದುಸ್ಥಿತಿಗೆ ಹಿಡಿದ ಕನ್ನಡಿಯಂತಿದೆ. ಅಭಿವೃದ್ಧಿಯ ಕಾರಣ ಹಳ್ಳಿಗಳು ಪಟ್ಟಣಗಳಾಗುತ್ತಿವೆ, ಪಟ್ಟಣಗಳು ನಗರಗಳಾಗುತ್ತಿವೆ, ನಗರಗಳು ಬೃಹತ್ ನಗರಗಳಾಗಿ ನಾಗಾಲೋಟದಲ್ಲಿ ಬೆಳೆಯುತ್ತಿವೆ. ಸುತ್ತಲೂ ಬಡಾವಣೆಗಳು ಬೆಳೆಯುತ್ತಿವೆ, ಬೆಳೆಯುವ ಧಾವಂತದಲ್ಲಿ ಪ್ರಕೃತಿಯ ಕಗ್ಗೊಲೆಯಾಗುತ್ತಿದೆ. ಅಭಿವೃದ್ಧಿ ಎಂಬ ರಕ್ಕಸನು ದಾರಿಗೆ ಅಡ್ಡ ಸಿಗುವ ಹಳ್ಳಿಗಳನ್ನು, ನೀರುಣಿಸುತ್ತಿದ್ದ ಕೆರೆಗಳನ್ನು ತನ್ನ ತೆಕ್ಕೆಯೊಳಗೆ ಅವುಚಿಕೊಳ್ಳುತ್ತಿದ್ದಾನೆ. ಅಳಿದುಳಿದ ಕೆರೆಗಳಲ್ಲಿ ಶೇಖರವಾಗುವ ನೀರಿಗೆ ತ್ಯಾಜ್ಯ ಹಾಗೂ ಕೊಳಚೆ ನೀರು ಸೇರುವುದರಿಂದ ಬಳಕೆಗೆ ಯೋಗ್ಯ ಇಲ್ಲದಂತಾಗಿದೆ.

ಕಲ್ಲನಕೇರಿಯ ಮಲ್ಲನಗೌಡನು ಕಟ್ಟಿಸಿದ ಕೆರೆಗೆ ನೀರು ತುಂಬಲಿಲ್ಲವೆಂದು ಅವನ ಕಿರಿಯ ಸೊಸೆ ಭಾಗೀರಥಿ ಕೆರೆಗೆ ಹಾರವಾದ ಕಥೆಯನ್ನು ನಾವುಗಳು ಪಠ್ಯದಲ್ಲಿ ಓದಿ, ಕಥೆಯನ್ನು ಕೇಳಿ ಬೆಳೆದವರು. ದುರಂತವೆಂದರೆ ಪೂರ್ವಿಕರು ಕಟ್ಟಿಸಿದ ಕೆರೆಗಳು ನಮಗೇ ಹಾರವಾಗಿಬಿಟ್ಟಿವೆ.

ಸಾರ್ವಜನಿಕರ ಉಪಯೋಗಕ್ಕಾಗಿ ಕೆರೆಗಳನ್ನು ಕಟ್ಟಿಸಿದವರಲ್ಲಿ ಒಬ್ಬರನ್ನು ಇಲ್ಲಿ ನೆನೆಯಲೇಬೇಕು. ಎಲೆಮಲ್ಲಪ್ಪಶೆಟ್ಟಿ ಕೆರೆಯು ಬೆಂಗಳೂರಿನಲ್ಲಿರುವ ದೊಡ್ಡಕೆರೆಗಳಲ್ಲಿ ಒಂದಾಗಿದೆ. ಇದು ನಗರದ ಪೂರ್ವಕ್ಕೆ ಕೃಷ್ಣರಾಜಪುರಂನ ಆವಲಹಳ್ಳಿಯಲ್ಲಿದೆ (ಅಂದಿನ ವೀರನಹಳ್ಳಿ). 1875–80ರ ಅವಧಿಯಲ್ಲಿ 260 ಎಕರೆ ಪ್ರದೇಶದಷ್ಟು ವಿಸ್ತೀರ್ಣದ ದೊಡ್ಡಕೆರೆಯನ್ನು ಕೊಡುಗೈದಾನಿ ಎಂದು ಹೆಸರಾಗಿದ್ದ ರಾವ್ ಬಹದ್ದೂರ್ ಎಲೆಮಲ್ಲಪ್ಪಶೆಟ್ಟರು ಕಟ್ಟಿಸಿದರು. ಕೆರೆಯನ್ನು ಸೀಳಿಕೊಂಡೇ ಬೆಂಗಳೂರು–ಚೆನ್ನೈ ಹೆದ್ದಾರಿ ಹಾಯ್ದು ಹೋಗುತ್ತದೆ.

19ನೇ ಶತಮಾನ ಮುಗಿಯುವ ಸಮಯದಲ್ಲಿ ನಗರವು ತೀವ್ರ ಬರಗಾಲದಿಂದ ಬಳಲುತ್ತಿದ್ದಾಗ ಮಲ್ಲಪ್ಪಶೆಟ್ಟಿ ಎಂಬ ವೀಳ್ಯದೆಲೆ ವ್ಯಾಪಾರಿ ತನ್ನ ಸಂಪತ್ತಿನ ಹೆಚ್ಚಿನ ಭಾಗವನ್ನು ಮಳೆನೀರು ಕೊಯ್ಲು ಮಾಡಲು ಹಾಗೂ ಜನರ ಅಗತ್ಯತೆಯನ್ನು ಪೂರೈಸಲು ಆವಲಹಳ್ಳಿಯಲ್ಲಿ ಕೆರೆಯನ್ನು ನಿರ್ಮಿಸಲು ಉದಾರವಾಗಿ ದಾನ ಮಾಡಿದನು. ದಾನಿಯ ಹೆಸರಿನಿಂದಲೇ ಕರೆಯಲ್ಪಡುವ ಎಲೆಮಲ್ಲಪ್ಪಶೆಟ್ಟಿ ಕೆರೆಯು ಅತಿಕ್ರಮಣಕ್ಕೆ ಒಳಗಾಗಿದೆ. ಜಲಾನಯನ ಪ್ರದೇಶದಲ್ಲಿ ತಲೆಎತ್ತಿರುವ ಬಹುಮಹಡಿ ಕಟ್ಟಡಗಳು ನಿರಂತರವಾಗಿ ಸಂಸ್ಕರಿಸಿದ ಒಳಚರಂಡಿ ನೀರನ್ನು ನೇರವಾಗಿ ಕೆರೆಗೆ ಬಿಡುವುದರಿಂದ ಹಾಗೂ ಸುತ್ತಲಿನ ಕೈಗಾರಿಕೆಗಳು ಸಹ ತ್ಯಾಜ್ಯವನ್ನು ಕೆರೆಗೆ ಸುರಿಯಲಾರಂಭಿಸಿದ ಪರಿಣಾಮವಾಗಿ ಕುಲಷಿತವಾಯಿತು. ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಶುದ್ಧೀಕರಿಸುವುದಕ್ಕಾಗಿ ಸಂಸ್ಕರಣಾ ಘಟಕವನ್ನು ನಿರ್ಮಿಸಿದೆ. ನೀರಾವರಿ ಉದ್ದೇಶಕ್ಕಾಗಿ ಸಂಸ್ಕರಿಸಿದ ನೀರನ್ನು ಸಮೀಪದ ಚಿಕ್ಕಬಳ್ಳಾಪುರ, ಕೋಲಾರ ಮತ್ತು ಆನೇಕಲ್‌ಗೆ ಸರಬರಾಜು ಮಾಡಲಾಗುತ್ತಿದೆ.

ರಾವ್‌ಬಹದ್ದೂರ್ ಎಲೆಮಲ್ಲಪ್ಪಶೆಟ್ಟಿಯವರು 1815–1887ರ ಕಾಲಘಟ್ಟದಲ್ಲಿ ಜೀವಿಸಿದ್ದರು. ಭೀಕರ ಬರಗಾಲದ ಕಾರಣ ದೊಡ್ಡಕೆರೆಯನ್ನು ನಿರ್ಮಿಸಲು ಸಹಾಯ ಮಾಡಿದರಲ್ಲದೆ, 1880ರಲ್ಲಿ ಬೆಂಗಳೂರಿನ ಮೊದಲ ಹೆರಿಗೆ ಆಸ್ಪತ್ರೆಯನ್ನು ಕಟ್ಟಲು ಹಣಕಾಸಿನ ನೆರವು ನೀಡಿದರು. ಅವರ ಜನೋಪಕಾರಿ ಕೆಲಸವನ್ನು ಗುರುತಿಸಿ "ರಾವ್ ಬಹದ್ದೂರ್" ಎಂಬ ಬಿರುದನ್ನು ಬ್ರಿಟೀಷ್ ಹಾಗೂ ಸಂಸ್ಥಾನದ ಸರ್ಕಾರವು ನೀಡಿ ಗೌರವಿಸಿತು. ಇವರ ಜನಸೇವೆ ಇಷ್ಟಕ್ಕೇ ನಿಲ್ಲುವುದಿಲ್ಲ, 1876–78ರ ಅವಧಿಯ ಎರಡು ವರ್ಷಗಳು ಮಹಾಕ್ಷಾಮ ಆವರಿಸಿತು. ಆ ಸಂದರ್ಭದಲ್ಲಿ ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿದ್ದ ಕೆರೆಗಳು, ಬಾವಿಗಳು ಹಾಗೂ ಕೊಳಗಳು ಬತ್ತಿಹೋದವು, ಸಂಕಷ್ಟಕ್ಕೆ ಒಳಗಾದ ನಿವಾಸಿಗಳಿಗೆ ನೀರನ್ನು ಒದಗಿಸಲು ತಮ್ಮ ಸಂಪತ್ತಿನ ಬಹುಭಾಗವನ್ನು ನೀಡಿದ್ದಾರೆ. ಎರಡು ವರ್ಷಗಳ ಕಾಲ ದಿನನಿತ್ಯವೂ ಅನ್ನ ಮತ್ತು ಗಂಜಿ ವ್ಯವಸ್ಥೆ ಹಾಗೂ ಬೃಹತ್ ಕೆರೆಯ ನಿರ್ಮಾಣಕ್ಕೆ ಉದಾರವಾಗಿ ದಾನ ಮಾಡಿದರು.

ಎರಡು ದಶಕಗಳ ಕಾಲ ಬೆಂಗಳೂರು ನಗರಕ್ಕೆ ಎಲೆಮಲ್ಲಪ್ಪಶೆಟ್ಟರ ಕೆರೆಯಿಂದಲೇ ನೀರು ಸರಬರಾಜು ಮಾಡಲಾಗುತ್ತಿತ್ತು. ಕೆರೆಯ ನಿರ್ಮಾಣ ಪ್ರಗತಿಯಲ್ಲಿರುವಾಗ ಕೆಲಸಗಾರರೊಬ್ಬರು ಹೆರಿಗೆಯ ಸಮಯದಲ್ಲಿ ಮರಣ ಹೊಂದಿದ ಕಾರಣಕ್ಕೆ ಬೆಂಗಳೂರಿನಲ್ಲಿ ಹೆರಿಗೆ ಆಸ್ಪತ್ರೆ ಇಲ್ಲದ್ದರಿಂದ ಸುತ್ತಮುತ್ತಲಿನ ಮಹಿಳೆಯರಿಗೆ ಸಹಾಯವಾಗಲೆಂದು 90 ಹಾಸಿಗೆಗಳ ಸುಸಜ್ಜಿತ ಮೊದಲ ಸರ್ಕಾರಿ ಹೆರಿಗೆ ಆಸ್ಪತ್ರೆಯನ್ನು ರೂ.35,000 ಆರ್ಥಿಕ ನೆರವಿನೊಂದಿಗೆ ನೃಪತುಂಗ ರಸ್ತೆಯಲ್ಲಿರುವ ಇಂದಿನ ಐಜಿಪಿ ಕಚೇರಿ ಸ್ಥಳದಲ್ಲಿ ನಿರ್ಮಿಸಲಾಯಿತು. ಇದನ್ನು ಅವರ ಹೆಸರಿನಿಂದಲೇ ಕರೆಯಲಾಗುತ್ತಿತ್ತು. 1935ರಲ್ಲಿ ಸ್ಥಳಾಂತರಿಸಿ ಹಾಲಿ ವಾಣಿ ವಿಲಾಸ ಆಸ್ಪತ್ರೆಯೊಂದಿಗೆ ವಿಲೀನಗೊಳಿಸಲಾಗಿದೆ. ಬಂಗಾರಪೇಟೆಯಲ್ಲಿ ಧರ್ಮಛತ್ರ ಮತ್ತು ಬಡ ವಿದ್ಯಾರ್ಥಿಗಳಿಗೆ ಉಚಿತ ಪ್ರಸಾದ ನಿಲಯಗಳು ಇವರ ಧನ ಸಹಾಯದಿಂದ ಆಗಿವೆ. ಸಾಮಾಜಿಕ ಕಾರ್ಯಗಳ ಜೊತೆಗೆ ಶೆಟ್ಟರು ಸಾಹಿತ್ಯ ಪ್ರೇಮಿಯೂ ಆಗಿದ್ದರು. ಬೆಂಗಳೂರಿನ ಪುರಾತನ ದೇವಾಲಯಗಳಾದ ಬಸವನಗುಡಿಯ ದೊಡ್ಡಬಸವೇಶ್ವರ, ಗವಿಪುರಂ ಗುಡ್ಡಹಳ್ಳಿಯ ಗವಿಗಂಗಾಧರೇಶ್ವರ, ಪ್ರಳಯಕಾಲ ರುದ್ರೇಶ್ವದೇವಾಲಯ, ಬೆಳ್ಳಿ ಬಸವೇಶ್ವರ ದೇವಸ್ಥಾನ ಹಾಗೂ ಹಲಸೂರು ಸೋಮೇಶ್ವರ ದೇವಸ್ಥಾನಗಳ ಜೀರ್ಣೋದ್ಧಾರಕ್ಕೂ ಸಹಾಯ ಮಾಡಿದ್ದಾರೆ.

ಎಲೆಮಲ್ಲಪ್ಪಶೆಟ್ಟರು 1737ರಲ್ಲಿ ಮರಿಸಿದ್ದಪ್ಪ ಶೆಟ್ಟರು ಮತ್ತು ಚೆನ್ನಮ್ಮ ಇವರ ಮೂರನೇ ಮಗನಾಗಿ ಬೆಂಗಳೂರಿನಲ್ಲಿ ಜನಿಸಿದರು. ವೃತ್ತಿ ಅಡಿಕೆ ಮತ್ತು ಎಲೆ ಮಾರಾಟ. ಅಬಕಾರಿ ಗುತ್ತಿಗೆದಾರರು ಸಹ ಆಗಿದ್ದರು. ಜಗಜ್ಯೋತಿ ಬಸವಣ್ಣನವರು ಮತ್ತು ಬಳ್ಳಾರಿಯ ಶ್ರೀ ಸಕ್ಕರೆ ಕರಡಪ್ಪನವರು ಇವರಿಗೆ ಬಾಲ್ಯದಿಂದಲೇ ಆದರ್ಶವಾಗಿದ್ದರಂತೆ.

ಬೆಂಗಳೂರು ನಗರದಲ್ಲಿ ಕೆರೆಗಳನ್ನು ನುಂಗಿ ನೀರು ಕಡಿಯುತ್ತಿರುವ ಮಂದಿಗೆ ಇಂಥಹವರು ಆದರ್ಶವಾಗಲಿಲ್ಲ ಏಕೆ ಎಂಬುದು ನನಗೆ ಪ್ರಶ್ನೆಯಾಗಿ ಕಾಡುತ್ತಿದೆ. ಪ್ರಸ್ತುತ ಎಲೆಮಲ್ಲಪ್ಪಶೆಟ್ಟರಂತಹವರು ನಗರದಲ್ಲಿ ನಾಲ್ಕಾರು ಜನರು ಇದ್ದಿದ್ದರೆ ಬಹುಶಃ ಬೆಂಗಳೂರು ಕುಡಿಯುವ ನೀರಿಗೆ ದೂರದ ಜಲಾಶಯಗಳನ್ನು ಆಶ್ರಯಿಸದೆ ತನ್ನದೇ ಜಲಮೂಲಗಳಿಂದ ಹಾಗೂ ಮಳೆಕೊಯ್ಲು ಮೂಲಕ ಪೂರೈಸಿಕೊಳ್ಳಬಹುದಿತ್ತು.

ವಿಜಯನಗರದ ಪ್ರೌಢದೇವರಾಯನ ಮಂತ್ರಿ ಲಕ್ಷ್ಮೀಧರಮಾತ್ಯನ ಶಾಸನ(ಕ್ರಿ.ಶ.1411)ದಲ್ಲಿ ಹೀಗೆ ಹೇಳಿದೆ; ಲಕ್ಷ್ಮೀಧರಮಾತ್ಯನ ತಾಯಿ ಹಾಲನ್ನು ಕುಡಿಸುವಾಗ ಕಿವಿಯಲ್ಲಿ ಹೇಳಿದ ಮಾತು: "ಕೆರೆಯಂಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ಮಾಡಿಸ, ಜ್ವರೆಯೊಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗೆಂಬುಕೆಯ್ ನಂಬಿದರ್ಗೆರೆವಟ್ಟಾಗಿರು....." ಅಂದರೆ ಇದರ ಅರ್ಥ ಹೀಗಿದೆ: ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕನಾಗು, ನಂಬಿದವರಿಗೆ ಆಶ್ರಯದಾತನಾಗು. ನೂರಕ್ಕೆ ನೂರು ಇದನ್ನು ಪಾಲಿಸಿದ ಎಲೆಮಲ್ಲಪ್ಪಶೆಟ್ಟರು ನಿಜಕ್ಕೂ ಬೆಂಗಳೂರಿನ ರಾವ್ ಬಹದ್ದೂರ್.

ನಾವು ಕೆರೆಯನ್ನು ಕಟ್ಟಿಸದಿದ್ದರೂ ಪರವಾಗಿಲ್ಲ ತುಂಬಿದ ಕೆರೆಗೆ ತ್ಯಾಜ್ಯವನ್ನು ಸುರಿಯುವುದು, ಕೊಳಚೆ ನೀರನ್ನು ಬಿಡುವುದು, ಅಕ್ರಮವಾಗಿ ಒತ್ತುವರಿ ಮಾಡುವುದು, ನೀರು ನಿಲ್ಲದಂತೆ ಕೋಡಿಗಳನ್ನು ಒಡೆದು ಹಾಕುವುದನ್ನು ಮಾಡದೆ ಸಂರಕ್ಷಿಸೋಣ. ನಮ್ಮದು ಭಾಗೀರಥಿ, ಎಲೆಮಲ್ಲಪ್ಪಶೆಟ್ಟರಂತೆ ಅನೇಕ ಪುಣ್ಯವಂತರು ಹುಟ್ಟಿದ ಕನ್ನಡನಾಡು ಎಂಬುದನ್ನು ಮರೆಯುವುದುಂಟೇ?

ಲೋಕಕಲ್ಯಾಣಕ್ಕಾಗಿ ಮೈಸೂರಲ್ಲಿ ಪಂಚ ಗರುಡೋತ್ಸವ ಸೇವೆ





ಮೇಲುಕೋಟೆಯ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸಮ್ಮುಖದಲ್ಲಿ ನಡೆಯುತ್ತಿರುವ ಪಂಚ ಗರುಡೋತ್ಸವ ಸೇವೆಗೆ ಚಾಲನೆ ದೊರಕಿತು. ಈ ವೇಳೆ ಶಾಸಕರಾದ ಜಿ.ಟಿ.ದೇವೇಗೌಡರು, ಟಿ.ಎಸ್.ಶ್ರೀವತ್ಸ ಸೇರಿದಂತೆ ಇತರರಿದ್ದರು. ಮತ್ತೊಂದು ಚಿತ್ರದಲ್ಲಿ ವಿವಿಧ ದೇವಸ್ಥಾನಗಳಿಂದ ಆಗಮಿಸಿದ್ದ ಪಂಚ ಗರುಡೋತ್ಸವ ವಿವಿಧ ರಸ್ತೆಯಲ್ಲಿ ಸಾಗಿತು.

ಮೈಸೂರು, ಫೆ.2(ಎಸ್‌ಪಿಎನ್)– ಲೋಕ ಕಲ್ಯಾಣಕ್ಕಾಗಿ ನಡೆಯುವ ಪಂಚ ಗರುಡೋತ್ಸವ ಸೇವೆಯಲ್ಲಿ ಎಲ್ಲರೂ ಪಾಲ್ಗೊಂಡು ಧರ್ಮರಕ್ಷಣೆಗೆ ಮುಂದಾಗಬೇಕು ಎಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡರು ಕರೆ ನೀಡಿದರು.

ಮೈಸೂರು ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ವಿದ್ಯಾಸಂಸ್ಥೆ ಕ್ರೀಡಾಂಗಣದಲ್ಲಿ ಪಂಚಗರುಡೋತ್ಸವ ಸಮಿತಿ ವತಿಯಿಂದ ಎರಡನೇ ಬಾರಿಗೆ ಆಯೋಜಿಸಿರುವ ಪಂಚಗರುಡೋತ್ಸವ ಧಾರ್ಮಿಕ ವಿಧಿ–ವಿಧಾನದಲ್ಲಿ ಪಾಲ್ಗೊಂಡು ಮಾತನಾಡಿದ ಶಾಸಕರು, ಮೇಲುಕೋಟೆಯ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸಮ್ಮುಖದಲ್ಲಿ ನಡೆಯುತ್ತಿರುವ ಪಂಚ ಗರುಡೋತ್ಸವ ಸೇವೆಯು ಲೋಕ ಕಲ್ಯಾಣ ಹಾಗೂ ಧರ್ಮರಕ್ಷಣೆಗಾಗಿ ಮೈಸೂರಿನಲ್ಲಿ ನಡೆಯುತ್ತಿರುವುದು ಸಂತೋಷದ ಸಂಗತಿ ಎಂದರು. ಇದರ ಜೊತೆಗೆ ಪರಕಾಲ ಮಠದ ಶ್ರೀಮದಭಿನವ ವಾಗೀಶ ಬ್ರಹ್ಮ ತಂತ್ರ ಸ್ವತಂತ್ರ ಪರಕಾಲ ಸ್ವಾಮೀಜಿ ಹಾಗೂ ಶ್ರೀ ಭಾಷ್ಯಂ ಸ್ವಾಮೀಜಿ ಅವರು ಹಲವು ವರ್ಷಗಳಿಂದ ಶ್ರೀ ನಾರಾಯಣ ದೇವರ ಸೇವೆಯನ್ನು ಮಾಡುತ್ತಿದ್ದು, ಇದರ ಜೊತೆಗೆ ಲೋಕ ಕಲ್ಯಾಣಕ್ಕೆ ಹಲವು ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು ಲೋಕದ ಹಿತ ಬಯಸುತ್ತಿದ್ದಾರೆ. ಇಂತಹ ಮಹಾನ್ ಯತಿಗಳ ನೇತೃತ್ವದಲ್ಲಿ ನಡೆಯುತ್ತಿರುವ ಪಂಚಗರುಡೋತ್ಸವ ಸೇವೆಯಲ್ಲಿ ಎಲ್ಲರೂ ಪಾಲ್ಗೊಳ್ಳುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ನಂತರ ಶ್ರೀ ಭಾಷ್ಯಂ ಸ್ವಾಮೀಜಿ ಮಾತನಾಡಿ, ವೇದಗಳಲ್ಲಿ ಪಂಚ ಗರುಡೋತ್ಸವ ಸೇವೆ ಹಾಗೂ ಹನ್ನೆರಡು ಗರುಡೋತ್ಸವ ಸೇವೆಯೂ ಇದೆ. ಇದರ ಮಹಿಮೆ ಅಗಾಧವಾದುದು. ಹಾಗಾಗಿ ಮೈಸೂರಿನಲ್ಲಿ ಎರಡನೇ ಬಾರಿಗೆ ಪಂಚ ಗರುಡೋತ್ಸವ ಧಾರ್ಮಿಕ ಕಾರ್ಯವು ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸಮ್ಮುಖದಲ್ಲಿ ನಡೆಯುತ್ತಿರುವುದು ಸಂತೋಷದ ಸಂಗತಿ. ಅಲ್ಲದೆ, ಪಂಚ ಗರುಡೋತ್ಸವ ಮಹತ್ವದ ಕುರಿತು ಸಭೆಗೆ ತಿಳಿಸಿಕೊಟ್ಟರು.

ವೇದಿಕೆ ಕಾರ್ಯಕ್ರಮದ ನಂತರ ವಿದ್ವಾನ್ ಎಂ.ಜಿ.ರಂಗನಾಥ್ ತಂಡದವರು ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಹಲವು ದಾಸರ ಪದಗಳನ್ನು ಹಾಡಿದರು. ನಂತರ ವಿದ್ವಾನ್ ವಂಶಿಧರ್ ಮತ್ತು ವೃಂದದವರಿಂದ ಕೊಳಲು ವಾದನ, ವಿದ್ವಾನ್ ಆರ್.ಕೆ.ಪದ್ಮನಾಭನ್ ತಂಡದ ಕಲಾವಿದರಿಂದ ವೀಣಾವಾದನ, ವಿಷ್ಣು ಸಹಸ್ರನಾಮ ಪಾರಾಯಣ ಹಾಗೂ ಭರತಾಂಜಲಿ ನೃತ್ಯ ಶಾಲೆಯ ವಿದ್ಯಾರ್ಥಿಗಳಿಂದ ವಿದುಷಿ ಶೀಲಾ ಶ್ರೀಧರ್, ವಿದುಷಿ ಶಾಶ್ವತಿ ರಘುನಂದನ್ ಅವರಿಂದ ವಿಷ್ಣು ದಶಾವತಾರ ನೃತ್ಯರೂಪಕ ಪ್ರದರ್ಶಿಸಿದರು. ಮುಂದುವರೆದು ಮೈಸೂರಿನ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದ ಗೋಷ್ಠಿ ಕಲಾವಿದರಿಂದ ನೃತ್ಯರೂಪಕ ಪ್ರದರ್ಶಿಸಿ, ಎಲ್ಲರ ಮೆಚ್ಚುಗೆ ಗಳಿಸಿದರು.

ಜಯಲಕ್ಷ್ಮೀಪುರಂ ವಿವಿಧ ರಸ್ತೆಗಳಲ್ಲಿ ಮೆರವಣಿಗೆ: ಪಂಚಗರುಡೋತ್ಸವ ಮೆರವಣಿಗೆಯಲ್ಲಿ ಮೈಸೂರಿನ ಒಂಟಿಕೊಪ್ಪಲಿನ ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿ ದೇವಸ್ಥಾನದ ಗರುಡೋತ್ಸವ, ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ಗರುಡೋತ್ಸವ, ಟೆಂಪಲ್ ರಸ್ತೆಯ ಆಂಡಾಳ್ ಮಂದಿರದ ಗರುಡೋತ್ಸವ, ಗೋಕುಲಂ ಶ್ರೀಕೃಷ್ಣ ದೇವಸ್ಥಾನದ ಗರುಡೋತ್ಸವ ಹಾಗೂ ನಾರಾಯಣಶಾಸ್ತ್ರೀ ರಸ್ತೆಯ ಪುಸ್ತಕಂ ಸಂತಾನ ಗೋಪಾಲಕೃಷ್ಣ ದೇವಸ್ಥಾನದ ಗರುಡೋತ್ಸವ ಪಾಲ್ಗೊಂಡವು.

ಪಂಚಗರುಡೋತ್ಸವ ಮೆರವಣಿಗೆಯು ಮಹಾಜನ ವಿದ್ಯಾಸಂಸ್ಥೆ ಕ್ರೀಡಾಂಗಣದಿಂದ ಆರಂಭಗೊಂಡು ಐಓಬಿ ಬ್ಯಾಂಕ್, ಮಾತೃಮಂಡಳಿ ವೃತ್ತ, ಟೆಂಪಲ್ ರಸ್ತೆ, ಡಿಆರ್‌ಎಂ ವೃತ್ತ, ಆಂಡಾಲ್ ಮಂದಿರದಲ್ಲಿ ಪೂಜೆ, ನಂತರ ಮಾತೃಮಂಡಳಿ ವೃತ್ತದ ಚಂದ್ರಮೌಳೇಶ್ವರ ದೇವಸ್ಥಾನದ ಮುಂಭಾಗ ಪೂಜೆ ಸಲ್ಲಿಸಲಾಯಿತು. ನಂತರ ಮಹಾಜನ ವಿದ್ಯಾಸಂಸ್ಥೆ ಕ್ರೀಡಾಂಗಣಕ್ಕೆ ವಾಪಸ್ ಆಯಿತು. ಈ ವೇಳೆ ಪಂಚ ಗರುಡೋತ್ಸವ ಸೇವಾ ಸಮಿತಿ ಗೌರವಾಧ್ಯಕ್ಷರೂ ಆದ ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ, ಸಮಿತಿ ಸದಸ್ಯರಾದ ಕೆ.ಆರ್.ಯೋಗಾನರಸಿಂಹನ್, ವೀರರಾಘವನ್, ಎಂ.ಕೆ.ಶ್ಯಾಮ್ ಶ್ರೀನಿವಾಸ, ರಾಮಪ್ರಿಯನ್, ವೈಯ್ಯಾಕರಣಿ, ರಾಮಾನುಜಂ, ಆರ್.ರಾಮಸ್ವಾಮಿ, ರಂಗರಾಜು, ಶ್ರೀನಿಧಿ ಶಾಂತಾರಾಂ, ಎಂ.ಆನಂದ್, ಎಸ್.ಸುದರ್ಶನ್, ಪಿ.ರಾಮಾನುಜಂ, ಮಣಿವಣ್ಣನ್, ಜಯಸಿಂಹ, ಶ್ರೀರಂಗರಾಜನ್ ಉತ್ತಮ ನಂಬಿ, ಜಾನಕಿ ಶೇಷಾದ್ರಿ, ಪದ್ಮಶ್ರೀ, ಜಿ.ಕೆ.ಕಮಲ, ಎಂ.ಆರ್.ನಾಗಮಣಿ, ಜಾನಕಿ ಕೃಷ್ಣಮೂರ್ತಿ ಸೇರಿದಂತೆ ಇತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಸಣ್ಣ, ಅತಿ ಸಣ್ಣ ಹೊಸ ಘಟಕಗಳ ಸ್ಥಾಪನೆಗೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು,ಫೆ.2– ಕೈಮಗ್ಗ ಮತ್ತು ಜವಳಿ ಇಲಾಖೆಯ ವತಿಯಿಂದ 2024–25 ನೇ ಸಾಲಿನ ನೇಕಾರರ ಪ್ಯಾಕೇಜ್– SCP/TSP ಯೋಜನೆಯಡಿ, ಮೈಸೂರು ಜಿಲ್ಲೆಗೆ ವಿಶೇಷ ಘಟಕದ ಯೋಜನೆಯಡಿ (SCP)04 ಮತ್ತು ಗಿರಿಜನ ಉಪಯೋಜನೆಯಡಿ (SME) 02 ಗುರಿಯನ್ನು ನಿಗಧಿಪಡಿಸಲಾಗಿರುವುದರಿಂದ ಆಸಕ್ತ ಪರಿಶಿಷ್ಟ ಜಾತಿ, ಪಂಗಡದ ಉದ್ದಿಮೆದಾರರಿಂದ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (SME) ಹೊಸ ಘಟಕಗಳ ಸ್ಥಾಪನೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಫೆ.20 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೈಮಗ್ಗ ಮತ್ತು ಜವಳಿ ಇಲಾಖೆ, ಸಿ.ಟಿ.ಐ. ಕಟ್ಟಡ, ಸಯ್ಯಾಜಿರಾವ್ ರಸ್ತೆ, ಮೈಸೂರು, ಇಲ್ಲಿಗೆ ಕಛೇರಿಯ ಕೆಲಸದ ಸಮಯದಲ್ಲಿ ಖುದ್ದಾಗಿ ಭೇಟಿ ನೀಡಿ ಅಥವಾ ಕಛೇರಿ ದೂ.ಸಂ: 0821–2441353 ನ್ನು ಸಂಪರ್ಕಿಸಬಹುದು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

10 ವರ್ಷ ಜೈಲು

ಮುಂದಾಗಿದೆ. ಮಿತಿ ಮೀರಿ ಬಡ್ಡಿ ವಿಧಿಸುವ ಲೇವಾದೇವಿಗಾರರು, ಪಾನ್ ಬ್ರೋಕರ್ಸ್ ಸೇರಿ ಇತರ ಸಹ ಕಾರ ಸಂಘಗಳ ಮೇಲೆ ನಿಯಂತ್ರಣ ಹೇರಲು ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಕಾಯ್ದೆ–2004 ಕಾಯ್ದೆ ಜಾರಿಯಲ್ಲಿದೆ. ಇದರಡಿ ಮಿತಿಮೀರಿ ಬಡ್ಡಿ ವಿಧಿಸುವವರ ಮೇಲೆ ಪ್ರಕರಣ ದಾಖಲಿಸಲಾಗುತ್ತದೆ.

ಈಗಿರುವ ಗರಿಷ್ಠ 3 ವರ್ಷ ಶಿಕ್ಷೆ ಪ್ರಮಾಣಕ್ಕೆ ತಿದ್ದುಪಡಿ ತಂದು ಗರಿಷ್ಠ 10 ವರ್ಷಗಳವರೆಗೆ ಹೆಚ್ಚಿಸಲು ಸಿದ್ಧತೆ ನಡೆಸಲಾಗುತ್ತಿದೆ. ಜೊತೆಗೆ ಒಂದು ಲಕ್ಷಕ್ಕೂ ಅಧಿಕ ದಂಡ ವಿಧಿಸುವ ನಿಟ್ಟಿನಲ್ಲಿ ಚರ್ಚೆ ನಡೆಸುತ್ತಿದೆ. ಈ ಸಂಬಂಧ ಸಹಕಾರ ಸಚಿವ ಕೆ.ಎನ್.ರಾಜಣ್ಣ ಈಗಾಗಲೇ ಸಹಕಾರ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸಿ, ಪೂರಕ ತಿದ್ದುಪಡಿ ತರಲು ಸಮಾಲೋಚನೆ ನಡೆಸಿದ್ದಾರೆ. ಮುಂಬರುವ ಅಧಿವೇಶನದಲ್ಲಿ ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ (ತಿದ್ದುಪಡಿ) ಮಸೂದೆ ಮಂಡನೆ ಮಾಡಲು ಮುಂದಾಗಿದೆ. ಆ ಮೂಲಕ ಅಧಿಕ ಬಡ್ಡಿ ವಿಧಿಸುವವರ ಮೇಲೆ ಕಠಿಣ ಕಾನೂನು ಜಾರಿ ಮಾಡಲು ಸಹಕಾರ ಇಲಾಖೆ ತೀರ್ಮಾನಿಸಿದೆ.

ಹಾಲಿ ಕಾಯ್ದೆಯಲ್ಲಿರುವ ಅಂಶಗಳೇನು?: ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಕಾಯ್ದೆ– 2004 ಮೂಲಕ ಅತಿಹೆಚ್ಚು ಬಡ್ಡಿ ವಿಧಿಸುವವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಆದರೂ ನಿರೀಕ್ಷಿತ ಕಡಿವಾಣ ಬಿದ್ದಿಲ್ಲ. ಅದಕ್ಕಾಗಿ ಇರುವ ಕಾಯ್ದೆಯಲ್ಲಿನ ಕಾನೂನಿಗೆ ಇನ್ನಷ್ಟು ಶಕ್ತಿ ತುಂಬಲು ಸಹಕಾರ ಇಲಾಖೆ ಚಿಂತನೆ ನಡೆಸಿದೆ.

ಹಾಲಿ ಇರುವ ಕಾಯ್ದೆ ಪ್ರಕಾರ ಸಾಲದ ಮೇಲೆ ಮಿತಿಮೀರಿ ಬಡ್ಡಿ ವಿಧಿಸುವುದಕ್ಕೆ ಕಡಿವಾಣ ಮತ್ತು ಲೇವಾದೇವಿದಾರರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಅನುವು ಮಾಡುತ್ತದೆ. ಜೊತೆಗೆ ಸಾಲ ವಸೂಲಿಗೆ ಕಿರುಕುಳ ನೀಡುವವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಅಂಶಗಳನ್ನು ಹೊಂದಿದೆ. ಜೊತೆಗೆ ಸಾಲಗಾರ ಯಾವ ವ್ಯಕ್ತಿಯಿಂದ ತಾನು ಸ್ವೀಕರಿಸಿದ ಸಾಲದ ಸಂಬಂಧದಲ್ಲಿ ಬಾಕಿ ಇರುವ ಹಣವನ್ನು, ಕರ್ನಾಟಕ ಲೇವಾದೇವಿಗಾರರ ಅಧಿನಿಯಮ 1961 ಅಡಿಯಲ್ಲಿ ರಾಜ್ಯ ಸರ್ಕಾರ ನಿಗದಿ ಮಾಡಿದ ದರದಲ್ಲಿ ಬಡ್ಡಿಯೊಡನೆ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯದಲ್ಲಿ ಹಣವನ್ನು ಪೂರ್ಣವಾಗಿ ಅಥವಾ ಸಂದರ್ಭಾನುಸಾರ ಭಾಗಶಃ ಸಾಲದ ತೀರಿಕೆಗಾಗಿ, ಸಾಲ ಮತ್ತು ಬಡ್ಡಿ ಹಣವನ್ನು ಠೇವಣಿ ಇಡಲಾಗಿದೆ ಎಂಬುದನ್ನು ದಾಖಲಿಸುವ ಅರ್ಜಿ ಸಹಿತ, ಠೇವಣಿ ಇಡಬಹುದಾಗಿದೆ.

ಈ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಅರ್ಜಿಯಲ್ಲಿ ನಮೂದಿಸಿದ ವ್ಯಕ್ತಿಗೆ, ನ್ಯಾಯಾಲಯ ನೀಡಬಹುದಾದಂತೆ, 15 ದಿನಗಳ ಅವಧಿಯ ಒಳಗೆ ತನ್ನ ಉತ್ತರಗಳನ್ನು ನೀಡುವಂತೆ ನಿರ್ದೇಶಿಸುತ್ತದೆ. ನ್ಯಾಯಾಲಯ ವಿಚಾರಣೆಯ ತರುವಾಯ ಮತ್ತು ಉಭಯ ಪಕ್ಷಗಳ ಹೇಳಿಕೆಗಳನ್ನು ಪರಿಗಣಿಸಿದ ನಂತರ ಸಾಲ ಮತ್ತು ಅದರ ಬಡ್ಡಿಯು ಪೂರ್ಣವಾಗಿ ಅಥವಾ ಸಂದರ್ಭಾನುಸಾರ ಭಾಗಶಃ ತೀರಿಕೆಯಾಗಿದೆ ಎಂದು ದಾಖಲು ಮಾಡಿ ಆದೇಶ ಹೊರಡಿಸಬಹುದಾಗಿದೆ.

ಸಾಲ ಅಥವಾ ಅದರ ಬಡ್ಡಿಯ ಮರುಪಾವತಿಗಾಗಿ ಬಲವಂತವಾಗಿ ತೆಗೆದುಕೊಂಡ ಚರ ಅಥವಾ ಸ್ಥಿರ ಸ್ವತ್ತು ಯಾವುದಾದರೂ ಇದ್ದರೆ, ಅದರ ಸ್ವಾಧೀನತೆಯನ್ನು ಪುನಃ ಒಪ್ಪಿಸಲು ನ್ಯಾಯಾಲಯ ಆದೇಶ ಹೊರಡಿಸಬಹುದಾಗಿದೆ. ಇನ್ನು ರಾಜ್ಯ ಸರ್ಕಾರ ನಿಗದಿ ಮಾಡಿದ ದರದಲ್ಲಿ ಮಾತ್ರವೇ ಸಾಲದ ಮೇಲೆ ಬಡ್ಡಿ ವಿಧಿಸುವ ಬಗ್ಗೆ ನ್ಯಾಯಾಲಯದ ಮುಂದೆ ಪ್ರಕಟಿಸಬೇಕು.

ಬಡ್ಡಿಯೂ ಸೇರಿದಂತೆ ಸಾಲದ ಇತ್ಯರ್ಥಕ್ಕಾಗಿ ಸಾಲಗಾರನು ದಾಖಲು ಮಾಡಿದ ಅರ್ಜಿಗೆ ಸಂಬಂಧಿಸಿ ರಾಜ್ಯ ಸರ್ಕಾರ ನಿಗದಿಪಡಿಸಿದ ಬಡ್ಡಿಯ ದರಕ್ಕಿಂತ ಹೆಚ್ಚಿನ ದರವನ್ನು ಸಾಲಗಾರನು ಸಂದಾಯ ಮಾಡಿದ್ದಲ್ಲಿ ಆ ಬಡ್ಡಿಯನ್ನು ಹೊಂದಾಣಿಕೆ ಮಾಡುವಂತೆ ಆದೇಶ ಹೊರಡಿಸಬಹುದು. ಸಾಲಗಾರ ಆತ್ಮಹತ್ಯೆ ಮಾಡಿಕೊಂಡಲ್ಲಿ ಅಂತಹ ಆತ್ಮಹತ್ಯೆಗೆ ನಿಕಟ ಪೂರ್ವದಲ್ಲಿ ಸಾಲಗಾರ ಅಥವಾ ಅವನ ಕುಟುಂಬದ ಯಾವೊಬ್ಬ ಸದಸ್ಯನನ್ನು ಸಾಲ ನೀಡಿದ ವ್ಯಕ್ತಿ ಪೀಡಿಸಿದ್ದನೆಂಬುದು ರುಜುವಾದರೆ, ಆತ್ಮಹತ್ಯೆಗೆ ಸಾಲ ನೀಡಿದ ವ್ಯಕ್ತಿಯೇ ಕಾರಣ ಎಂದು ಭಾವಿಸಲಾಗುತ್ತದೆ. ಹಾಲಿ ಕಾಯ್ದೆಯಲ್ಲಿ ಕಾನೂನು ಉಲ್ಲಂಘಿಸುವ ಅಥವಾ ಯಾವುದೇ ಸಾಲದ ವಸೂಲಿಗಾಗಿ ಸಾಲಗಾರನನ್ನು ಪೀಡಿಸುವ ಅಥವಾ ಪೀಡಿಸುವುದಕ್ಕಾಗಿ ಪ್ರೇರೇಪಿಸಿದ ವ್ಯಕ್ತಿಗೆ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು 30 ಸಾವಿರ ರೂ.ವರೆಗೆ ವಿಸ್ತರಿಸಬಹುದಾದ ದಂಡ ವಿಧಿಸಲಾಗುತ್ತಿದೆ.

ಜೆಡಿಎಸ್ ಶಾಸಕರಿಗೆ ಆಫರ್ ನೀಡಿದ ಡಿಕೆಶಿ

ಉತ್ತರವಾಗಿದೆ. ನೀವು ಕೇವಲ ಚನ್ನಪಟ್ಟಣಕ್ಕೆ ಮಾತ್ರ ಉತ್ತರ ನೀಡಿಲ್ಲ, ಇಡೀ ದೇಶಕ್ಕೆ ಸಂದೇಶ ರವಾನಿಸಿದ್ದೀರಿ. ನಮ್ಮ ಅಧಿಕಾರ ನಶ್ವರ, ನಾವು ಮಾಡುವ ಸಾಧನೆ ಅಜರಾಮರ, ಮತದಾರರೇ ಈಶ್ವರ" ಎಂದು ಹೇಳಿದರು.

ಇದೇ ವೇಳೆ ಮಾತನಾಡಿದ ಮಾಗಡಿ ಶಾಸಕ ಹೆಚ್.ಸಿ.ಬಾಲಕೃಷ್ಣ, ಪರೋಕ್ಷವಾಗಿ ಡಿಕೆ ಶಿವಕುಮಾರ್ ಮುಂದಿನ ಸಿಎಂ ಎಂದು ಹೇಳಿದರು.

ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ

ಕಾಯ್ದೆಯಡಿ ಪ್ರಕರಣವನ್ನು ಸಹ ದಾಖಲು ಮಾಡಿಕೊಳ್ಳಲಾಗಿದೆ. ಈ ಸಂಬಂಧ ಮಿಮ್ಸ್ ಆಸ್ಪತ್ರೆ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಮಂಡ್ಯ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಮಂಡ್ಯದ 8 ವರ್ಷದ ಬಾಲಕಿ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಜವಾಗಿ ಏನು ನಡೆಯಿತು ಎನ್ನುವುದರ ಬಗ್ಗೆ ಬಾಲಕಿ ಸರಿಯಾಗಿ ಹೇಳುತ್ತಿಲ್ಲ. ಕುಟುಂಬಸ್ಥರು ಮತ್ತು ಬಾಲಕಿ ಹೇಳುವ ಹೇಳಿಕೆಯಲ್ಲಿ ವ್ಯತ್ಯಾಸವಿದೆ. ಸೆಂಟ್ರಲ್ ಠಾಣಾ ಮಹಿಳಾ ಪೊಲೀಸ್ ಅಧಿಕಾರಿ ತನಿಖೆ ನಡೆಸುತ್ತಿದ್ದಾರೆ ಎಂದು ವಿವರಿಸಿದರು. ಸಿಡಿಪಿಒ ಅಧಿಕಾರಿಗಳು ಸಮಾಲೋಚನೆ ಮಾಡುತ್ತಿದ್ದು, ಬಾಲಕಿ ಸರಿಯಾದ ರೀತಿ ಮಾಹಿತಿ ನೀಡುತ್ತಿಲ್ಲ, ಆಕೆಗೆ ಕೌನ್ಸಿಲಿಂಗ್ ಅವಶ್ಯಕತೆ ಇದೆ. ಮೂವರು ಹುಡುಗರು ಹಲ್ಲೆ ಮಾಡಿದ್ದಾರೆ ಅಂತ ಮಾತ್ರ ಹೇಳುತ್ತಿದ್ದು, ವೈದ್ಯಕೀಯ ಪರೀಕ್ಷೆ ಕೂಡ ಮಾಡಲಾಗುತ್ತಿದೆ. ತನಿಖೆ ಬಳಿಕ ಏನು ಎಂಬುದು ಗೊತ್ತಾಗಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಶಕ್ತಿ ಕೇಂದ್ರ ವಿಧಾನಸೌಧ

(KITE)ರ ಎರಡನೇ ಆವೃತ್ತಿಯ ಸಮಾವೇಶಕ್ಕೆ ರಾಜ್ಯವು ಪ್ರವಾಸೋದ್ಯಮ ಇಲಾಖೆಯ ಮೂಲಕ ಸಜ್ಜಾಗಿದ್ದು, ಫೆಬ್ರವರಿ 26ರಿಂದ 28ರವರೆಗೆ ಕರ್ನಾಟಕ ಇಂಟರ್ ನ್ಯಾಷನಲ್ ಟ್ರಾವೆಲ್ ಎಕ್ಸ್ ಪೋ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಹೇಳಿದರು. ವಿಧಾನಸೌಧವು ಇತರ ಹಲವು ಸ್ಥಳಗಳಂತೆ ಬೆಂಗಳೂರಿನ ಪ್ರವಾಸೋದ್ಯಮ ತಾಣವಾಗಿದೆ. ಫೆ.26 ರಿಂದ ಬೆಂಗಳೂರಿನಲ್ಲಿ ನಡೆಯಲಿರುವ ಮೂರು ದಿನಗಳ ಕರ್ನಾಟಕ ಅಂತರರಾಷ್ಟ್ರೀಯ ಪ್ರಯಾಣ ಪ್ರದರ್ಶನದಲ್ಲಿ ಭಾಗವಹಿಸುವ ಜನರಿಗೆ ವಿಧಾನಸಭೆ ಮತ್ತು ಪರಿಷತ್ತಿನ ಸಭಾಂಗಣಗಳು, ಗ್ಯಾಲರಿಗಳು ಮತ್ತು ವಿಧಾನಸೌಧದ ಕಾರಿಡಾರ್‌ಗಳಿಗೆ ಭೇಟಿ ನೀಡಲು ಅವಕಾಶ ನೀಡಲಾಗುವುದು ಎಂದು ತಿಳಿಸಿದರು.

400ಕ್ಕೂ ಹೆಚ್ಚು ಖರೀದಿದಾರರು ಮತ್ತು ಮಾರಾಟಗಾರರು, 150 ಪ್ರದರ್ಶಕರು ಮತ್ತು 25 ನೋಂದಾಯಿತ ದೇಶಗಳಿಂದ ಅನೇಕ ಪಾಲುದಾರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಭಾಗವಾಗಿ, ರಾಜ್ಯವಿವಿಧ ಸ್ಥಳಗಳಿಗೆ ದೇಶೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸ ನಿರ್ವಾಹಕರು ಮತ್ತು ಪಾಲುದಾರರಿಗಾಗಿ ಪ್ರವಾಸಗಳನ್ನು ಆಯೋಜಿಸಲಾಗುವುದು. ಕಾರ್ಯಕ್ರಮದ ಭಾಗವಾಗಿ, ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳ ಸಂಘವು ರಿಯಾಯಿತಿ ದರದಲ್ಲಿ ಮತ್ತು ಭಾಗವಹಿಸುವವರಿಗೆ ಉಚಿತವಾಗಿ ಹೋಟೆಲ್‌ಗಳಲ್ಲಿ ವಾಸ್ತವ್ಯವನ್ನು ನೀಡುವ ಮೂಲಕ ತಮ್ಮ ಬೆಂಬಲವನ್ನು ನೀಡಿವೆ.

ರಾಜ್ಯದ ಪ್ರಖ್ಯಾತ ಪ್ರವಾಸಿ ತಾಣಗಳಲ್ಲದೇ, ಅಲ್ಪ ಪರಿಚಿತ ಪ್ರವಾಸಿ ತಾಣಗಳನ್ನು ಈ ಸಂದರ್ಭದಲ್ಲಿ ಎಲ್ಲರಿಗೂ ಪ್ರದರ್ಶನ ಮಾಡುವ ಮೂಲಕ ಎಲ್ಲರನ್ನೂ ಒಳಗೊಳ್ಳುವ ಮೂಲಕ ಅಭಿವೃದ್ಧಿ ಮಾಡುವ ಉದ್ದೇಶವನ್ನು ಹೊಂದಿದ್ದೇವೆ. ಈ ಸುಸಂದರ್ಭದಲ್ಲಿ ಪ್ರವಾಸೋದ್ಯಮ ವಲಯದ ಎಲ್ಲಾ ಭಾಗಿದಾರರನ್ನು ನಮ್ಮ ರಾಜ್ಯದ ಪ್ರವಾಸೋದ್ಯಮ ನಕಾಶೆಯನ್ನು ಪ್ರಜ್ವಲಿಸುವಂತೆ ಮಾಡಲು ನಾನು ಆಹ್ವಾನ ನೀಡುತ್ತಿದ್ದೇನೆಂದು ಹೇಳಿದರು.

ಈ ಸಂದರ್ಭದಲ್ಲಿ ಹಾಜರಿದ್ದ ಮುಖ್ಯ ಕಾರ್ಯದರ್ಶಿ ಶಾಲಿನಿ ರಾಜನೇಶ್, ಪ್ರವಾಸೋದ್ಯಮ ಇಲಾಖೆ ಮತ್ತು ಪಾಲುದಾರರಿಗೆ ಕರ್ನಾಟಕಕ್ಕೆ ವಿಶಿಷ್ಟ ಮತ್ತು ದೊಡ್ಡ ಹೂಡಿಕೆಗಳನ್ನು ಆಕರ್ಷಿಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು, ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ಮತ್ತು ಇತರ ಪಾಲುದಾರರಿಗೆ ದೀರ್ಘಾವಧಿಯ ಹೂಡಿಕೆ ಒಪ್ಪಂದಗಳತ್ತ ಗಮನಹರಿಸುವಂತೆ ತಿಳಿಸಿದರು.

ಸಂಸತ್ತಿನಲ್ಲಿ ಪ್ರದರ್ಶನ ಕಾಣಲಿದೆ 'ರಾಮಾಯಣ: ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ'

ನವದೆಹಲಿ, ಫೆ.2– ಚಲನಚಿತ್ರ ವಿತರಣಾ ಕಂಪನಿ ಗೀಕ್ ಪಿಕ್ಚರ್ಸ್ 1993ರ ಜಪಾನೀಸ್–ಭಾರತೀಯ ಅನಿಮೇಟೆಡ್ ಚಿತ್ರ 'ರಾಮಾಯಣ: ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ'ದ ವಿಶೇಷ ಪ್ರದರ್ಶನವನ್ನು ಫೆಬ್ರುವರಿ 15 ರಂದು ಸಂಸತ್ತಿನಲ್ಲಿ ಆಯೋಜಿಸಲು ಸಿದ್ಧವಾಗಿದೆ ಎಂದು ಭಾನುವಾರ ತಿಳಿಸಿದೆ.

ಪತ್ರಿಕಾ ಪ್ರಕಟಣೆ ಪ್ರಕಾರ, ಚಿತ್ರ ಪ್ರದರ್ಶನದಲ್ಲಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಮತ್ತು ಸಂಸತ್ತಿನ ಸದಸ್ಯರು ಮತ್ತು ಸಾಂಸ್ಕೃತಿಕ ವಲಯಗಳ ವಿಶೇಷ ಆಹ್ವಾನಿತರು ಭಾಗವಹಿಸಲಿದ್ದಾರೆ.

ಚಿತ್ರ ಪ್ರದರ್ಶನಕ್ಕೆ ಭಾರತದ ಸಂಸತ್ತು ಅವಕಾಶ ನೀಡುತ್ತಿರುವುದಕ್ಕೆ ನಾವು ಆಳವಾಗಿ ಕೃತಜ್ಞತೆ ಸಲ್ಲಿಸುತ್ತೇವೆ. ನಮ್ಮ ಕೆಲಸವನ್ನು ಇಂತಹ ಗೌರವಾನ್ವಿತ ಮತ್ತು ಪ್ರಮುಖ ಮಟ್ಟದಲ್ಲಿ ಗುರುತಿಸುವುದು ಒಂದು ದೊಡ್ಡ ಗೌರವವಾಗಿದೆ. ಈ ಪ್ರದರ್ಶನವು ಕೇವಲ ಚಿತ್ರದ ಪ್ರದರ್ಶನವಲ್ಲ. ಬದಲಿಗೆ, ನಮ್ಮ ಶ್ರೀಮಂತ ಪರಂಪರೆ ಮತ್ತು ರಾಮಾಯಣದ ಕಥೆಯ ಆಚರಣೆಯಾಗಿದೆ. ಇದು ನಮಗೆ ಸ್ಫೂರ್ತಿ ಮತ್ತು ಮಾರ್ಗದರ್ಶನ ನೀಡುತ್ತಿದೆ ಎಂದು ಗೀಕ್ ಪಿಕ್ಚರ್ಸ್‌ನ ಸಹ–ಸಂಸ್ಥಾಪಕ ಅರ್ಜುನ್ ಅಗರ್ವಾಲ್ ಹೇಳಿಕೆಯಲ್ಲಿ ತಿಳಿಸಿದ್ದಾರೆ. 'ರಾಮಾಯಣ: ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ' ಭಾರತದಲ್ಲಿ ಹಿಂದಿ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಅದರ ಮೂಲ ಇಂಗ್ಲಿಷ್ ಆವೃತ್ತಿಯೊಂದಿಗೆ ಜ.24ರಂದು 4K ಸ್ವರೂಪದಲ್ಲಿ ಬಿಡುಗಡೆಯಾಯಿತು. 'ರಾಮಾಯಣ: ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ' ಚಿತ್ರವನ್ನು ಯುಗೋ ಸಾಕೋ, ರಾಮ್ ಮೋಹನ್ ಮತ್ತು ಕೊಯಿಚಿ ಸಸಾಕಿ ನಿರ್ದೇಶಿಸಿದ್ದಾರೆ.

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ಸೋಮವಾರ 3 ಫೆಬ್ರವರಿ 2025

ಮನ್‌ಮುಲ್ ಚುನಾವಣೆ: ಕಾಂಗ್ರೆಸ್ ಮೇಲುಗೈ, ಜೆಡಿಎಸ್–ಬಿಜೆಪಿ ಮೈತ್ರಿಗೆ ಮುಖಭಂಗ

● ಏಳು ನಿರ್ದೇಶಕ ಸ್ಥಾನಗಳ ಫಲಿತಾಂಶ ಪ್ರಕಟ ● ಉಳಿದೈದು ಸ್ಥಾನಕ್ಕೆ ನ್ಯಾಯಾಲಯದ ತಡೆಯಾಜ್ಞೆ

ಮಂಡ್ಯ,ಫೆ.2– ಪ್ರತಿಷ್ಠೆ ಹಾಗೂ ತೀವ್ರ ಕುತೂಹಲದ ಮನ್‌ಮುಲ್ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಗಳ ಚುನಾವಣೆಯಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿದ್ದು, ಬಿಜೆಪಿ–ಜೆಡಿಎಸ್ ಮೈತ್ರಿಗೆ ಮುಖಭಂಗವಾಗಿದೆ.

ಮನ್‌ಮುಲ್‌ನ ಐದು ವರ್ಷಗಳ ಆಡಳಿತ ಮಂಡಳಿಯ 12 ನಿರ್ದೇಶಕ ಸ್ಥಾನಗಳ ಪೈಕಿ 7 ಸ್ಥಾನಗಳ ಫಲಿತಾಂಶ ಪ್ರಕಟಗೊಂಡಿದ್ದು, ಉಳಿದ 5 ಸ್ಥಾನಗಳ ಫಲಿತಾಂಶ ಪ್ರಕಟಕ್ಕೆ ನ್ಯಾಯಾಲಯ ತಡೆಯಾಜ್ಞೆ ನೀಡಿರುವುದರಿಂದ ಅಧಿಕೃತ ಪ್ರಕಟ ಮಾಡಿಲ್ಲ.

ಮನ್‌ಮುಲ್ ಚುನಾವಣೆಯ 12 ನಿರ್ದೇಶಕ ಸ್ಥಾನಗಳಿಗೆ 26 ಮಂದಿ ಸ್ಪರ್ಧಿಸಿದ್ದರು. ಅದರಂತೆ ಭಾನುವಾರ ಮತದಾನ ನಡೆದು ಏಳು ತಾಲೂಕುಗಳ ಪೈಕಿ ನಾಲ್ಕು ಕ್ಷೇತ್ರಗಳ ಫಲಿತಾಂಶ ಅಧಿಕೃತವಾಗಿ ಪ್ರಕಟಗೊಂಡಿದ್ದು, ಉಳಿದ ಮೂರು ತಾಲೂಕುಗಳ ಫಲಿತಾಂಶಕ್ಕೆ ನ್ಯಾಯಾಲಯ ತಡೆ ನೀಡಿದೆ.

ಮಂಡ್ಯ, ನಾಗಮಂಗಲ, ಪಾಂಡವಪುರ, ಶ್ರೀರಂಗಪಟ್ಟಣ ತಾಲೂಕುಗಳ ಫಲಿತಾಂಶ ಪ್ರಕಟಗೊಂಡಿದೆ. ಮಂಡ್ಯ ಕ್ಷೇತ್ರದ ಮೂರು ಸ್ಥಾನಗಳ ಪೈಕಿ ಒಂದು ಕಾಂಗ್ರೆಸ್ ಹಾಗೂ ಎರಡು ಜೆಡಿಎಸ್ ಬೆಂಬಲಿತರು ಗೆಲುವು ಸಾಧಿಸಿದ್ದಾರೆ. ನಾಗಮಂಗಲದ ಎರಡು ಸ್ಥಾನ ಹಾಗೂ ಶ್ರೀರಂಗಪಟ್ಟಣದ ಒಂದು ಸ್ಥಾನ ಕಾಂಗ್ರೆಸ್ ಪಾಲಾಗಿದ್ದರೆ, ಪಾಂಡವಪುರ ಒಂದು ಸ್ಥಾನ ಜೆಡಿಎಸ್ ಜಯಗಳಿಸಿದೆ.


ಮಂಡ್ಯ ಕ್ಷೇತ್ರದ ಮೂರು ಸ್ಥಾನಗಳಲ್ಲಿ ಕಾಂಗ್ರೆಸ್ ಬೆಂಬಲಿತ ಹಾಲಿ ನಿರ್ದೇಶಕ ಯು.ಸಿ.ಶಿವಕುಮಾರ್, ಜೆಡಿಎಸ್ ಬೆಂಬಲಿತ ಬಿ.ಆರ್.ರಾಮಚಂದ್ರ ಹಾಗೂ ಎಂ.ಎಸ್.ರಘುನಂದನ್ ಗೆಲುವು ಸಾಧಿಸಿದ್ದಾರೆ. ಪಾಂಡವಪುರದಿಂದ ಜೆಡಿಎಸ್ ಬೆಂಬಲಿತ ಸಿ.ಶಿವಕುಮಾರ್ ಜಯಭೇರಿ ಬಾರಿಸಿದ್ದಾರೆ. ನಾಗಮಂಗಲ ಎರಡು ಸ್ಥಾನಗಳು ಕಾಂಗ್ರೆಸ್ ಬೆಂಬಲಿತ ವಿಧಾನಪರಿಷತ್ ಮಾಜಿ ಸದಸ್ಯ ಎನ್.ಅಪ್ಪಾಜಿಗೌಡ, ಹಾಲಿ ನಿರ್ದೇಶಕ ಲಕ್ಷ್ಮೀನಾರಾಯಣ ಅವರಿಗೆ ವಿಜಯಲಕ್ಷ್ಮಿ ಒಲಿದಿದ್ದಾಳೆ. ಶ್ರೀರಂಗಪಟ್ಟಣದ ಒಂದು ಸ್ಥಾನ ಕಾಂಗ್ರೆಸ್ ಬೆಂಬಲಿತ ಹಾಲಿ ಅಧ್ಯಕ್ಷ ಬಿ.ಬೋರೇಗೌಡ ಜಯ ಗಳಿಸಿದ್ದಾರೆ.

ಮದ್ದೂರು, ಮಳವಳ್ಳಿ, ಕೆ.ಆರ್.ಪೇಟೆಯ ಮೂರು ತಾಲೂಕುಗಳ ನಿರ್ದೇಶಕ ಸ್ಥಾನಗಳ ಮತದಾನ ಮತ ಎಣಿಕೆ ನಡೆದಿದ್ದು, ಕಾಂಗ್ರೆಸ್ ಬೆಂಬಲಿತರು ಹಾಗೂ ಜೆಡಿಎಸ್–ಬಿಜೆಪಿ ಮೈತ್ರಿ ಬಂಡಾಯ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ ಎಂದು ತಿಳಿದು ಬಂದಿದ್ದು, ಆ ಅಭ್ಯರ್ಥಿಗಳು ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದ್ದು.

ಮದ್ದೂರು ಕ್ಷೇತ್ರದ ಚುನಾವಣೆ ಫಲಿತಾಂಶವನ್ನು ನ್ಯಾಯಾಲಯ ತಡೆಹಿಡಿದಿದ್ದರೂ ಅಭ್ಯರ್ಥಿಗಳಾದ ಎಸ್.ಪಿ.ಸ್ವಾಮಿ ಮತ್ತು ಹರೀಶ್‌ಬಾಬು ಹಾಗೂ ಕೆ.ಆರ್.ಪೇಟೆಯ ಡಾಲು ರವಿ ಮತ್ತು ಎಂ.ಬಿ.ಹರೀಶ್ ಅವರು ಗೆಲುವಿನ ವಿಶ್ವಾಸದಲ್ಲಿದ್ದರು. ನಮಗೆ ಮತದಾರರ ಮೇಲೆ ನಂಬಿಕೆ, ವಿಶ್ವಾಸವಿದ್ದು, ಅವರು ನಮ್ಮನ್ನು ಕೈಬಿಡುವುದಿಲ್ಲವೆಂದು ನಂಬಿದ್ದೇವೆ. ನಮಗೆ ಯಾವುದೇ ಆತಂಕ, ಭಯ ಇಲ್ಲ. ಫಲಿತಾಂಶ ಬರುವವರೆಗೂ ಕಾಯುತ್ತೇವೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಹಿಂದಿನ ಆಡಳಿತ ಮಂಡಳಿಯಲ್ಲಿದ್ದವರ ಪೈಕಿ ಮಂಡ್ಯದಿಂದ ಬಿ.ಆರ್.ರಾಮಚಂದ್ರ, ಎಂ.ಎಸ್.ರಘುನಂದನ್, ಯು.ಸಿ.ಶಿವಕುಮಾರ್, ಶ್ರೀರಂಗಪಟ್ಟಣದಿಂದ ಬಿ.ಬೋರೇಗೌಡ ಮರು ಆಯ್ಕೆಯಾಗಿದ್ದರೆ, ನಾಗಮಂಗಲದಿಂದ ಆಯ್ಕೆಯಾಗಿದ್ದ ನೆಲ್ಲೀಗೆರೆ ಬಾಲು, ಪಾಂಡವಪುರದಿಂದ ಚುನಾಯಿತರಾಗಿದ್ದ ಕಾಡೇನಹಳ್ಳಿ ರಾಮಚಂದ್ರ ಪರಾಭವಗೊಂಡಿದ್ದಾರೆ.

ಇಬ್ಬರು ಬೆಂಬಲಿತರನ್ನು ಗೆಲ್ಲಿಸುವಲ್ಲಿ ಪುಟ್ಟರಾಜು ಯಶಸ್ವಿ



ಮನ್‌ಮುಲ್ ನಿರ್ದೇಶಕ ಸ್ಥಾನಕ್ಕೆ ಪಾಂಡವಪುರ ತಾಲೂಕಿನಿಂದ ಚುನಾಯಿತರಾದ ಶಿವಕುಮಾರ್ ಅವರನ್ನು ಬೆಂಬಲಿಗರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಗುರುಸ್ವಾಮಿ, ಚಲುವರಾಜು, ಪಾಂಡವಪುರ ತಾಲೂಕು ಜೆಡಿಎಸ್ ಅಧ್ಯಕ್ಷ ಮಲ್ಲೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ವಾಸು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಯಶವಂತ್, ಹೌಸಿಂಗ್ ಬೋರ್ಡ್ ಅಧ್ಯಕ್ಷ ರವಿಕುಮಾರ್, ಜೆಡಿಎಸ್ ಮುಖಂಡರಾದ ಹೊಸಕೋಟೆ ಪುಟ್ಟಣ್ಣ, ವಡ್ಡರಹಳ್ಳಿ ನಿಂಗೇಗೌಡ, ಹುಳ್ಳೆ ತಿಮ್ಮೇಗೌಡ ಸೇರಿದಂತೆ ಪಾಂಡವಪುರ ತಾಲೂಕಿನ ಹಲವು ಮಂದಿ ಜೆಡಿಎಸ್ ಮುಖಂಡರು ಉಪಸ್ಥಿತರಿದ್ದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮತ್ತೆ ತಮ್ಮ ತಂತ್ರಗಾರಿಕೆ ಪ್ರದರ್ಶಿಸಿದ್ದು, ತಮ್ಮ ಅಣ್ಣನ ಮಗ ಶಿವಕುಮಾರ್‌ರನ್ನು ಅನಾಯಾಸವಾಗಿ ಗೆಲ್ಲಿಸುವಲ್ಲಿ ಯಶಸ್ವಿಯಾದರೆ, ಸಿಎಸ್ಪಿ ಬೆಂಬಲಿಗರಾಗಿರುವ ಮಂಡ್ಯದ ಬಿ.ಆರ್.ರಾಮಚಂದ್ರ ಸಹ ಪ್ರಚಂಡ ಜಯಭೇರಿ ಭಾರಿಸಿದ್ದಾರೆ.

ಕಳೆದ ಆರು ತಿಂಗಳಿನಿಂದ ಪಾಂಡವಪುರ ತಾಲೂಕಿನಲ್ಲಿ ಸತತವಾಗಿ ಗೆಲುವು ಸಾಧಿಸಲು ಶ್ರಮಿಸುತ್ತಿದ್ದ ಪುಟ್ಟರಾಜು ಅವರ ಅಣ್ಣನ ಮಗ ಶಿವಕುಮಾರ್ ಪಾಂಡವಪುರದ 124 ಮತಗಳ ಪೈಕಿ 98 ಮತಗಳನ್ನು ಪಡೆದು ಭರ್ಜರಿ ಗೆಲುವು ಸಾಧಿಸಿದ್ದಾರೆ.

ಮನ್‌ಮುಲ್ ಚುನಾವಣೆಯಲ್ಲಿ ಜಿಲ್ಲೆಯ ಹಲವೆಡೆ ಜೆಡಿಎಸ್‌ಗೆ ಹಿನ್ನಡೆಯಾಗಿದ್ದರೂ ಪಾಂಡವಪುರ ಮತ್ತು ಮಂಡ್ಯದಲ್ಲಿ ಜೆಡಿಎಸ್ ಗೆಲುವು ಸಾಧಿಸಲು ಸಿ.ಎಸ್.ಪುಟ್ಟರಾಜು ಅವರ ತಂತ್ರಗಾರಿಕೆ ಮತ್ತು ಶ್ರಮ ಇದೆ.

ಕೆ.ಆರ್.ಪೇಟೆ ಪಿಎಲ್‌ಡಿ ಬ್ಯಾಂಕ್ ಚುನಾವಣೆ: ಇಬ್ಬರು ಕಾಂಗ್ರೆಸ್ ಬೆಂಬಲಿಗರ ಅವಿರೋಧ ಆಯ್ಕೆ, 35 ಮಂದಿ ಕಣದಲ್ಲಿ

ಕೆಆರ್.ಪೇಟೆ, ಫೆ2–ಫೆ8ರಂದು ತಾಲೂಕು ಪ್ರಾಥಮಿಕ ಕೃಷಿ ಭೂ ಅಭಿವೃದ್ಧಿ ಸಹಕಾರ ಬ್ಯಾಂಕ್(ಪಿಎಲ್‌ಡಿ ಬ್ಯಾಂಕ್) ನೂತನ ಆಡಳಿತ ಮಂಡಳಿಯ 14 ನಿರ್ದೇಶಕರ ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ನಾಮಪತ್ರ ವಾಪಸ್ ಪಡೆಯಲು ಕಡೆಯ ದಿನವಾದ ಇಂದು 28 ಮಂದಿ ತಮ್ಮ ನಾಮಪತ್ರವನ್ನು ವಾಪಸ್ ಪಡೆದಿದ್ದು, ಎರಡು ಕ್ಷೇತ್ರದಲ್ಲಿ ಇಬ್ಬರು ಕಾಂಗ್ರೆಸ್ ಬೆಂಬಲಿತರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಂತಿಮವಾಗಿ ಕಾಂಗ್ರೆಸ್ ಹಾಗೂ ಜೆಡಿಎಸ್–ಬಿಜೆಪಿ ಮೈತ್ರಿ ಪಕ್ಷಗಳ ಅಭ್ಯರ್ಥಿಗಳು ಸೇರಿ 12 ಕ್ಷೇತ್ರಗಳಿಗೆ 35 ಮಂದಿ ಕಣದಲ್ಲಿದ್ದಾರೆ.

ಅವಿರೋಧ ಆಯ್ಕೆ: 5ನೇ ವೃತ್ತದಿಂದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಎಂ.ಆರ್.ರಮೇಶ್(ಸಿಮೆಂಟ್ ಮಂಜು) ಹಾಗೂ 6ನೇ ವೃತ್ತದಿಂದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ವಾಳಗೂರು ಜಗದೀಶ್ ಅವಿರೋಧ ಆಯ್ಕೆಯಾಗಿದ್ದಾರೆ.

ಅವಿರೋಧ ಆಯ್ಕೆ ಅಭಿನಂದನೆ: ಪಿಎಲ್‌ಡಿ ಬ್ಯಾಂಕ್ ಚುನಾವಣೆಯಲ್ಲಿ 5ನೇ ವೃತ್ತದಿಂದ ಅವಿರೋಧವಾಗಿ ಆಯ್ಕೆಯಾದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಎಂ.ಆರ್.ರಮೇಶ್ (ಸಿಮೆಂಟ್ ಮಂಜು) ಅವರನ್ನು ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯರಾದ ಕಿಕ್ಕೇರಿ ಸುರೇಶ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕಬ್ಬಲಗೆರೆಪುರ ಪುಟ್ಟಸ್ವಾಮೀಗೌಡ, ಬೂಕನಕೆರೆ ಅಡಕೆ ಬಿ.ಎಸ್.ಮಹೇಶ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾದ ಏಜಾಸ್‌ಪಾಷಾ, ಶಂಭು ಮತ್ತಿತರರು ಅಭಿನಂದಿಸಿದರು.

ಪಾಲಹಳ್ಳಿ ಗ್ರಾಪಂಗೆ ಉಪಾಧ್ಯಕ್ಷರ ಆಯ್ಕೆ



ಪಾಲಹಳ್ಳಿ ಗ್ರಾಪಂಗೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಶ್ರೀಮತಿ ಆಶಾ ತಿಮ್ಮೇಗೌಡರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಜೆಡಿಎಸ್ ಮುಖಂಡ ಪಿ.ಎಸ್.ರಮೇಶ್ ಬಾಬು, ಗ್ರಾಪಂ ಅಧ್ಯಕ್ಷ ಆದರ್ಶ್, ಮುಖಂಡರುಗಳು ಇದ್ದಾರೆ.

ಮೈಕ್ರೋ ಫೈನಾನ್ಸ್‌ನವರು ಮನೆ ಬಳಿ ಬಂದು ಕಿರುಕುಳ ಕೊಟ್ಟರೆ ನನಗೆ ಫೋನ್ ಮಾಡಿ

ಮಂಡ್ಯ ಜನರಿಗೆ ಅಭಯ ಕೊಟ್ಟ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ



ಶ್ರೀ ಭೂಮಿ ಸಿದ್ದೇಶ್ವರಸ್ವಾಮಿ ದೇವಾಲಯ ಜೀರ್ಣೋದ್ಧಾರ ಕಾರ್ಯಕ್ರಮವನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು.

ಮಂಡ್ಯ,ಫೆ.2– ಜಿಲ್ಲೆಯಲ್ಲಿ ಮೈಕ್ರೋ ಫೈನಾನ್ಸ್‌ನವರ ಉಪಟಳ ಜಾಸ್ತಿಯಾಗಿದ್ದು, ಅವರಲ್ಲಿ ಯಾರೇ ಆಗಲಿ ನಿಮ್ಮ ಮನೆ ಬಳಿಗೆ ಬಂದು ಕಿರುಕುಳ ನೀಡಿದರೆ ತಕ್ಷಣವೇ ನನಗೆ ದೂರವಾಣಿ ಕರೆ ಮಾಡಿ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಭಯ ನೀಡಿದರು.

ತಾಲೂಕಿನ ಸಂತೆಕಸಲಗೆರೆ ಗ್ರಾಮದಲ್ಲಿ ಶ್ರೀ ಭೂಮಿ ಸಿದ್ದೇಶ್ವರಸ್ವಾಮಿ ದೇವಾಲಯ ಜೀರ್ಣೋದ್ಧಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಜನತೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ನಿಮಗೆ ಯಾರೇ ಮೈಕ್ರೋ ಫೈನಾನ್ಸ್‌ನವರು ಬಂದು ಕಿರುಕುಳ ನೀಡಿದರೆ ಹೆದರಬೇಡಿ. ರೌಡಿಗಳನ್ನು ಕರೆದುಕೊಂಡು ಬಂದು ಗಲಾಟೆ ಮಾಡಿದರೆ ತಕ್ಷಣ ನನಗೆ ಕರೆ ಮಾಡಿ, ನಾನಿದ್ದೇನೆ. ನಿಮ್ಮ ಜೀವ ಬಹಳ ಮುಖ್ಯ. ಯಾವುದೇ ಕಾರಣಕ್ಕೂ ಜೀವ ಕಳೆದುಕೊಳ್ಳುವ ಕೆಲಸ ಮಾಡಬೇಡಿ ಎಂದು ಮನವಿ ಮಾಡಿದರು.

ಬಡ್ಡಿ, ಚಕ್ರಬಡ್ಡಿ ವಿಧಿಸಿ ಜನರಿಗೆ ಹಿಂಸೆ ಕೊಡುತ್ತಿದ್ದಾರೆ. ಇದು ಅಮಾನವೀಯ. ಅಸಲು ತೀರುವುದೇ ಇಲ್ಲ ಎಂದ ಸಚಿವರು; ಹಳ್ಳಿಗಳ ಯುವಕರು ಆನ್ಲೈನ್ ಗೇಮ್‌ಗಳ ಚಟಕ್ಕೆ ಸಿಕ್ಕಿಕೊಳ್ಳುತ್ತಿದ್ದಾರೆ. ಅಲ್ಲಿಯೂ ಸಾಲಕ್ಕೆ ಅವರು ಸಿಕ್ಕಿಕೊಂಡು ಕೊನೆಗೆ ಸಾವಿಗೆ ಶರಣಾಗುತ್ತಿದ್ದಾರೆ. ಇದು ಅತ್ಯಂತ ಧಾರುಣ ಎಂದು ಕಳವಳ ವ್ಯಕ್ತಪಡಿಸಿದರು.

ನಾನು 2018ರಲ್ಲಿ ಸಿಎಂ ಆಗುವ ಮೊದಲು ಮಂಡ್ಯ ಜಿಲ್ಲೆಯಲ್ಲಿ 200ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಸರಣಿ ಸಾವುಗಳು ನನಗೆ ತೀವ್ರ ಆಘಾತ ಮಾಡುತ್ತಿದ್ದವು. ನಾನು ಮಂಡ್ಯಕ್ಕೆ ಬಂದು ಆತ್ಮಹತ್ಯೆ ಮಾಡಿಕೊಳ್ಳಬೇಡಿ ಎಂದು ರೈತರಲ್ಲಿ ಮನವಿ ಮಾಡಿದೆ. ಆಮೇಲೆ ನಾನು 25,000 ಕೋಟಿ ಸಾಲ ಮನ್ನಾ ಮಾಡಿದೆ. ಋಣಮುಕ್ತ ಕಾಯ್ದೆ ಜಾರಿಗೆ ತಂದೆ. ನಾನೇ ಸ್ವತಃ ರಾಷ್ಟ್ರಪತಿಗಳ ಬಳಿಗೆ ಹೋಗಿ ಕಾಯ್ದೆಗೆ ಅಂಕಿತ ಹಾಕಿಸಿಕೊಂಡು ಬಂದೆ ಎಂದು ಹೇಳಿದರು.

ಮೈಕ್ರೋ ಫೈನಾನ್ಸ್ ಉಪಟಳ ಕೆಲ ತಿಂಗಳ ಹಿಂದೆ ಚಾಮರಾಜನಗರದಲ್ಲಿ ಆರಂಭವಾಯಿತು. ರಾಜ್ಯದ ಉದ್ದಗಲಕ್ಕೂ ಸರಣಿ ಸಾವುಗಳು ಸಂಭವಿಸುತ್ತಿವೆ. ಆದರೆ, ನಮ್ಮ ರಾಜ್ಯದ ಕಾನೂನು ಸಚಿವರು ಇನ್ನೂ ಸಮಗ್ರವಾಗಿ ಚಿಂತನೆ ಮಾಡುತ್ತಿದ್ದಾರೆ! ಬೇರೆ ಯಾವುದೇ ವಿಷಯಕ್ಕೆ ವಿದ್ಯುತ್ ವೇಗದಲ್ಲಿ ನಿರ್ಧಾರ ಕೈಗೊಳ್ಳುವ ಸರಕಾರ ಮೈಕ್ರೋ ಫೈನಾನ್ಸ್‌ಗಳಿಂದ ಜನರನ್ನು ರಕ್ಷಣೆ ಮಾಡಲು ಮೀನಮೇಷ ಎಣಿಸುತ್ತಿದೆ. ಇದು ಯಾಕೆ ಎಂಬ ಅನುಮಾನ ಕಾಡುತ್ತಿದೆ ಎಂದು ತಿಳಿಸಿದರು.

ಹಳ್ಳಿಯ ಬದುಕು ಅಯೋಮಯವಾಗಿದೆ. ಹಳೆಯ ಕಾಲದ ಹಳ್ಳಿಗಳು ಮರೆಯಾಗುತ್ತಿವೆ. ಮಾನವೀಯ ಮೌಲ್ಯಗಳು ಅಳಿದು ಹೋಗುತ್ತಿವೆ. ಭಾರತ ಇಂದು ಜಗತ್ತಿನ ಮೂರನೇ ಅತಿದೊಡ್ಡ ಜಾಗತಿಕ ಶಕ್ತಿಯಾಗಿ ಹೊರಹೊಮ್ಮುತ್ತಿದೆ. ಆದರೆ, ಸಮಾಜ ಕಲುಷಿತವಾಗುತ್ತಿದೆ. ಯುವಪೀಳಿಗೆ ದಾರಿ ತಪ್ಪುತ್ತಿದೆ. ನಾವು ಬೆಳೆಯಬೇಕು, ಅಭಿವೃದ್ಧಿ ಹೊಂದಬೇಕು ಹಾಗೂ ನಮ್ಮ ಸಮಾಜ ಸಂತೋಷವಾಗಿರಬೇಕು ಎಂದು ಸಚಿವರು ಆಶಿಸಿದರು.

ಹಿಂದೆ ಸಮಾಜದಲ್ಲಿ ಸೇವಾ ಮನೋಭಾವ, ನಿಸ್ವಾರ್ಥತೆ ಇತ್ತು ಸಮಸ್ಯೆ ಬಂದರೆ ಗ್ರಾಮಸ್ಥರೇ ಕೂತು ಬಗೆಹರಿಸಿಕೊಳ್ಳುತ್ತಿದ್ದರು. ಈಗ ಅಂತಹ ಪರಿಸ್ಥಿತಿ ಇಲ್ಲ. ಸಣ್ಣ ತುಂಡು ಭೂಮಿಗಾಗಿ ಅಣ್ಣತಮ್ಮಂದಿರು ಜಗಳ ಮಾಡಿಕೊಂಡು ಪೊಲೀಸ್ ಠಾಣೆ, ಕೋರ್ಟ್ ಅಂತ ಅಲೆಯುತ್ತಿದ್ದಾರೆ. ನೆಮ್ಮದಿಯ ಬದುಕು ದೂರವಾಗಿದೆ. ಹಳ್ಳಿ ಅಭಿವೃದ್ಧಿಯಾಗಬೇಕು, ಆದರೆ ನಮ್ಮ ಮೌಲ್ಯಗಳನ್ನು ಬಿಟ್ಟುಕೊಡಬಾರದು ಎಂದು ಹೇಳಿದರು.

ಶ್ರೀ ಆದಿಚುಂಚನಗಿರಿ ಮಠದ ಪರಮಪೂಜ್ಯ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಡಾ.ನಿರ್ಮಲಾನಂದ ಮಹಾಸ್ವಾಮಿಗಳವರು ದಿವ್ಯ ಸಾನ್ನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ, ದೇಗುಲದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಎಸ್.ತಮ್ಮಣ್ಣ, ಉಪಾಧ್ಯಕ್ಷ ಶಿವಣ್ಣ ಸೇರಿದಂತೆ ಸಮಿತಿಯ ಎಲ್ಲ ಪದಾಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

ವಿಸಿ ನಾಲೆ ನೂತನ ಸೇತುವೆ ಉದ್ಘಾಟನೆ




ನೂತನ ಸೇತುವೆಯನ್ನು ಉದ್ಘಾಟಿಸುತ್ತಿರುವ ಶಾಸಕರು

ಪಾಂಡವಪುರ, ಫೆ2 ತಾಲೂಕಿನ ಎಲೆಕೆರೆ ಹ್ಯಾಂಡ್‌ಪೋಸ್ಟ್‌ನಲ್ಲಿ ಒಂದು ಕೋಟಿ 20 ಲಕ್ಷರೂ ವೆಚ್ಚದಲ್ಲಿ ವಿಸಿ ನಾಲೆಗೆ ನಿರ್ಮಿಸಲಾಗಿರುವ ನೂತನ ಸೇತುವೆಯನ್ನು ಶಾಸಕ ದರ್ಶನ್‌ಪುಟ್ಟಣ್ಣಯ್ಯ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಎಲೆಕೆರೆ ಹ್ಯಾಂಡ್‌ಪೋಸ್ಟ್‌ನಲ್ಲಿ ವಿಸಿ ನಾಲೆ ಸೇತುವೆ ದುರಸ್ತಿಗೊಂಡಿದ್ದ ಹಿನ್ನೆಲೆಯಲ್ಲಿ ವಾಹನ ಸವಾರರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ 1.20 ಕೋಟಿ ರೂ. ವೆಚ್ಚದಲ್ಲಿ ವಿಸಿ ನಾಲೆಯ ಆಧುನೀಕರಣ ಕಾಮಗಾರಿಯ ಜತೆಯಲ್ಲಿ ಅಭಿವೃದ್ಧಿಪಡಿಸಲಾಗಿದೆ. ಸೇತುವೆ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ವಾಹನ ಸವಾರರಿಗೆ ಅನುಕೂಲ ಮಾಡಿಕೊಡಲು ಚಾಲನೆ ನೀಡಲಾಗಿದೆ ಎಂದರು. ಎಲೆಕೆರೆ ಹ್ಯಾಂಡ್‌ಪೋಸ್ಟ್ ಪ್ರಮುಖ ವೃತ್ತವನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ ಹ್ಯಾಂಡ್‌ಪೋಸ್ಟ್‌ನಲ್ಲಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಈ ಹಿಂದೆ ಇಲ್ಲಿ ಬಸ್ ನಿಲ್ದಾಣ ನಿರ್ಮಿಸಲು 75 ಲಕ್ಷ ರೂ. ಮಂಜೂರಾಗಿತ್ತು ಆದರೆ ಬಸ್ ನಿಲ್ದಾಣಕ್ಕೆ ಗುರುತಿಸಿದ್ದ ಸ್ಥಳ ಕಾವೇರಿ ನೀರಾವರಿ ನಿಗಮಕ್ಕೆ ಸೇರಿದ್ದರಿಂದಾಗಿ ಜಾಗದ ಸಮಸ್ಯೆಯಿಂದಾಗಿ ಬಸ್ ನಿಲ್ದಾಣ ನಿರ್ಮಿಸಲು ಸಾಧ್ಯವಾಗಲಿಲ್ಲ. ಇದರಿಂದ ಮಂಜೂರಾಗಿದ್ದ ಹಣ ವಾಪಸ್ಸಾಗಿದೆ ಇದೀಗ ಹೊಸದಾಗಿ ಸರ್ಕಾರದಿಂದ ಅನುದಾನ ಮಂಜೂರು ಮಾಡಿಸಿ ಬಸ್ ನಿಲ್ದಾಣ ನಿರ್ಮಿಸಲಾಗುವುದು ಎಂದು ಭರವಸೆ ನೀಡಿದರು.

ಫೆ.23ಕ್ಕೆ ಸಾಹಿತಿ ಎಸ್.ಎಲ್.ಭೈರಪ್ಪ ಅವರಿಗೆ ಹುಟ್ಟೂರು ಸಂತೆಶಿವರ ಗ್ರಾಮದಲ್ಲಿ ನಾಗರಿಕ ಸನ್ಮಾನ



ಚನ್ನರಾಯಪಟ್ಟಣ: ಸಾಹಿತಿ ಎಸ್.ಎಲ್.ಭೈರಪ್ಪ ಅವರಿಗೆ ಹುಟ್ಟೂರು ಸಂತೆಶಿವರ ಗ್ರಾಮದಲ್ಲಿ ಫೆ.23ಕ್ಕೆ ನಾಗರಿಕ ಸನ್ಮಾನ ಏರ್ಪಡಿಸಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ಪಟ್ಟಣದಲ್ಲಿ ಭಾನುವಾರ ಲಾಂಛನ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿ, ನಾಡಿನ ಶ್ರೇಷ್ಠ ಸಾಹಿತಿಯಾಗಿ ಸಾಹಿತ್ಯ ಕ್ಷೇತ್ರ ಶ್ರೀಮಂತಗೊಳಿಸಿದ ಕೀರ್ತಿ ಭೈರಪ್ಪ ಅವರಿಗೆ ಸಲ್ಲುತ್ತದೆ. ಸಂತೆಶಿವರ, ಅಗ್ರಹಾರ ಬೆಳಗುಲಿ ಸೇರಿ ಮೂರು ಕೆರೆಗಳಿಗೆ ನೀರು ಹರಿಸುವುದರಿಂದ ಕುಡಿಯುವ ನೀರಿಗೆ ಪ್ರಯೋಜನವಾಗುತ್ತದೆ. ಇದರಿಂದ ಸುತ್ತಲಿನ 20ಕ್ಕೂ ಹಳ್ಳಿಗಳಿಗೆ ಅನುಕೂಲವಾಗುತ್ತದೆ ಎಂದು 4 ವರ್ಷದ ಹಿಂದೆ ಮೈಸೂರಿನಲ್ಲಿ ನಾಡಹಬ್ಬ ದಸರಾ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದರು. ಅದಕ್ಕೆ ಮಂಜೂರಾತಿ ದೊರಕಿತು. ನಂತರ ಈ ಯೋಜನೆ ಅನುಷ್ಠಾನಗೊಳಿಸುವಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪಾತ್ರವೂ ಇದೆ ಎಂದರು.

ದ್ಯಾವಲಾಪುರ–ರಾಂಪುರದ ಗೇಟ್ ಬಳಿಯಿಂದ ಮೆರವಣಿಗೆ ಮೂಲಕ ಗ್ರಾಮಕ್ಕೆ ಕರೆತರಲಾಗುವುದು. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಾ. ಸಿ.ಎನ್.ಮಂಜುನಾಥ್, ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಮನವಿ ಮಾಡಲಾಗಿದೆ. ಅವರೆಲ್ಲರೂ ಪಾಲ್ಗೊಳ್ಳುವರು ಎಂದು ತಿಳಿಸಿದರು.

ಮುಖಂಡ ಎಂ.ಎ. ರಂಗಸ್ವಾಮಿ ಮಾತನಾಡಿ,ಅವರಿಗೆ ಸರಸ್ವತಿ ಸಮ್ಮಾನ್ ಪ್ರಶಸ್ತಿ ದೊರೆತಾಗ ಸ್ವಂತ ಗ್ರಾಮ ಸಂತೆಶಿವರದಲ್ಲಿ 2011ರಲ್ಲಿ ಅದ್ದೂರಿಯಾಗಿ ಅಭಿನಂದನೆ ಏರ್ಪಡಿಸಲಾಗಿತ್ತು ಅದೇ ರೀತಿ ಅವರಿಗೆ ಈ ಬಾರಿ ನಾಗರಿಕ ಸನ್ಮಾನ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಮತ್ತು ಸಂಸದ ಶ್ರೇಯಸ್ ಎಂ.ಪಟೇಲ್ ಭಾಗವಹಿಸುವರು ಎಂದು ತಿಳಿಸಿದರು. ರಶ್ಮೀ ಮಾತನಾಡಿದರು. ಮುಖಂಡ ಎಸ್.ಎಲ್. ಕೃಷ್ಣ ಪ್ರಸಾದ್, ತಾಲ್ಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಗಂಗೇಗೌಡ, ಮುಖಂಡರಾದ ಅನಂತರಾಮು, ರಾಜಣ್ಣ, ಚಿರಂಜೀವಿ ಭಾಗವಹಿಸಿದ್ದರು.

ಟಿ20: ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ಸರಣಿ ಜಯ



ಮುಂಬೈ, ಫೆ.2– ಅಭಿಷೇಕ್ ಶರ್ಮಾ ಅವರ ಆಲ್‌ರೌಂಡ್ ಆಟದ ನೆರವಿನಿಂದ ಭಾರತ ಇಂಗ್ಲೆಂಡ್ ವಿರುದ್ಧದ ಅಂತಿಮ ಟಿ20 ಪಂದ್ಯದಲ್ಲಿ 150 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ 5 ಪಂದ್ಯಗಳ ಟಿ20 ಸರಣಿಯನ್ನು 4–1 ಅಂತರದಲ್ಲಿ ತನ್ನದಾಗಿಸಿಕೊಂಡಿದೆ.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 247ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಭಾರತ ನೀಡಿದ ಗುರಿ ಬೆನ್ನತ್ತಿದ ಇಂಗ್ಲೆಂಡ್ ಕೇವಲ 10.3 ಓವರ್‌ಗಳಲ್ಲಿ 97 ರನ್ ಗಳಿಸಿ ಸರ್ವಪತನ ಕಂಡು ಹೀನಾಯ ಸೋಲು ಅನುಭವಿಸಿತು.

ಭಾರತದ ಪರ ಇನ್ನಿಂಗ್ಸ್ ಆರಂಭಿಸಿದ ಸಂಜು ಸ್ಯಾಮ್ಸನ್ 2 ಸಿಕ್ಸರ್, 1 ಬೌಂಡರಿ ಒಳಗೊಂಡ 16 ರನ್ ಗಳಿಸಿ ವಿಕೆಟ್ ಒಪ್ಪಿಸಿದರೇ, ತಿಲಕ್ ವರ್ಮಾ 24 ರನ್ ಗಳಿಸಿ ಔಟಾದರು. ಉಳಿದಂತೆ ಶಿವಂ ದುಬೆ 30, ಹಾರ್ದಿಕ್ ಪಾಂಡ್ಯ ಹಾಗೂ ರಿಂಕು ಸಿಂಗ್ ತಲಾ 9 ರನ್ ಗಳಿಸಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಮಿಂಚಿನ ಬ್ಯಾಟಿಂಗ್ ನಡೆಸಿದ ಅಭಿಷೇಕ್ ಶರ್ಮಾ ಕ್ರೀಡಾಂಗಣದ ಮೂಲೆ ಮೂಲೆಗೂ ಚೆಂಡಿನ ದರ್ಶನ ಮಾಡಿಸಿದರು. ಇಂಗ್ಲೆಂಡ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಅಭಿಷೇಕ್ ಶರ್ಮಾ 17 ಎಸೆತಗಳಲ್ಲಿ ಅರ್ಧ ಸಿಡಿಸಿದರು. ಬಳಿಕ 37 ಎಸೆತಗಳಲ್ಲಿ ಶತಕ ಪೂರೈಸಿದರು. ಅಂತಿಮವಾಗಿ 54 ಎಸೆತಗಳಲ್ಲಿ 13 ಸಿಕ್ಸರ್, 7 ಬೌಂಡರಿ ಒಳಗೊಂಡ 135 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇಂಗ್ಲೆಂಡ್ ಪರ ಬ್ರೈಡನ್ ಕಾರ್ಸ್ 3, ಮಾರ್ಕ್ ವುಡ್ 2, ಜೋಫ್ರಾ ಆರ್ಚರ್, ಜೇಮಿ ಓವರ್‌ಟನ್, ಆದಿಲ್ ರಶೀದ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಭಾರತ ನೀಡಿದ ಬೃಹತ್ ಗುರಿ ಬೆನ್ನತ್ತಿದ ಇಂಗ್ಲೆಂಡ್ ತಂಡವನ್ನು ಅಲ್ಪ ಮೊತ್ತಕ್ಕೆ ಕಟ್ಟಿ ಹಾಕುವಲ್ಲಿ ಭಾರತದ ಬೌಲರ್‌ಗಳ ಯಶಸ್ವಿಯಾದರು. ಇಂಗ್ಲೆಂಡ್ ಪರ ಫಿಲ್ ಸಾಲ್ಟ್ 23 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್ ಒಳಗೊಂಡ 55 ರನ್ ಗಳಿಸಿದರೇ, ಜೇಕಬ್ ಬೇಥಲ್ 10 ರನ್ ಗಳಿಸಿದರು. ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಭಾರತದ ಪರ ಮೊಹಮ್ಮದ್ ಶಮಿ 3, ವರುಣ್ ಚಕ್ರವರ್ತಿ, ಶಿವಂ ದುಬೆ, ಅಭಿಷೇಕ್ ಶರ್ಮಾ ತಲಾ 2, ರವಿ ಬಿಷ್ಣೋಯಿ 1 ವಿಕೆಟ್ ಪಡೆದರು. ಅಭಿಷೇಕ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರೇ, ವರುಣ್ ಚಕ್ರವರ್ತಿ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಎ++ ಗ್ರೇಡ್ ನೀಡಲು ಲಂಚ: ಸಿಬಿಐನಿಂದ ದಾವಣಗೆರೆ ವಿವಿ ಪ್ರಾಧ್ಯಾಪಕಿ ಸೇರಿ 10 ಮಂದಿ ನ್ಯಾಕ್ ಸದಸ್ಯರ ಬಂಧನ

ದಾವಣಗೆರೆ, ಫೆ.2– ಎ++ ಗ್ರೇಡ್ ನೀಡುವ ವಿಚಾರದಲ್ಲಿ ಲಂಚ ಸ್ವೀಕರಿಸಿದ ಆರೋಪದ ಮೇಲೆ ದಾವಣಗೆರೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಗಾಯತ್ರಿ ದೇವರಾಜ ಸೇರಿದಂತೆ 10 ಮಂದಿ ನ್ಯಾಕ್ ಸದಸ್ಯರನ್ನು ಸಿಬಿಐ ಬಂಧಿಸಿದೆ.

ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತೆ ಮಂಡಳಿ (ನ್ಯಾಕ್) ತಂಡದ ಅಧ್ಯಕ್ಷರು ಮತ್ತು ಜೆಎನ್‌ಯು ಪ್ರೊಫೆಸರ್ ಸೇರಿದಂತೆ ಶಿಕ್ಷಣ ಸಂಸ್ಥೆಯ ಅಧಿಕಾರಿಗಳು ಸೇರಿದಂತೆ 10 ಸದಸ್ಯರನ್ನು ಬಂಧಿಸಲಾಗಿದೆ. ಇವರು ಆಂಧ್ರಪ್ರದೇಶದ ಗುಂಟೂರಿನಲ್ಲಿ ಕೆಎಲ್‌ಇಎಫ್ ವಿವಿಗೆ ನ್ಯಾಕ್ ಗ್ರೇಡ್ ಕೊಡುವ ವಿಚಾರದಲ್ಲಿ ಲಂಚ ಸ್ವೀಕರಿಸಿದ್ದರು. ಗಾಯತ್ರಿ ದೇವರಾಜ್ ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಸದ್ಯ ಮೈಕ್ರೋ ಬಯೋಲಜಿ ಪ್ರಾಧ್ಯಾಪಕಿಯಾಗಿದ್ದರು. ಪ್ರಕರಣದ ತನಿಖೆ ನಡೆಸುತ್ತಿರುವಾಗ, ಚೆನ್ನೈ, ಬೆಂಗಳೂರು, ವಿಜಯವಾಡ, ಪಲಮು, ಸಂಬಲ್‌ಪುರ, ಭೋಪಾಲ್, ಬಿಲಾಸ್‌ಪುರ, ಗೌತಮ್ ಬುದ್ಧ ನಗರ ಮತ್ತು ನವದೆಹಲಿ ಸೇರಿದಂತೆ ದೇಶಾದ್ಯಂತ 20 ಸ್ಥಳಗಳಲ್ಲಿ ಸಿಬಿಐ ದಾಳಿ ನಡೆಸಿತು. ಈ ವೇಳೆ 37 ಲಕ್ಷ ರೂಪಾಯಿ ನಗದು, 6 ಲ್ಯಾಪ್‌ಟಾಪ್‌ಗಳು, ಐಫೋನ್ 16 ಪ್ರೊ, ಚಿನ್ನದ ನಾಣ್ಯ ಸೇರಿದಂತೆ ಹಲವು ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಗುದ್ದಲಿಪೂಜೆ




ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮೈಸೂರು ಮಹಾನಗರಪಾಲಿಕೆ ವಾರ್ಡ್ ನಂ.18ರಲ್ಲಿ 15ನೇ ಹಣಕಾಸು ಅನುದಾನದಲ್ಲಿ ಒಟ್ಟು ಅಂದಾಜು 70 ಲಕ್ಷ ರೂ.ಗಳಲ್ಲಿ ಯಾದವಗಿರಿಯ ಅಡ್ಡ ರಸ್ತೆಗಳು, ಮೇದಾರ್ ಬ್ಲಾಕ್‌ನ ಅಡ್ಡರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಗುದ್ದಲಿಪೂಜೆ ನೆರವೇರಿಸಿದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಡಿ.ನಾಗಭೂಷಣ್, ಮಾಜಿ ಮೇಯರ್ ಬಿ.ಕೆ.ಪ್ರಕಾಶ್, ವಾರ್ಡ್ ಅಧ್ಯಕ್ಷ ಕುಮಾರ್, ದರ್ಶನ್ ಸುರೇಂದ್ರನಾಥ್, ತಿಮ್ಮಯ್ಯ, ಜಗನ್ನಾಥ್, ಕುಮಾರ್, ಬಾಲರಾಜ್, ರಮೇಶ್, ಶ್ರೀನಿವಾಸ್, ವೆಂಕಟೇಶ್, ಪಾಲಿಕೆ ಅಧಿಕಾರಿಗಳಾದ ಹೇಗಾನಂದ, ರಾಮಣ್ಣ, ಪಕ್ಷದ ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರು, ಬಡಾವಣೆ ನಿವಾಸಿಗಳು ಉಪಸ್ಥಿತರಿದ್ದರು.

ನಕ್ಸಲ್ ತೊಂಬಟ್ಟು ಲಕ್ಷ್ಮೀ ಶರಣಾಗತಿ

ಉಡುಪಿ:ಹಲವು ವರ್ಷಗಳ ಹಿಂದೆ ನಾಪತ್ತೆಯಾಗಿದ್ದ ಕುಂದಾಪುರ ತಾಲೂಕಿನ ತೊಂಬಟ್ಟುವಿನ ನಕ್ಸಲ್ ಲಕ್ಷ್ಮೀ ಭಾನುವಾರ (ಫೆ.2) ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿಯಲ್ಲಿ ಶರಣಾಗಿದ್ದಾರೆ.

ಶರಣಾಗತಿ ಮತ್ತು ಪುನರ್ವಸತಿ ಸಮಿತಿಯ ಸದಸ್ಯ ಶ್ರೀಪಾಲ್ ಜೊತೆ ನಕ್ಸಲ್ ಲಕ್ಷ್ಮಿ ಎಸ್‌ಪಿ ಕಚೇರಿಗೆ ಆಗಮಿಸಿದರು. ಅಲ್ಲಿ ಶರಣಾಗತಿ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಲಾಯಿತು. ಬಳಿಕ ಭದ್ರತೆಯೊಂದಿಗೆ ಡಿಸಿ ಕಚೇರಿಗೆ ಲಕ್ಷ್ಮಿಯನ್ನು ಪೊಲೀಸರು ಕರೆದೊಯ್ದರು. ಶರಣಾದ ನಕ್ಸಲ್ ಜೊತೆ ಆಕೆಯ ಸಹೋದರ ಮತ್ತು ಬಂಧುಗಳು ಹಾಜರಿದ್ದರು. ನಕ್ಸಲ್ ಚಟುವಟಿಕೆಗಳಲ್ಲಿ ಉಡುಪಿ ಜಿಲ್ಲೆಯ ವಿಕ್ರಂಗೌಡ ಹಾಗೂ ಲಕ್ಷ್ಮಿ ತೊಂಬಟ್ಟು ತೊಡಗಿಸಿಕೊಂಡಿದ್ದರು.

ಮೇಘಾಲಯದ ರಾಜ್ಯಪಾಲರಿಗೆ ಸನ್ಮಾನ



ವರಕೂಡಿನ ಶ್ರೀ ವರದರಾಜ ದೇವಸ್ಥಾನಕ್ಕೆ ಭೇಟಿ ನೀಡಿದ್ದ ಮೇಘಾಲಯದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರನ್ನು ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಗ್ರಾಮಸ್ಥರು ಸನ್ಮಾನಿಸಿದರು. ಈ ವೇಳೆ ಗ್ರಾಮಪಂಚಾಯಿತಿ ಅಧ್ಯಕ್ಷ ಕೃಷ್ಣ, ದೇವಸ್ಥಾನದ ಟ್ರಸ್ಟ್ ಅಧ್ಯಕ್ಷರಾದ ಮಹೇಶ್ ಬಾಲು, ವರಕೂಡು ಪ್ರಕಾಶ್, ಗ್ರಾಮದ ಮುಖಂಡರುಗಳಾದ ಸಣ್ಣೇಗೌಡ, ರಂಗಸ್ವಾಮಿ, ಮಹದೇವು ಮತ್ತು ಅರ್ಚಕರಾದ ಮಂಜುನಾಥ್, ಸುರೇಶ್‌ಬಾಬು, ಉಮೇಶ್, ವೆಂಕಟೇಶ್ ಇನ್ನಿತರರಿದ್ದರು.

ಕೇಂದ್ರ ಬಜೆಟ್‌ಗೆ ಪ್ರತಿಕ್ರಿಯೆ

ಮೈಸೂರು,ಫೆ.2(ಬಿಎಲ್‌ಯು/ಪಿಎಂ)– ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶನಿವಾರ ಮಂಡಿಸಿದ ಕೇಂದ್ರ ಸರ್ಕಾರದ ಬಜೆಟ್ ಬಗ್ಗೆ ಸಾರ್ವಜನಿಕ ವಲಯದ ವಿವಿಧ ಕ್ಷೇತ್ರಗಳ ಜನರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.



ಕೇಂದ್ರ ಸರ್ಕಾರ ಮಂಡಿಸಿರುವ ಆಯವ್ಯಯವನ್ನು ವಿಮರ್ಶಿಸಿದರೆ ವಿರೋಧಿಸುವುದು ಸಮಂಜಸವಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರ ಕಳೆದ ಹತ್ತು ವರ್ಷಗಳಿಂದ ಅಭಿವೃದ್ಧಿ ಪರ ಬಜೆಟ್ ಮಂಡಿಸುತ್ತಾ ಬಂದಿದೆ. ಈ ಸಾಲಿನ ಆಯವ್ಯಯದಲ್ಲೂ ರೈತರಿಗೆ, ಮಹಿಳೆಯರಿಗೆ, ಯುವಕರಿಗೆ ನೆರವಾಗುವ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಅದರಲ್ಲೂ ಉದ್ಯೋಗಿಗಳಿಗೆ ಆದಾಯ ವಿನಾಯಿತಿಯನ್ನು 12 ಲಕ್ಷಕ್ಕೆ ಏರಿಸಿರುವುದು ಐತಿಹಾಸಿಕ ನಿರ್ಣಯ. ಇಂತಹ ಯೋಜನೆ ಕಾಂಗ್ರೆಸ್ ಅವಧಿಯಲ್ಲಿ ಯಾಕೆ ಜಾರಿಗೆ ತಂದಿರಲಿಲ್ಲ. ಆಯವ್ಯಯದಲ್ಲಿ ಉತ್ತಮ ಯೋಜನೆಗಳನ್ನು ಘೋಷಿಸಿದಾಗ ಅದನ್ನು ಮುಕ್ತಮನಸ್ಸಿನಿಂದ ಸ್ವಾಗತಿಸುವ ವಿರೋಧಿಗಳಿಗೆ ಪ್ರಬುದ್ಧತೆ ತೋರಿಸುತ್ತದೆ.

-ಸಂದೇಶ್ ಸ್ವಾಮಿ, ಮಾಜಿ ಮೇಯರ್



ನಮ್ಮ ರಾಜ್ಯದ ಹಿತದೃಷ್ಟಿಯಿಂದ ನೋಡಿದರೆ ಇದೊಂದು ನಿರಾಶಾದಾಯಕ ಬಜೆಟ್. ಅಲ್ಲದೆ, ಬಜೆಟ್ ಅಂಶಗಳನ್ನು ಗಮನಿಸಿದರೆ, ನಿರ್ಮಲಾ ಸೀತಾರಾಮನ್ ಅವರಲ್ಲಿ ದೂರದೃಷ್ಟಿ ಕೊರತೆ ಇರುವುದು ಗೋಚರಿಸುತ್ತದೆ. ಕರ್ನಾಟಕ ತೆರಿಗೆ ರೂಪದಲ್ಲಿ ಸಾಕಷ್ಟು ಹಣವನ್ನು ಕೇಂದ್ರಕ್ಕೆ ನೀಡುತ್ತದೆ. ಆದರೆ ರಾಜ್ಯವನ್ನು ಕಡೆಗಣಿಸಿ, ಇತರೆ ರಾಜ್ಯಗಳಿಗೆ ಹೆಚ್ಚು ಅನುದಾನ ನೀಡಲಾಗಿದೆ. ಕುಡಿಯುವ ನೀರು, ಗ್ರಾಮೀಣ ಅಭಿವೃದ್ಧಿ, ರೈಲ್ವೆ ಯೋಜನೆಗಳಿಗೆ ಯಾವುದೇ ಹೆಚ್ಚಿನ ಅನುದಾನವಿಲ್ಲ. ಪ್ರವಾಸೋದ್ಯಮವನ್ನೂ ಕಡೆಗಣಿಸಲಾಗಿದೆ. ರೈತರು, ಕೃಷಿಕರಿಗೆ ಅನುಕೂಲವಾಗುವ ಯಾವುದೇ ಅಂಶಗಳಿಲ್ಲ.

-ಜಿ.ಎಂ.ರಾಮು, ಮಾಜಿ ಅಧ್ಯಕ್ಷರು, ಜಿಪಂ ಮೈಸೂರು



ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇಂದು ಮಂಡಿಸಿದ ಬಜೆಟ್‌ನಲ್ಲಿ ಗ್ರಾಮೀಣ ಭಾಗದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ ಒದಗಿಸಲು ಮುನ್ನುಡಿ ಬರೆದಿರುವುದು ಬಡ ಮಕ್ಕಳಿಗೆ ಸಹಕಾರಿಯಾಗಿದೆ. ಉಡಾನ್ ಯೋಜನೆ ಯಶಸ್ವಿಯಾದ ಹಿನ್ನೆಲೆ 120 ಸ್ಥಳಗಳಿಗೆ ಹೆಚ್ಚುವರಿ ವಿಮಾನ ಸಂಪರ್ಕ ಕಲ್ಪಿಸಲಾಗಿದೆ. ಇದರಿಂದ ಇನ್ನು 10 ವರ್ಷದಲ್ಲಿ 4 ಕೋಟಿ ಜನರಿಗೆ ಅನುಕೂಲವಾಗಿದೆ.

- ಎಲ್.ಆರ್.ಮಹದೇವಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ



ಇಂದು ಮಂಡಿಸಿರುವ ಬಜೆಟ್ ಆರ್ಥಿಕ ವ್ಯವಸ್ಥೆಗೆ ಪೂರಕವಾಗಿದೆ. ಆದಾಯ ತೆರಿಗೆ 12 ಲಕ್ಷದವರೆಗೆ ವಿನಾಯಿತಿ ನೀಡಿರುವುದು ಭಾರಿ ಬದಲಾವಣೆಯಾಗಿದೆ. ಇದರಿಂದ ಮಧ್ಯಮ ವರ್ಗದವರಿಗೆ ಅನುಕೂಲವಾಗಲಿದೆ. ಎಂಎಸ್‌ಎಂಇ ಕೈಗಾರಿಕೆಗಳ ರಫ್ತು ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿರುವುದು ಕೈಗಾರಿಕಾ ವಲಯಕ್ಕೆ ಆಶಾದಾಯಕವಾಗಿದೆ. ಎಸ್‌ಸಿ ಎಸ್‌ಟಿ ಉದ್ಯಮಿಗಳಿಗೆ ವಿಶೇಷ ಯೋಜನೆ, ಸ್ಟಾರ್ಟ್ ಅಪ್‌ಗಳಿಗೆ ಹೆಚ್ಚು ಒತ್ತು ನೀಡಿರುವುದು ದೇಶದ ಬೆಳವಣಿಗೆಗೆ ನಾಂದಿಯಾಗಿದೆ.

- ಕೆ.ಬಿ.ಲಿಂಗರಾಜು, ಅಧ್ಯಕ್ಷರು, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಘ



ಕಾರ್ಪೋರೇಟ್ ಪ್ರೇಮ ತೋರುವ ಮತ್ತು ಬಡವರ ತುಳಿತ ಖಾಯಂಗೊಳಿಸುವ ಈ ಬಜೆಟ್‌ನಲ್ಲಿ ಅಭಿವೃದ್ಧಿಯ ಆಶಾಕಿರಣ ಕಾಣುತ್ತಿಲ್ಲ. ಮಹಿಳೆಯರು, ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು, ವಿದ್ಯಾರ್ಥಿ ಸಮೂಹ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ಕಾರ್ಮಿಕರು, ರೈತರಿಗೆ ಯಾವುದೇ ರೀತಿಯ ಖಚಿತ ನೆರವು ನೀಡಿಲ್ಲ. ಆದರೆ ಕಾರ್ಪೋರೇಟ್ ಕುಳಗಳಿಗೆ ಹಿಂಬಾಗಿಲಿನಿಂದ ಸೌಲಭ್ಯ ಒದಗಿಸುವುದನ್ನು ಈ ಬಾರಿಯೂ ಮುಂದುವರೆಸಲಾಗಿದೆ. ಇದೊಂದು ಇಡೀ ಪ್ರಾತಿ ವಿರೋಧಿ ಬಜೆಟ್ ಆಗಿದೆ.

- ಹೆಚ್.ಎ.ವೆಂಕಟೇಶ್, ವಕ್ತಾರ, ಕೆಪಿಸಿಸಿ



ಆದಾಯ ತೆರಿಗೆ ಸ್ಲ್ಯಾಬ್‌ನಲ್ಲಿ ಮಧ್ಯಮ ವರ್ಗದವರಿಗೆ ಉತ್ತಮ ಅವಕಾಶ ಕಲ್ಪಿಸಲಾಗಿದೆ. ಮುಂದಿನ ವಾರ ಹೊಸ ತೆರಿಗೆ ಮಸೂದೆ ತರುವುದಾಗಿ ಹೇಳಿದ್ದು, ಹಲವಾರು ಸುಧಾರಣೆ ತರಲು ಹೊರಟಿರುವುದು ಒಂದು ಒಳ್ಳೆಯ ಬೆಳವಣಿಗೆ. ಸಣ್ಣ ತೆರಿಗೆದಾರರಿಗೆ ಪ್ರಯೋಜನ ನೀಡಿದ್ದು, ಈ ಬಾರಿ ವಿತ್ತೀಯ ಕೊರತೆಯೂ ಶೇ.4.8ರಿಂದ 4.4ಕ್ಕೆ ಬಂದಿರುವುದು ಗಮನಾರ್ಹ. ಎಫ್‌ಡಿಐ ಮಿತಿ ಈ ಬಾರಿ ಶೇ.74ರಿಂದ ಶೇ.100ಕ್ಕೆ ಏರಿಕೆ ಆಗಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಪ್ರಸ್ತುತಕ್ಕೆ ಉತ್ತಮ ಬಜೆಟ್.

-ಡಾ.ಮನು ಶಿವರಾಮ್, ಅರ್ಥಶಾಸ್ತ್ರ ಉಪನ್ಯಾಸಕರು, ಮೈಸೂರು ವಿವಿ.



ಬಟ್ಟೆ ಯಂತ್ರಗಳು, ಕ್ಯಾನ್ಸರ್ ಔಷಧಿಗಳ ಮೇಲೆ ಸಂಪೂರ್ಣ ಕಸ್ಟಮ್ ಡ್ಯೂಟಿ ಕಡಿತ ಸ್ವಾಗತಾರ್ಹ. ಮೊಬೈಲ್ ಫೋನ್/ ಬ್ಯಾಟರಿ ಉತ್ಪಾದನೆ, ಎಲೆಕ್ಟ್ರಿಕ್ ವಾಹನ ಬಿಡಿಭಾಗಗಳ ಮೇಲಿನ ಕಸ್ಟಮ್ಸ್ ಡ್ಯೂಟಿ ಕಡಿತಗೊಳಿಸಿರುವುದರಿಂದ ಬಟ್ಟೆ, ಎಲೆಕ್ಟ್ರಿಕ್ ವಾಹನಗಳು, ಮೊಬೈಲ್ ಫೋನ್‌ಗಳು ಅಗ್ಗವಾಗುವುದು. ಇದು ಕೂಡ ಸ್ವಾಗತಾರ್ಹ. ಅಲ್ಲದೆ, ಹತ್ತು ಸಾವಿರ ಮೆಡಿಕಲ್ ಸೀಟ್ ಹೆಚ್ಚಳ ಮಾಡಿರುವುದು ವಿದ್ಯಾರ್ಥಿಗಳಿಗೆ ಹಾಗೂ ಕ್ಯಾನ್ಸರ್ ಪೀಡಿತರಿಗೆ ಮತ್ತಷ್ಟು ನೀಡಿರುವುದು ಸ್ವಾಗತಾರ್ಹ. ಹಿರಿಯ ನಾಗರಿಕರಿಗೆ ಟಿಡಿಎಸ್ ಕಡಿತವನ್ನು 1 ಲಕ್ಷದವರೆಗೆ ಹೆಚ್ಚಿಸಿರುವುದು ಒಳ್ಳೆಯ ನಿರ್ಧಾರ.

- ರೋ.ಎ.ಪಿ.ವಿರೂಪಾಕ್ಷ, ಶರತ್ ಮೆಡಿಕಲ್ ಸ್ಟೋರ್

ವಾರ್ಷಿಕ 12 ಲಕ್ಷ ರೂ. ವರೆಗೆ ಆದಾಯ ಗಳಿಸುವ ವ್ಯಕ್ತಿಗಳಿಗೆ ತೆರಿಗೆ ವಿನಾಯಿತಿ ನೀಡಿರುವುದನ್ನು ಹೆಚ್ಚಾಗಿ ಬಿಂಬಿಸಲಾಗುತ್ತಿದೆ. ಇದು ಆರ್ಥಿಕವಾಗಿ ಸ್ಥಿತಿವಂತರಾದವರಿಗೆ ಮತ್ತಷ್ಟು ಅನುಕೂಲ ಮಾಡಿದಂತೆ. ನರೇಂದ್ರ ಮೋದಿ ಸರ್ಕಾರದಲ್ಲಿ ಎಲ್ಲರ ವಿಕಾಸ ಆಗುತ್ತಿದೆ ಎಂದು ಹೇಳಲಾಗುತ್ತಿದೆ. ಆದರೆ ಈ ಸರ್ಕಾರದ ಯೋಜನೆಗಳು ಕೇವಲ ಘೋಷಣೆ-ಆಕರ್ಷಣೆಗೆ ಸೀಮಿತವಾಗಿವೆ. ಹಾಗಾಗಿ ಬಡವರು, ಮಧ್ಯಮ ವರ್ಗದವರ ವಿಕಾಸ ಆಗುತ್ತಿಲ್ಲ. ಕೇವಲ ಹಣವಂತರು ಮತ್ತಷ್ಟು ಹಣವಂತರಾಗುತ್ತಿದ್ದಾರೆ.

-ರಮೇಶ್, ಛಾಯಾಗ್ರಾಹಕರು.

ಬಜೆಟ್ ಪದ ಓದಿದ್ದು, ಇದರ ಸ್ಪಷ್ಟ ಚಿತ್ರಣಕ್ಕೆ ಕಾಯಬೇಕು. ಒಟ್ಟಾರೆ ಕೇಂದ್ರ ಸರ್ಕಾರ ನೀಡುತ್ತಿರುವ ಕಾರ್ಯಕ್ರಮಗಳು ಕೇವಲ ಶ್ರೀಮಂತರಿಗೆ ಸೀಮಿತವಾಗಿವೆ. ಬಡವರು-ಮಧ್ಯಮ ವರ್ಗದವರ ಶ್ರೇಯೋಭಿವೃದ್ಧಿ ಆಗುತ್ತಿಲ್ಲ. ಉದ್ಯಮಿಗಳಿಗೆ ಸಾಲ ಮನ್ನಾ ಮಾಡುತ್ತಾರೆ. ರೈತರು, ಬಡವರಿಗೆ ಮಾತ್ರ ಸಾಲ ಮನ್ನಾ ಮಾಡುವುದಿಲ್ಲ. ಇದು ನ್ಯಾಯವೇ?

-ಚಂದ್ರಶೇಖರ್, ವಿದ್ಯುತ್ ಗುತ್ತಿಗೆದಾರರು.

ಕೇಂದ್ರ ಬಜೆಟ್ ಅತ್ಯುತ್ತಮವಾಗಿದೆ. ರೈತರಿಗೆ ನೆರವಾಗುವ ಕಾರ್ಯಕ್ರಮ ನೀಡಿದ್ದಾರೆ. 36 ಜೀವ ರಕ್ಷಕ ಔಷಧಗಳಿಗೆ ಕಸ್ಟಮ್ಸ್ ಸುಂಕದಿಂದ ಸಂಪೂರ್ಣ ವಿನಾಯಿತಿ ನೀಡಿರುವುದು ಸ್ವಾಗತಾರ್ಹ. 12 ಲಕ್ಷ ರೂ.ವರೆಗೆ ಆದಾಯ ತೆರಿಗೆ ವಿನಾಯಿತಿ ನೀಡಿರುವುದು ಒಳ್ಳೆಯ ಕ್ರಮ.

-ವೆಂಕಟೇಶ್, ಪುಸ್ತಕ ಮಳಿಗೆ ವ್ಯಾಪಾರಿಗಳು, ದೇವರಾಜ ಮಾರುಕಟ್ಟೆ.

ನೈಪುಣ್ಯ ಶಾಲೆಯ ವಾರ್ಷಿಕೋತ್ಸವ ನೈಪುಣ್ಯೋತ್ಸವ

ಪೋಷಕರ ಬೇಜವಾಬ್ದಾರಿಯಿಂದ ಮಕ್ಕಳು ಹಿಂದುಳಿಯುತ್ತಾರೆ

ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ನಿರ್ಭಯಾನಂದ ಸರಸ್ವತಿ ಅಭಿಮತ





ಮೈಸೂರಿನ ಕರ್ನಾಟಕ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ನಡೆದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ವಾರ್ಷಿಕ ಸಂಭ್ರಮ 'ನೈಪುಣ್ಯೋತ್ಸವ' ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ಗದುಗಿನ ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿರ್ಭಯಾನಂದ ಸರಸ್ವತಿಗಳು ಉದ್ಘಾಟಿಸಿದರು. ಮತ್ತೊಂದು ಚಿತ್ರದಲ್ಲಿ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕಾಣಬಹುದು.

ಮೈಸೂರು, ಫೆ.2(ಜಿಎ)–ಮಕ್ಕಳ ಬುದ್ಧಿವಂತಿಕೆಯನ್ನು ಗುರುತಿಸುವಲ್ಲಿ ಪೋಷಕರು ಜವಾಬ್ದಾರಿ ಮರೆಯುತ್ತಿರುವ ಹಿನ್ನೆಲೆಯಲ್ಲಿ ಕೆಲವು ಮಕ್ಕಳು ಶಿಕ್ಷಣ ಹಾಗೂ ಬದುಕಿನ ಗುರಿ ಸಾಧಿಸುವಲ್ಲಿ ಹಿಂದುಳಿಯುವಂತಾಗಿದೆ, ಇದು ಅತ್ಯಂತ ನೋವಿನ ಸಂಗತಿ ಎಂದು ಗದುಗಿನ ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿರ್ಭಯಾನಂದ ಸರಸ್ವತಿಗಳು ಅಭಿಪ್ರಾಯಪಟ್ಟರು.

ಮೈಸೂರಿನ ಕರ್ನಾಟಕ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ವಾರ್ಷಿಕ ಸಂಭ್ರಮ 'ನೈಪುಣ್ಯೋತ್ಸವ' ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಜಗತ್ತನ್ನು ನೋಡಲು ಕಣ್ಣು ಬಿಡುವ ಪ್ರತಿಯೊಂದು ಮಗುವಿನಲ್ಲೂ ಬುದ್ಧಿವಂತ ಇದ್ದೇ ಇರುತ್ತಾನೆ. ಆದರೆ ಆ ಬುದ್ಧಿವಂತನನ್ನು ಗುರುತಿಸುವಲ್ಲಿ ಪೋಷಕರು ವಿಫಲರಾಗುತ್ತಾರೆ, ಶಿಕ್ಷಕರೂ ಕೂಡ ಕೆಲವೊಮ್ಮೆ ಇಂತದ್ದೇ ತಪ್ಪು ಮಾಡುತ್ತಾರೆ. ಮಕ್ಕಳ ನಡುವೆ ಹೋಲಿಕೆ ಮಗುವಿನ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ದೊಡ್ಡವರಾದ ನಮ್ಮ ವರ್ತನೆಯೂ ಅವರಲ್ಲಿ ಕೀಳರಿಮೆಯ ಬೀಜ ಬಿತ್ತುತ್ತದೆ. ಇದರಿಂದಾಗಿ ಮಹತ್ಸಾಧನೆ ಮಾಡಬಹುದಾದ ಅನೇಕರ ಭವಿಷ್ಯ ಮಸುಕಾಗಿಬಿಡುತ್ತದೆ ಎಂಬುದನ್ನು ಪೋಷಕರು ಅರಿಯಬೇಕಾಗಿದೆ ಎಂದರು.

6, 10ನೇ ತರಗತಿಯಲ್ಲಿ ಉತ್ತೀರ್ಣರಾಗಲು ಐದಾರು ಬಾರಿ ಅವಕಾಶ ತೆಗೆದುಕೊಳ್ಳುವ ಮಕ್ಕಳು ಜಗತ್ತಲ್ಲಿ ಮಹತ್ಸಾಧನೆ ಮಾಡಿದ್ದನ್ನು ನಾನು ನೋಡಿದ್ದೇನೆ. ನಮ್ಮ ಆಶ್ರಮದ ವಿದ್ಯಾರ್ಥಿಗಳಲ್ಲೇ ಅನೇಕ ಮಕ್ಕಳು ರಾಷ್ಟ್ರೀಯ ಮಟ್ಟದ ಸಾಧನೆ ಮಾಡಿದ್ದನ್ನು ನಾನು ಕಂಡಿದ್ದೇನೆ, ಅವರಿಗೆ ಮಾರ್ಗದರ್ಶನ ನೀಡಿದ್ದೇನೆ. ಈ ಅನುಭವದಿಂದ ನಾನು ಈ ಮಾತು ಹೇಳುತ್ತಿದ್ದೇನೆ. ಪ್ರತಿಯೊಂದು ಮಗುವಿನಲ್ಲೂ ಪ್ರತಿಭೆಯೂ ಇರುತ್ತದೆ, ಬುದ್ಧಿವಂತಿಕೆಯೂ ಇರುತ್ತದೆ. ಅದನ್ನು ಗಮನಿಸಬೇಕಾಗಿರುವುದೇ ನಮ್ಮ ಕರ್ತವ್ಯವಾಗಿರುತ್ತದೆ ಎಂದು ಸಲಹೆ ನೀಡಿದರು.

ಭಾರತದ ಕುಟುಂಬ ಸಂಸ್ಕೃತಿ ಸಂಸ್ಕಾರದ ಶಿಕ್ಷಣವನ್ನು ನೀಡುವ ಪದ್ಧತಿಯಾಗಿತ್ತು. ಆದರೆ ಇಂದಿನ ಆಧುನಿಕ ಯುಗದಲ್ಲಿ ಮಾನವೀಯ ಸ್ಪರ್ಶಗಳಿಂದ ನಾವು ದೂರವಾಗುತ್ತಿದ್ದೇವೆ. ಇದರಿಂದಾಗಿ ಮಕ್ಕಳ ಮೇಲೆ ವಿಪರೀತ ಒತ್ತಡ ಹೇರುತ್ತಿದ್ದೇವೆ. ಮಗುವಿನ ಸಾಮರ್ಥ್ಯಕ್ಕನುಗುಣವಾಗಿ ಮಕ್ಕಳ ಬೆಳವಣಿಗೆಯನ್ನು ಪೋಷಿಸಬೇಕು, ಉತ್ತೇಜಿಸಬೇಕು ಹೊರತು ನಮ್ಮ ಒತ್ತಡವನ್ನು ಹೇರಿ ಮಕ್ಕಳ ಭವಿಷ್ಯ ಅಂಧಕಾರಕ್ಕೆ ತಳ್ಳುವಂತಾಗಬಾರದೆಂಬುದೇ ನಮ್ಮ ಆಶಯವಾಗಿದೆ ಎಂದ ಅವರು, ನೈಪುಣ್ಯ ಸಂಸ್ಥೆಯು ರಘು ಅವರ ಸಾರಥ್ಯದಲ್ಲಿ ಒಂದು ಉತ್ತಮ ಉದ್ದೇಶ, ಯೋಜನೆ ರೂಪಿಸಿ ಪ್ರತಿಯೊಂದು ಮಗುವಿನ ಭವಿಷ್ಯ ರೂಪಿಸುವುದೇ ನೈಜ ಶಿಕ್ಷಣ ಎಂದು ಸಂಕಲ್ಪ ತೊಟ್ಟಿದೆ. ಈ ಕಾರಣಕ್ಕಾಗಿಯೇ ಗದಗಿನಿಂದ ಈ ಕಾರ್ಯಕ್ರಮಕ್ಕೆ ಬರಬೇಕಾಯಿತೆಂದು ಹೇಳಿದರು.

ಸಮಾರೋಪ ಕಾರ್ಯಕ್ರಮವನ್ನು ಉದ್ಘಾಟಿಸಿದ ರಾಜ್ಯ ಚುನಾವಣಾ ಆಯೋಗದ ಮಾಜಿ ಆಯುಕ್ತರು ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್.ಶ್ರೀನಿವಾಸಾಚಾರಿ



ಮಾತನಾಡಿ, ಪ್ರತಿಯೊಂದು ಮಗುವಿನಲ್ಲೂ ಸಾಧಕನಿರುತ್ತಾನೆ. ಆದರೆ ಕಷ್ಟದ ಪರಿಸ್ಥಿತಿ ಒಬ್ಬ ಮಗುವಿನಲ್ಲಿ ಸಾಧಕನಾಗುವ ಗುರಿಯತ್ತ ಸಾಗಲು ಪ್ರೇರೇಪಿಸುತ್ತದೆ. ಒಬ್ಬ ಸಾಧಕನಿಗೆ ಜಾತಿ, ಶ್ರೀಮಂತಿಕೆ, ಬಡತನ ಆಧಾರವಾಗುವುದಿಲ್ಲ, ಬದಲಾಗಿ ಅವನಲ್ಲಿ ಪಡಿಮೂಡುವ ಛಲ ಅವನನ್ನು ಸಾಧನೆಯ ಗುರಿಯತ್ತ ಕೊಂಡೊಯ್ಯುತ್ತದೆ.

ಈ ನಿಟ್ಟಿನಲ್ಲಿ ನಗರ–ಗ್ರಾಮೀಣ ಪ್ರದೇಶದ ಅಂತರವಿಲ್ಲದೇ ಸಾಧಿಸಬಹುದು ಎನ್ನುವುದಕ್ಕೆ ಗ್ರಾಮೀಣ ಪ್ರದೇಶದಿಂದ ಬಂದ ತಾವೇ ಒಂದು ಉದಾಹರಣೆಯಾಗಿರುವುದಾಗಿ ಹೇಳಿದರು. ಸರ್ಕಾರದ ವ್ಯವಸ್ಥೆಯಲ್ಲಿ ನಾವು ಅಧಿಕಾರದಲ್ಲಿದ್ದಾಗ ನಾವು ನಡೆದು ಬಂದ ದಾರಿಯನ್ನು ನೆನಪಿಸಿಕೊಂಡು ಹೆಜ್ಜೆಯಿಟ್ಟರೆ ಸಮಾಜದ ಕಣ್ಣೊರೆಸಬಹುದು, ಸಮಾಜದ ದನಿಯಾಗಬಹುದು, ಶಿಕ್ಷಣಕ್ಕೆ ಮಾದರಿಯಾಗಬಹುದು ಎನ್ನುವುದನ್ನು ತಮ್ಮ ಸೇವಾ ಅನುಭವದಲ್ಲಿ ಅನುಸರಿಸಿದ್ದಾಗಿ ಅವರು ಇದೇ ಸಂದರ್ಭದಲ್ಲಿ ಅನುಭವವನ್ನು ಹಂಚಿಕೊಂಡರು.

ಶಾಲೆಯ ನೈಪುಣ್ಯೋತ್ಸವ ಕಾರ್ಯಕ್ರಮವನ್ನು ಬೆಳಿಗ್ಗೆ ಜಯದೇವ ಹೃದ್ರೋಗ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಎಸ್. ಸದಾನಂದ ಅವರು ಉದ್ಘಾಟಿಸಿ, ಮಕ್ಕಳು ಪೋಷಕರನ್ನು ಮಾದರಿಯಾಗಿ ತೆಗೆದುಕೊಳ್ಳುತ್ತಾರೆ , ಆದ್ದರಿಂದ ಮಕ್ಕಳ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ಪೋಷಕರು ಸೃಷ್ಟಿಸಬೇಕು ಎಂದು ಹೇಳಿದರು. ಎರಡೂ ಕಾರ್ಯಕ್ರಮ ಅಧ್ಯಕ್ಷತೆಯನ್ನು ನೈಪುಣ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಆರ್.ರಘು ಅವರು ವಹಿಸಿದ್ದರು.

ಬೆಳಗಿನ ಕಾರ್ಯಕ್ರಮದಲ್ಲಿ ಚಿಣ್ಣರ ಮನರಂಜನಾ ಕಾರ್ಯಕ್ರಮ ಜೊತೆಗೆ ಕೂಡು ಕುಟುಂಬವನ್ನು ಉತ್ತೇಜಿಸುವ ಬೇರು–ಬಳ್ಳಿ ಕಾರ್ಯಕ್ರಮದಲ್ಲಿ ರ್‍ಯಾಂಪ್ ವಾಕ್ ಮತ್ತು ರಸಪ್ರಶ್ನೆ ಕಾರ್ಯಕ್ರಮಗಳು, ಅವಿಭಕ್ತ ಕುಟುಂಬದ ಸಮಾಗಮ ಉತ್ತಮ ಮನರಂಜನೆಯನ್ನು ಒದಗಿಸಿತ್ತಲ್ಲದೇ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಸಾಕ್ಷೀಕರಿಸಿತು. ಕೂಡು ಕುಟುಂಬದ ಪರಿಣಾಮದ ಕುರಿತು ಕೂಡು ಕುಟುಂಬದ ಪ್ರತಿನಿಧಿಗಳು ಈ ಸಂದರ್ಭದಲ್ಲಿ ತಮ್ಮ ಅನುಭವ ಹಂಚಿಕೊಂಡರು. ಮಕ್ಕಳ ತಾಯಂದಿರು ಸಮೂಹ ನೃತ್ಯ ಪ್ರದರ್ಶಿಸಿ ನೈಪುಣ್ಯೋತ್ಸವಕ್ಕೆ ಹಬ್ಬದ ಮೆರಗನ್ನು ತಂದರು.

ಸಂಜೆಯ ಮನರಂಜನಾ ಕಾರ್ಯಕ್ರಮದಲ್ಲಿ ವಿದುಷಿ ಡಾ॥ ಶಾಂಭವಿ ಸ್ವಾಮಿ ಅವರ ನಿರ್ದೇಶನದಲ್ಲಿ ಸುಮಾರು 350ಕ್ಕೂ ಹೆಚ್ಚು ವಿದ್ಯಾರ್ಥಿಗಳು 1.30 ಗಂಟೆಗಳ ಕಾಲ ನೃತ್ಯ ರೂಪಕವನ್ನು ಪ್ರದರ್ಶಿಸಿ, ಪರಿಸರ ಜಾಗೃತಿ ಮೂಡಿಸುವ ಸಂದೇಶ ನೀಡಿ "ಭವಿಷ್ಯದ ಪೀಳಿಗೆಯ ನಮಗೆ ಏನನ್ನು ಕೊಡಲಾಗದಿದ್ದರೂ ಪರವಾಗಿಲ್ಲ, ಒಂದಷ್ಟು ಗಾಳಿ ಉಳಿಸಿ, ಉತ್ತಮ ಜಲಸಂಪತ್ತು, ಉಳಿಸಿ ಅರಣ್ಯ ಸಂಪತ್ತು ಉಳಿಸಿ, ಜೀವ ವೈವಿಧ್ಯತೆ ಉಳಿಸಿ, ನಾವೂ ಬದುಕಲು ಪರಿಸರ ಉಳಿಸಿ ಎನ್ನುವ ಸಂದೇಶ ಹೃದಯಸ್ಪರ್ಶಿಯಾಗಿತ್ತು.

ಸಂಸ್ಥೆಯ ಹಿರಿಯ ಶಿಕ್ಷಕಿ ಶ್ರೀಮತಿ ಶಾಲಿನಿ ಮಾಜೊ ಅವರಿಗೆ ಹತ್ತು ಸಾವಿರ ನಗದು ಪುರಸ್ಕೃತವನ್ನೊಳಗೊಂಡ 'ನೈಪುಣ್ಯಶ್ರೀ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಇತರ ಶಿಕ್ಷಕರಾದ ಶ್ರೀಮತಿ ದೇಚಮ್ಮ ಶ್ರೀಮತಿ ಭಾರ್ಗವಿ ಹಾಗೂ ತೀರ್ಥಕುಮಾರ ಅವರುಗಳ ಸಾರ್ಥಕ ಸೇವೆ ಗುರುತಿಸಿ ಪುರಸ್ಕರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿ ಪ್ರಾಂಶುಪಾಲರಾದ ಶ್ರೀಮತಿ ಶಾಂತಿನಿ ಜೆರಾಲ್ಡ್, ಚಿಣ್ಣರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಭಾವನಾ ಶ್ರೀಕಾಂತ್ ಉಪಸ್ಥಿತರಿದ್ದರು.

ರಾಷ್ಟ್ರಪತಿ ಭಾಷಣಕ್ಕೆ ಆಕ್ಷೇಪ: ಸೋನಿಯಾ, ರಾಹುಲ್, ಪ್ರಿಯಾಂಕಾ ಗಾಂಧಿ ವಿರುದ್ಧ ದೂರು ದಾಖಲು

ನವದೆಹಲಿ, ಫೆ.2– ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇತ್ತೀಚೆಗೆ ಸಂಸತ್ತಿನ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾಡಿದ ಭಾಷಣಕ್ಕೆ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಹಾಗೂ ರಾಹುಲ್ ಗಾಂಧಿಯವರು ಆಕ್ಷೇಪಿಸಿದ ಹಿನ್ನೆಲೆಯಲ್ಲಿ ಆ ಮೂವರ ವಿರುದ್ಧ ಬಿಹಾರದ ಮುಜಫ್ಫರ್‌ಪುರ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದೆ. ಆ ಪ್ರಕರಣದ ವಿಚಾರಣೆ ಫೆ 10ರಂದು ನಡೆಯಲಿದೆ.



ಇತ್ತೀಚೆಗೆ ಸಂಸತ್ತಿನಲ್ಲಿ ಬಜೆಟ್ ಅಧಿವೇಶನದ ಆರಂಭದ ದಿನ ರಾಷ್ಟ್ರಪತಿಯವರು ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡಿದ್ದರು. ಆದರೆ, ಆ ಭಾಷಣದ ವಿರುದ್ಧ ಸೋನಿಯಾ ಗಾಂಧಿ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿಯವರು ಆಕ್ಷೇಪ ವ್ಯಕ್ತಪಡಿಸುವ ಭರದಲ್ಲಿ ಅವರು ರಾಷ್ಟ್ರಪತಿ ಅವರ ಹಾವಭಾವವನ್ನು ಟೀಕಿಸಿದ್ದರು.

ಮಾಧ್ಯಮಗಳ ಜೊತೆಗೆ ಮಾತನಾಡಿದ್ದ ಸೋನಿಯಾ ಗಾಂಧಿಯವರು, 'ರಾಷ್ಟ್ರಪತಿ ಅವರು ತಮ್ಮ ಭಾಷಣವನ್ನು ಮುಗಿಸುವ ಹೊತ್ತಿಗೆ ತುಂಬಾ ಆಯಾಸವಾದಂತೆ ಕಂಡುಬಂದರು. ಅಷ್ಟೇ ಅಲ್ಲದೆ, ಅವರ ಮಾತುಗಳು ತೊದಲುತ್ತಿದ್ದವು'. ರಾಷ್ಟ್ರಪತಿಗಳ ಭಾಷಣಕ್ಕೆ 'ಅಯ್ಯೋ? ಪಾಪ ಎಂದೆನಿಸಿತು' ಎಂದಿದ್ದರು. ಅತ್ತ, ಬೇರೊಂದು ಕಡೆ ಮಾಧ್ಯಮಗಳ ಜೊತೆಗೆ ಮಾತನಾಡಿದ್ದ ರಾಹುಲ್ ಗಾಂಧಿ 'ರಾಷ್ಟ್ರಪತಿಗಳ ಭಾಷಣ ಭಾರಿ ಬೇಸರ ತರಿಸುತ್ತಿತ್ತು' ಎಂದು ಹೇಳಿದ್ದರು. ಮಾಧ್ಯಮಗಳಿಗೆ ಹೇಳಿಕೆ ನೀಡುವಾಗ ಪ್ರಿಯಾಂಕಾ ಗಾಂಧಿಯವರೂ ಇಂಥದ್ದೇ ಹೇಳಿಕೆಯನ್ನು ನೀಡಿದ್ದರು. ಈಗ ಹೇಳಿಕೆಗಳ ವಿರುದ್ಧವೇ ಪ್ರಕರಣ ದಾಖಲಾಗಿದೆ.

ಮುಜಫ್ಫರ್ ನಗರದ ನಿವಾಸಿಯಾಗಿರುವ ಸುಧೀರ್ ಓಝಾ ಎಂಬ ವಕೀಲರು ಈ ದೂರು ದಾಖಲಿಸಿದ್ದಾರೆ. ರಾಷ್ಟ್ರಪತಿ ಅವರ ಭಾಷಣವನ್ನು ಟೀಕಿಸುವ ಭರದಲ್ಲಿ ಈ ಮೂವರೂ ನಾಯಕರು, ಈ ದೇಶದ ಅತ್ಯುನ್ನತ ನಾಗರಿಕರಿಗೆ ಅಪಮಾನ ಆಗುವಂತೆ ಮಾತನಾಡಿದ್ದಾರೆ. ಹಾಗಾಗಿ, ಈ ಮೂವರ ಮೇಲೆ ಎಫ್‌ಐಆರ್ ದಾಖಲಿಸಲು ಅನುಮತಿ ನೀಡಬೇಕು ಎಂದು ನ್ಯಾಯಾಲಯವನ್ನು ಅವರು ಪ್ರಾರ್ಥಿಸಿದ್ದಾರೆ.

ಪ್ರಧಾನಿ ಮೋದಿ ಸರ್ಕಾರದ ಅವಧಿಯಲ್ಲಿ 205 ಲಕ್ಷ ಕೋಟಿ ಸಾಲ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆರೋಪ

ಮೈಸೂರು, ಫೆ.2(ಬಿಎಲ್‌ಯು)– ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಹತ್ತೂವರೆ ವರ್ಷದ ಅವಧಿಯಲ್ಲಿ 205 ಲಕ್ಷ ಕೋಟಿ ಸಾಲ ಮಾಡಿ, ಪ್ರತಿಯೊಬ್ಬರ ಮೇಲೆ ಸಾಲದ ಹೊರೆ ಹೊರೆಸಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆರೋಪಿಸಿದ್ದಾರೆ.

ನಗರದ ಕಾಂಗೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 70 ವರ್ಷದ ಅವಧಿಯಲ್ಲಿ ಕಾಂಗ್ರೆಸ್ ಪಕ್ಷ 56 ಲಕ್ಷ ಕೋಟಿ ಸಾಲ ಮಾಡಿತ್ತು. ಆದರೆ ಕೇವಲ ಹತ್ತೂವರೆ ವರ್ಷದ ಅವಧಿಯಲ್ಲಿ ಬಿಜೆಪಿ ಸರ್ಕಾರ 205 ಲಕ್ಷ ಕೋಟಿ ಸಾಲ ಮಾಡಿದೆ. ಇದರಿಂದ ಈ ಸರ್ಕಾರದ ಅರ್ಥ ವ್ಯವಸ್ಥೆ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದನ್ನು ತೋರಿಸುತ್ತದೆ ಎಂದು ಹೇಳಿದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಭಾನುವಾರ ನಡೆದ ಪತ್ರಿಕಾಗೋಷ್ಠಿ ವೇಳೆ ಖಾಲಿ ಚೊಂಬು ಹಾಗೂ ತೆಂಗಿನಕಾಯಿ ಚಿಪ್ಪು ಪ್ರದರ್ಶಿಸಿದ ಕಾಂಗ್ರೆಸ್ ನಾಯಕರು, ನಿರ್ಮಲಾ ಸೀತಾರಾಮನ್ ಮಂಡಿಸಿದ ಬಜೆಟ್ ಅಣಕಿಸಿದರು.

ಬಿಜೆಪಿ ಸರ್ಕಾರ ಮಾಡಿರುವ ಸಾಲದಿಂದ ದೇಶದ ಪ್ರತಿ ವ್ಯಕ್ತಿ ಮೇಲೆ ಮೂರು ಕಾಲು ಲಕ್ಷ ರೂಪಾಯಿ ಸಾಲದ ಹೊರೆ ಇದೆ. ಸರ್ಕಾರ ಮಾಡಿರುವ ಸಾಲಕ್ಕೆ ಒಟ್ಟಾರೆ ಬಜೆಟ್‌ನಲ್ಲಿ ಶೇಕಡ 12.7 ಬಡ್ಡಿ ಪಾವತಿ ಮಾಡಬೇಕಿದೆ. ಇದರಿಂದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನಿನ್ನೆ ಮಂಡಿಸಿದ ಬಜೆಟ್ ಸತ್ವವಿಲ್ಲದಂತಾಗಿದೆ ಎಂದು ಲಕ್ಷ್ಮಣ ಆಪಾದಿಸಿದರು.

ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್ ಬಿಹಾರವನ್ನು ಕೇಂದ್ರೀಕರಿಸಿದೆ. ತಮ್ಮ ಸರ್ಕಾರಕ್ಕೆ ಬೆಂಬಲ ನೀಡಿರುವ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಮೆಚ್ಚಿಸಲು ಬಹುಪಾಲ ಹಣ ಅವರ ರಾಜ್ಯಕ್ಕೆ ಮೀಸಲಿಡಲಾಗಿದೆ. ಇದರಿಂದ ಇದು ಬಜೆಟ್ ಆಫ್ ಇಂಡಿಯಾ ಬದಲು, ಬಜೆಟ್ ಆಫ್ ಬಿಹಾರ್ ಆಗಿದೆ ಎಂದು ಗೇಲಿ ಮಾಡಿದರು.

ಕೇಂದ್ರ ಬಿಜೆಪಿ ಸರ್ಕಾರ ಘೋಷಣೆ ಮಾಡಿರುವ ಮೇಕ್ ಇನ್ ಇಂಡಿಯಾ ಸೇರಿದಂತೆ ಹಲವು ಯೋಜನೆಗಳು ಸಾಕಾರಗೊಳ್ಳುತ್ತಿಲ್ಲ. ಕೃಷಿ, ಕೈಗಾರಿಕೆ ಸೇರಿದಂತೆ ಹಲವು ಕ್ಷೇತ್ರವನ್ನು ಕಡೆಗಣಿಸಲಾಗಿದೆ. ಕಾರ್ಪೋರೇಟ್ ವಲಯಕ್ಕೆ ಮಾತ್ರ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ ಎಂದು ಲಕ್ಷ್ಮಣ ಆಪಾದಿಸಿದರು.

ನಿನ್ನೆ ಮಂಡಿಸಿರುವ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಯಾವುದೇ ರೀತಿಯ ಪ್ರಾಮುಖ್ಯತೆ ನೀಡಿಲ್ಲ. ಅತಿ ಹೆಚ್ಚು ತೆರಿಗೆ ನೀಡಿದರೂ ಕರ್ನಾಟಕಕ್ಕೆ ತಾರತಮ್ಯ ತೋರುತ್ತಿದ್ದಾರೆ ಎಂದು ಆರೋಪಿಸಿದರು.

ಈ ವೇಳೆ ಲಕ್ಷ್ಮಣ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಎಂ. ರಾಮು, ಕಾಂಗ್ರೆಸ್ ನಗರ ಕಾರ್ಯದರ್ಶಿ ಶಿವಣ್ಣ, ವಕ್ತಾರ ಮಹೇಶ್ ಅವರು, ಖಾಲಿ ಚೊಂಬು ಹಾಗೂ ತೆಂಗಿನಚಿಪ್ಪು ಹಿಡಿದು ಕೇಂದ್ರ ಬಿಜೆಪಿ ಸರ್ಕಾರದ ಬಜೆಟ್ ಅಣಕಿಸಿದರು.

ರಾಜ್ಯದ ಸಂಸದರು ಎಲ್ಲಿದ್ದಾರೆ ಗೋವಿಂದ, ಪ್ರಹ್ಲಾದ್ ಜೋಷಿ, ಶೋಭಾ ಕರಂದ್ಲಾಜೆ ಎಲ್ಲಿದ್ದಾರೆ ಗೋವಿಂದ, ಮೈಸೂರು ಕೊಡಗು ಸಂಸದ ಯದುವೀರ್ ಏನು ಮಾಡುತ್ತಿದ್ದಾರೆ ಗೋವಿಂದ, ಕರ್ನಾಟಕಕ್ಕೆ ಉಂಡೆನಾಮ ಹಾಕಿದ್ದಾರೆ ಗೋವಿಂದ ಎಂದು ಘೋಷಣೆ ಕೂಗಿ ಲೇವಡಿ ಮಾಡಿದರು.

ದೇಶ - ವಿದೇಶ

ಅಮೇರಿಕಾ ವಿರುದ್ಧ ಕೆನಡಾ ಪ್ರತೀಕಾರ: ಶೇ.25 ರಷ್ಟು ಸುಂಕ

ಕೆನಡಾ: ಅಮೇರಿಕಾ ವಿರುದ್ಧ ಕೆರಳಿ ನಿಂತಿರುವ ಕೆನಡಾ ಶೇ.25 ರಷ್ಟು ಸುಂಕ ವಿಧಿಸಿದೆ. ಈ ಕುರಿತು ಪೋಸ್ಟ್ ಮಾಡಿರುವ ಕೆನಡಾ ಪ್ರಧಾನಿ ಟ್ರೂಡೊ, ನಮಗೆ ಇದು ಬೇಕಾಗಿಲ್ಲ, ಆದರೆ ಕೆನಡಾ ಅದನ್ನು ಎದುರಿಸಲು ಸಿದ್ಧವಾಗಿದೆ ಎಂಬುದನ್ನು ತಿಳಿಸಲು ಈ ಕ್ರಮ ಕೈಗೊಂಡಿರುವುದಾಗಿ ಹೇಳಿದ್ದಾರೆ. ಸುಂಕ, ತೆರಿಗೆಗಳ ವಿಷಯದ ಬಗ್ಗೆ ಚರ್ಚಿಸಲು ತಾವು ಪ್ರಧಾನಿಗಳು ಮತ್ತು ಸಂಪುಟವನ್ನು ಭೇಟಿಯಾಗಿದ್ದಾಗಿ ಮತ್ತು ಶೀಘ್ರದಲ್ಲೇ ಮೆಕ್ಸಿಕೊ ಅಧ್ಯಕ್ಷ ಶೀನ್‌ಬಾಮ್ ಅವರೊಂದಿಗೆ ಮಾತನಾಡುವುದಾಗಿ ಟ್ರುಡೋ ಹೇಳಿದ್ದಾರೆ.

ಫೆಬ್ರವರಿ 4 ರಿಂದ ಪ್ರಾರಂಭವಾಗುವ ಹೆಚ್ಚಿನ ಕೆನಡಾದ ಸರಕುಗಳ ಮೇಲೆ ಶೇ.25 ರಷ್ಟು ಸುಂಕವನ್ನು ವಿಧಿಸಲು ಉದ್ದೇಶಿಸಿರುವುದಾಗಿ ಅಮೆರಿಕ ದೃಢಪಡಿಸಿದೆ, ಇಂಧನದ ಮೇಲೆ ಶೇಕಡಾ 10 ರಷ್ಟು ಸುಂಕವನ್ನು ವಿಧಿಸಲಾಗುವುದು ಎಂದು ಅಮೇರಿಕ ಹೇಳಿದೆ.

ಹಿಂದಿನ ದಿನ ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಸಾಮಾಜಿಕ ಮಾಧ್ಯಮ ವೇದಿಕೆ ಟ್ರೂತ್ ಸೋಶಿಯಲ್‌ನಲ್ಲಿ ಕೆನಡಾ ಮತ್ತು ಮೆಕ್ಸಿಕೊದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಶೇಕಡಾ 25 ರಷ್ಟು ಸುಂಕವನ್ನು ವಿಧಿಸಿರುವುದಾಗಿ ಘೋಷಿಸಿದರು, ಜೊತೆಗೆ ಫೆಂಟನಿಲ್ ಸೇರಿದಂತೆ ಅಕ್ರಮ ವಲಸೆ ಮತ್ತು ಮಾದಕವಸ್ತು ಕಳ್ಳಸಾಗಣೆ ಬಗ್ಗೆ ಕಳವಳ ವ್ಯಕ್ತಪಡಿಸಿ ಚೀನಾದ ಸರಕುಗಳ ಮೇಲೆ ಶೇಕಡಾ 10ರಷ್ಟು ಸುಂಕವನ್ನು ವಿಧಿಸಿದ್ದಾರೆ.

ಕದನ ವಿರಾಮ ಒಪ್ಪಂದ: ಇಸ್ರೇಲ್‌ನಿಂದ 183 ಬಂಧಿತ ಪ್ಯಾಲೆಸ್ಟೀನಿಯನ್ನರ ಬಿಡುಗಡೆ

ಟೆಲ್ ಅವೀವ್: ಹಮಾಸ್ ಜೊತೆಗಿನ ಕದನ ವಿರಾಮ ಒಪ್ಪಂದದ ಭಾಗವಾಗಿ ಶನಿವಾರ ಬಂಧಿತರಾಗಿದ್ದ ಎಲ್ಲಾ 183 ಪ್ಯಾಲೆಸ್ಟೀನಿಯನ್ನರನ್ನು ಬಿಡುಗಡೆ ಮಾಡಲಾಗಿದೆ ಎಂದು ಇಸ್ರೇಲಿ ಜೈಲು ಪ್ರಾಧಿಕಾರ ತಿಳಿಸಿದೆ.

ಅಕ್ಟೋಬರ್ 7, 2023ರ ದಾಳಿಯ ನಂತರ ಬಂಧಿಸಲ್ಪಟ್ಟ ಮತ್ತು ವಿಚಾರಣೆಯಿಲ್ಲದೆ ಬಂಧಿತರಾಗಿದ್ದ 111 ಮಂದಿ ಸೇರಿದಂತೆ ಬಹುತೇಕ ಎಲ್ಲರನ್ನೂ ಗಾಜಾಗೆ ಬಿಡುಗಡೆ ಮಾಡಲಾಗಿದೆ. ಆಕ್ರಮಿತ ವೆಸ್ಟ್ ಬ್ಯಾಂಕ್‌ನಲ್ಲಿ ಎರಡು ಡಜನ್‌ಗಿಂತಲೂ ಹೆಚ್ಚು ಜನರು ಹರ್ಷೋದ್ಗಾರದಿಂದ ಮರಳಿದರು. ಇನ್ನೂ ಜೀವಾವಧಿ ಶಿಕ್ಷೆಗೊಳಗಾಗಿರುವ ಏಳು ಮಂದಿಯನ್ನು ಗಡೀಪಾರು ಮಾಡುವ ಮೊದಲು ಈಜಿಪ್ಟ್‌ಗೆ ಕಳುಹಿಸಲಾಯಿತು. ಶನಿವಾರ ಬಿಡುಗಡೆಯಾದ ಪ್ರಮುಖರಲ್ಲಿ ಮಾನವೀಯ ನೆರವಿನ ಕಾರ್ಯಕರ್ತ ಮೊಹಮ್ಮದ್ ಎಲ್–ಹಲಾಬಿಯೂ ಸೇರಿದ್ದಾರೆ. ಅವರು 12 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದರು. ಇವರು ಕ್ರಿಶ್ಚಿಯನ್ ನೆರವಿನ ಸಂಸ್ಥೆಯಾದ ವರ್ಲ್ಡ್ ವಿಷನ್‌ನ ಗಾಜಾ ಶಾಖೆಯ ಪ್ಯಾಲೇಸ್ಟಿನಿಯನ್ ಮ್ಯಾನೇಜರ್ ಆಗಿ ಕೆಲಸ ಮಾಡಿದ್ದರು. 2016 ರಲ್ಲಿ ಅವರನ್ನು ಬಂಧಿಸಲಾಗಿತ್ತು. ಇದಕ್ಕೂ ಮುನ್ನಾ ಮೂವರು ಇಸ್ರೇಲಿ ಒತ್ತೆಯಾಳುಗಳನ್ನೂ ಹಮಾಸ್ ಬಿಡುಗಡೆ ಮಾಡಿತ್ತು.

ಸುಡಾನ್ ಮಾರುಕಟ್ಟೆ ಮೇಲೆ ಅರೆಸೈನಿಕ ಗುಂಪು ದಾಳಿ: 54 ಮಂದಿ ಸಾವು

ಓಮ್‌ಡುರ್‌ಮನ್: ಆಘಾತಕಾರಿ ಘಟನೆಯಲ್ಲಿ ಸುಡಾನ್‌ನ ಓಮ್‌ಡುರ್‌ಮನ್‌ನ ಸಬ್ರಿನ್ ಮಾರುಕಟ್ಟೆಯ ಮೇಲಿನ ಕ್ರೂರ ದಾಳಿಯಲ್ಲಿ 54 ಜನರು ಸಾವನ್ನಪ್ಪಿದ್ದಾರೆ ಮತ್ತು ಕನಿಷ್ಠ 158 ಜನರು ಗಾಯಗೊಂಡಿದ್ದಾರೆ ಎಂದು ಆರೋಗ್ಯ ಅಧಿಕಾರಿಗಳು ವರದಿ ಮಾಡಿದ್ದಾರೆ.



ಶನಿವಾರ(ಫೆ.1) ಈ ಭೀಕರ ದಾಳಿ ನಡೆದಿದೆ. ಅಧಿಕಾರಿಗಳ ಪ್ರಕಾರ, ಇದನ್ನು ದೇಶದ ಮಿಲಿಟರಿ ವಿರುದ್ಧ ತೀವ್ರ ಹೋರಾಟದಲ್ಲಿ ತೊಡಗಿರುವ ಅರೆಸೇನಾ ಗುಂಪು, ರಾಪಿಡ್ ಸಪೋರ್ಟ್ ಫೋರ್ಸಸ್ ನಡೆಸಿದೆ.

ಆರ್‌ಎಸ್‌ಎಫ್‌ನಿಂದ ಯಾವುದೇ ತತ್‌ಕ್ಷಣದ ಪ್ರತಿಕ್ರಿಯೆ ಬಂದಿಲ್ಲ. ದಾಳಿಯನ್ನು ಖಂಡಿಸಿದ ಸಂಸ್ಕೃತಿ ಸಚಿವ ಮತ್ತು ಸರ್ಕಾರದ ವಕ್ತಾರ ಖಾಲಿದ್ ಅಲ್–ಅಲೈಸಿರ್, ಅನೇಕ ಮಹಿಳೆಯರು ಮತ್ತು ಮಕ್ಕಳು ಮಡಿದವರಲ್ಲಿ ಸೇರಿದ್ದಾರೆ ಎಂದು ಹೇಳಿದ್ದಾರೆ.

ಈಶಾನ್ಯ ಆಫ್ರಿಕನ್ ರಾಷ್ಟ್ರ ಸುಡಾನ್‌ನಲ್ಲಿನ ಸಂಘರ್ಷವು ಏಪ್ರಿಲ್ 2023 ರಲ್ಲಿ ಪ್ರಾರಂಭವಾಗಿತ್ತು. ಮಿಲಿಟರಿ ಮತ್ತು ಆರ್‌ಎಸ್‌ಎಫ್ ನಾಯಕರ ನಡುವಿನ ಉದ್ವಿಗ್ನತೆಯು ರಾಜಧಾನಿ ಖಾರ್ಟೂಮ್ ನಂತರ ದೇಶದ ಎಲ್ಲೆಡೆ ವಿಸ್ತರಿಸಿತ್ತು.

ಮುಂಬೈನಲ್ಲಿ ಟೆನಿಸ್ ಬಾಲ್ ಕ್ರಿಕೆಟ್ ಆಡಿದ ಇಂಗ್ಲೆಂಡ್ ಮಾಜಿ ಪ್ರಧಾನಿ ಸುನಕ್

ಮುಂಬೈ: ಇಂಗ್ಲೆಂಡ್‌ನ ಮಾಜಿ ಪ್ರಧಾನಿ ಹಾಗೂ ಇನ್ಫೋಸಿಸ್ ಸಹ ಸ್ಥಾಪಕ ನಾರಾಯಣಮೂರ್ತಿ ಅವರ ಅಳಿಯ ರಿಷಿ ಸುನಕ್ ಭಾನುವಾರ ಮುಂಬೈಗೆ ಭೇಟಿ ನೀಡಿದ್ದು, ಟೆನಿಸ್ ಬಾಲ್ ಕ್ರಿಕೆಟ್ ಆಡಿದ್ದಾರೆ. ದಕ್ಷಿಣ ಮುಂಬೈನ ಪಾರ್ಸಿ ಜಿಮ್ಖಾನಾಗೆ ಭೇಟಿ ನೀಡಿದ ರಿಷಿ ಸುನಕ್, ಕ್ರಿಕೆಟ್ ಆಟವನ್ನು ಆನಂದಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಸುನಕ್, ಟೆನಿಸ್ ಬಾಲ್ ಕ್ರಿಕೆಟ್ ಆಟವಿಲ್ಲದೆ ಮುಂಬೈನ ಯಾವುದೇ ಪ್ರವಾಸ ಪೂರ್ಣವಾಗುವುದಿಲ್ಲ ಎಂದಿದ್ದಾರೆ.

ಪಾರ್ಸಿ ಜಿಮ್ಖಾನಾ ಕ್ಲಬ್ ವಾರ್ಷಿಕೋತ್ಸವದಲ್ಲಿ ನಿಮ್ಮೆಲ್ಲರೊಂದಿಗೆ ಇರಲು ಸಂತೋಷವಾಗಿದೆ. ಎಂತಹ ಅಸಾಧಾರಣ ಸಾಧನೆ. ತುಂಬಾ ಇತಿಹಾಸ ಮತ್ತು ಹಲವಾರು ರೋಚಕ ಸಂಗತಿಗಳು ಬರಲಿವೆ. ಮತ್ತಷ್ಟು ಭೇಟಿಗಳಿಗಾಗಿ ಎದುರು ನೋಡುತ್ತಿರುವುದಾಗಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಐಕಾನಿಕ್ ಪಾರ್ಸಿ ಜಿಮ್ಖಾನಾವನ್ನು ಫೆಬ್ರವರಿ 25, 1885 ರಂದು ಸ್ಥಾಪಿಸಲಾಯಿತು. ಸರ್ ಜಮ್ಸೆಟ್ಜಿ ಜೆಜೀಭೋಯ್ ಅದರ ಸಂಸ್ಥಾಪಕ ಅಧ್ಯಕ್ಷರಾದರೆ, ಜಮ್ಸೆಟ್ಜಿ ಟಾಟಾ ಅದರ ಅಧ್ಯಕ್ಷರಾಗಿದ್ದರು.ಇದನ್ನು 1887 ರಲ್ಲಿ ಸುಂದರವಾದ ಮರೈನ್ ಡ್ರೈವ್‌ಗೆ ಸ್ಥಳಾಂತರಿಸಲಾಯಿತು.

2022ರ ಬಂಗಾಳ ಬಾಂಬ್ ಸ್ಫೋಟ ಪ್ರಕರಣ: ಪ್ರಮುಖ ಆರೋಪಿ ಬಂಧಿಸಿದ ಎನ್‌ಐಎ

ಕೋಲ್ಕತ್ತಾ: 2022ರಲ್ಲಿ ಪಶ್ಚಿಮ ಬಂಗಾಳದ ಭೂಪತಿ ನಗರದಲ್ಲಿ ಸಂಭವಿಸಿದ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಮತ್ತೊಬ್ಬ ಆರೋಪಿಯನ್ನು ಬಂಧಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಈ ಪ್ರಕರಣದಲ್ಲಿ ಮೂವರು ಮೃತಪಟ್ಟಿದ್ದರು.

ಪ್ರಕರಣದ ಮುಖ್ಯ ತನಿಖಾಧಿಕಾರಿಯ ನಿರಂತರ ಪ್ರಯತ್ನದ ನಂತರ ಪುರ್ಬಾ ಮೇದಿನಿಪುರ ಜಿಲ್ಲೆಯ ಭೂಪತಿನಗರದ ನಿವಾಸಿ ಪಚಾನನ್ ಘೋರೈ ಅವರನ್ನು ಶುಕ್ರವಾರ ಬಂಧಿಸಲಾಗಿದೆ. ತನಿಖೆಯ ಸಂದರ್ಭದಲ್ಲಿ ಆರೋಪಿ ವಿರುದ್ಧ ಜಾಮೀನು ರಹಿತ ವಾರಂಟ್ ಹೊರಡಿಸಲಾಗಿದೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ರಾಜ್‌ಕುಮಾರ್ ಮನ್ನಾ ಎಂಬವರ ಮನೆಯಲ್ಲಿ ಸಂಭವಿಸಿದ ಹೆಚ್ಚಿನ ತೀವ್ರತೆಯ ಸ್ಫೋಟದಲ್ಲಿ ಮಾಲೀಕ ಸ್ಥಳದಲ್ಲೇ ಸಾವನ್ನಪ್ಪಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಬುದ್ಧದೇಬ್ ಮನ್ನಾ ಅಲಿಯಾಸ್ ಲಾಲು ಮತ್ತು ಬಿಸ್ವಜಿತ್ ಗಯೆನ್ ತದನಂತರ ಸಾವನ್ನಪ್ಪಿದ್ದರು.

ಡಿಸೆಂಬರ್ 20, 2022 ರಂದು ರಾಜ್ಯ ಪೊಲೀಸರಿಂದ ತನಿಖೆಯನ್ನು ವಹಿಸಿಕೊಂಡ ಎನ್‌ಐಎ, ಈ ಪ್ರದೇಶದಲ್ಲಿ ಭಯೋತ್ಪಾದನೆ ಮತ್ತು ಹಿಂಸಾಚಾರ ಹೆಚ್ಚಿಸಲು, ಕಚ್ಚಾ ಬಾಂಬ್‌ಗಳನ್ನು ತಯಾರಿಸಲು ಸ್ಫೋಟಕಗಳ ಪೂರೈಕೆಗೆ ಸಂಬಂಧಿಸಿದ ಕ್ರಿಮಿನಲ್ ಪಿತೂರಿಯ ಪರಿಣಾಮವಾಗಿ ಸ್ಫೋಟ ಸಂಭವಿಸಿದೆ ಎಂದು ಹೇಳಿತ್ತು.

ಕೊಡವರು, ಕೊಡವ ಭಾಷಿಗರ ಸಂಸ್ಕೃತಿ ಭದ್ರತೆ, ಹಕ್ಕಿಗಾಗಿ ಆಗ್ರಹಿಸಿ

ಕುಟ್ಟದಿಂದ ಮಡಿಕೇರಿವರೆಗಿನ ಪಾದಯಾತ್ರೆ ಆರಂಭ

- ಸಾಂಪ್ರದಾಯಿಕ ಉಡುಪಿನಲ್ಲಿ ಸಾಗಿದ ಕೊಡವರು
- ಕೊಡವರ ಬೇಡಿಕೆಗಳ ಫಲಕಗಳ ಪ್ರದರ್ಶನ
- ಫೆ.7ರಂದು ಮಡಿಕೇರಿ ತಲುಪಲಿರುವ ಪಾದಯಾತ್ರೆ



'ಕೊಡವಾಮೆ ಬಾಳೋ' ಘೋಷವಾಕ್ಯದೊಂದಿಗೆ ಕುಟ್ಟದಿಂದ ಮಡಿಕೇರಿವರೆಗೆ ಸಾಗಿದ ಬೃಹತ್ ಪಾದಯಾತ್ರೆ

ಮಡಿಕೇರಿ, ಫೆ.2– ಕೊಡವ ಹಾಗೂ ಕೊಡವ ಭಾಷಿಕ ಸಮುದಾಯಗಳ ಸಂಸ್ಕೃತಿಯ ಭದ್ರತೆ ಮತ್ತು ಹಕ್ಕುಗಳು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಅಖಿಲ ಕೊಡವ ಸಮಾಜದ ನೇತೃತ್ವದಲ್ಲಿ 'ಕೊಡವಾಮೆ ಬಾಳೋ' ಘೋಷವಾಕ್ಯದೊಂದಿಗೆ ಕುಟ್ಟದಿಂದ ಮಡಿಕೇರಿವರೆಗೆ ಬೃಹತ್ ಪಾದಯಾತ್ರೆ ಆರಂಭವಾಯಿತು.

ದೇಶ ತಕ್ಕರು, ವಿವಿಧ ಕೊಡವ ಸಮಾಜ, ಕೊಡವ ಭಾಷಿಕ ಸಮುದಾಯಗಳ ಸಮಾಜದ ಮುಖ್ಯಸ್ಥರು, ವಿವಿಧ ಕೊಡವ ಸಂಘಟನೆಗಳ ಪ್ರಮುಖರು ಕುಟ್ಟ ಬಸ್ ನಿಲ್ದಾಣದಲ್ಲಿ ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಶಾಂತಿಯುತ ಪಾದಯಾತ್ರೆಗೆ ಚಾಲನೆ ನೀಡಲಾಯಿತು.

ಕೊಡವ ಹಾಗೂ ಕೊಡವ ಭಾಷಿಕ ಸಮುದಾಯಗಳಿಗೆ ಸಂವಿಧಾನಬದ್ಧವಾಗಿ ದೊರಕಬೇಕಾದ ಹಕ್ಕುಗಳು ಮತ್ತು ಬೇಡಿಕೆಗಳ ಫಲಕಗಳನ್ನು ಹಿಡಿದು ಕೊಡವ ಸಾಂಪ್ರದಾಯಿಕ ಉಡುಪಿನಲ್ಲಿ ಸಹಸ್ರಾರು ಕೊಡವ ಕೊಡವತಿಯರು ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದರು. ಕೊಡವ ಸಮುದಾಯದ ಸಂವಿಧಾನಿಕ ಹಕ್ಕು, ಸಂಸ್ಕೃತಿಯ ಭದ್ರತೆ, ಜನಾಂಗೀಯ ಅಸ್ತಿತ್ವವನ್ನು ಕಾಪಾಡುವುದು, ಜನಾಂಗೀಯ ನಿಂದನೆಯ ವಿರುದ್ಧ ಕ್ರಮ ಕೈಗೊಳ್ಳುವುದು ಸೇರಿದಂತೆ ತಮ್ಮ ಹಕ್ಕುಗಳ ಪ್ರತಿಪಾದನೆಯ ನೂರಾರು ಫಲಕಗಳು ಕೊಡವಾಮೆ ಬಾಳೋ ಪಾದಯಾತ್ರೆಯಲ್ಲಿ ಕಂಡುಬಂದವು.

ಪಾದಯಾತ್ರೆ ಸಂಬಂಧ ಜಿಲ್ಲೆಯ ಪ್ರತೀ ನಾಡ್, ಊರ್, ಒಕ್ಕಗಳ ಜನರು ಸ್ವಯಂ ಪ್ರೇರಿತರಾಗಿ ಪಾದಯಾತ್ರೆಯಲ್ಲಿ ಪಾಲ್ಗೊಂಡು ನಮ್ಮ ಹಕ್ಕಿಗಾಗಿ ಹೋರಾಡಲು ಸದಾ ಸಿದ್ಧ ಎಂಬ ಸಂದೇಶವನ್ನು ನೀಡಿದರು. ಪಾದಯಾತ್ರೆಯನ್ನು ಅತ್ಯಂತ ಶಿಸ್ತುಬದ್ಧವಾಗಿ, ಯಾವುದೇ ಘೋಷಣೆಗಳಿಲ್ಲದೆ, ಭಾಷಣಗಳನ್ನು ಮಾಡದೆ, ಸಮುದಾಯಗಳ ಭಾವನೆಗಳಿಗೆ ಆಗಿರುವ ವೇದನೆಗಳಿಗೆ ಒತ್ತು ನೀಡಿ ಶಾಂತಿಯುತವಾಗಿ ನಡೆಸಲಾಯಿತು. ಮಾರ್ಗದ ಉದ್ದಕ್ಕೂ ಶುಚಿತ್ವ, ಆಹಾರ, ನೀರು, ಪಾನೀಯಗಳ ವ್ಯವಸ್ಥೆಗಳನ್ನು ಮಾಡಲಾಗಿತ್ತು. ಬೆಂಗಳೂರು, ಮೈಸೂರು ಕೊಡವ ಸಮಾಜ ಸೇರಿದಂತೆ ಜಿಲ್ಲೆಯ ಎಲ್ಲಾ ಕೊಡವ ಸಮಾಜಗಳ ಪ್ರಮುಖರು, ಸದಸ್ಯರು ಪಾದಯಾತ್ರೆಯಲ್ಲಿ ಸಾಗಿ ಬಂದರು.

ಕುಟ್ಟದಿಂದ ಮಡಿಕೇರಿವರೆಗಿನ 'ಕೊಡವಾಮೆ ಬಾಳೋ' ಪಾದಯಾತ್ರೆ ಫೆ.2ರಿಂದ ಕುಟ್ಟದಲ್ಲಿ ಆರಂಭಗೊಂಡು ಫೆ.7ರಂದು ಮಡಿಕೇರಿಯಲ್ಲಿ ಸಮಾರೋಪಗೊಳ್ಳಲಿದೆ. ಈ ಪಾದಯಾತ್ರೆಯ ಮೊದಲನೇ ದಿನ ಕುಟ್ಟದಿಂದ ಪ್ರಾರಂಭವಾಗಿ ಶ್ರೀಮಂಗಲ ಮಾರ್ಗವಾಗಿ ಟಿ.ಶೆಟ್ಟಿಗೇರಿವರೆಗಿನ ಒಟ್ಟು 14 ಕಿ.ಮೀ ದೂರವನ್ನು ಪೂರ್ಣಗೊಳಿಸಿದೆ. ಪಾದಯಾತೆ ಒಟ್ಟು 82 ಕಿ.ಮೀ ದೂರವನ್ನು ಕ್ರಮಿಸಲಿದ್ದು, 2ನೇ ದಿನದ ಪಾದಯಾತ್ರೆ ಫೆ.3ರ ಬೆಳಗ್ಗೆ 9.30 ಗಂಟೆಗೆ ಮತ್ತೆ ಆರಂಭವಾಗಲಿದೆ ಎಂದು ಅಖಿಲ ಕೊಡವ ಸಮಾಜ ಅಧ್ಯಕ್ಷ ಪರದಂಡ ಸುಬ್ರಮಣಿ ಮಾಹಿತಿ ನೀಡಿದರು. ಫೆ.7ರಂದು ಮಡಿಕೇರಿ ಕೊಡವ ಸಮಾಜದ ಮಂದ್‌ನಲ್ಲಿ ಪಾದಯಾತ್ರೆ ಸಮಾರೋಪಗೊಳ್ಳಲಿದ್ದು, ಕೊನೆಯ ದಿನ 25 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಹೇಳಿದರು.

ಅಖಿಲ ಕೊಡವ ಸಮಾಜದ ಯೂತ್ ವಿಂಗ್ ಅಧ್ಯಕ್ಷ ಚಮ್ಮಟ್ಟಿರ ಪ್ರವೀಣ್ ಉತ್ತಪ್ಪ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ, ಯುಕೋ ಸಂಘಟನೆಯ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ, ಕನೆಕ್ಟಿಂಗ್ ಕೊಡವಾಸ್ ಸಂಘಟನೆಯ ನಿರನ್ ಮಂದಣ್ಣ, ವ್ಯಾಲಿ ಡ್ಯೂ ಕೊಡವ ಕಲ್ಚರಲ್ ಅಸೋಷಿಯೇಶನ್ ಅಧ್ಯಕ್ಷ ಹಂಚೆಟ್ಟಿರ ಮನು ಮುದ್ದಪ್ಪ ಕೊಡವಾಮೆರ ಕೊಂಡಾಟ ಸಂಘಟನೆಯ ಚಾಮೆರ ದಿನೇಶ್ ಸೇರಿದಂತೆ ವಿವಿಧ ಕೊಡವ ಸಮಾಜ ಮತ್ತು ಸಂಘಟನೆಗಳ ಪ್ರಮುಖರಾದ ಚೊಟ್ಟೆಕ್‌ಮಾಡ ರಾಜೀವ್ ಬೋಪಯ್ಯ, ಮಾಳೇಟಿರ ಶ್ರೀನಿವಾಸ್, ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ, ಮಂಡುವಂಡ ಮುತ್ತಪ್ಪ, ಪಾಂಡೀರ ಸಂಜು ಕಾವೇರಪ್ಪ, ಕೀತಿಯಂಡ ವಿಜಯ್ ಕುಮಾರ್ ಸೇರಿದಂತೆ ಹತ್ತಾರು ಸಂಘಟನೆಗಳ ನೂರಾರು ಸಂಖ್ಯೆಯ ಪ್ರದಾಧಿಕಾರಿಗಳು ಪಾದಯಾತ್ರೆಯಲ್ಲಿ ಸಾಗಿ ಬಂದರು.

ಗಾಂಜಾ ಸಾಗಿಸುತ್ತಿದ್ದ ಕೇರಳದ ವ್ಯಕ್ತಿ ಬಂಧನ



ಮಡಿಕೇರಿ,ಫೆ.2– ವಿರಾಜಪೇಟೆ ತಾಲೂಕಿನ ಪೆರುಂಬಾಡಿ ಜಂಕ್ಷನ್ ಬಳಿ ನಿಷೇಧಿತ ಮಾದಕ ವಸ್ತು ಗಾಂಜಾವನ್ನು ಸಾಗಿಸುತ್ತಿದ್ದ ಕೇರಳ ರಾಜ್ಯ ಕಣ್ಣೂರು ಮೂಲದ ಆರೋಪಿಯನ್ನು ವಿರಾಜಪೇಟೆ ನಗರ ಠಾಣಾ ಪೊಲೀಸರು ಮಾಲು ಸಮೇತ ಬಂಧಿಸಿದ್ದಾರೆ.

ಕಣ್ಣೂರು ನಿವಾಸಿ ನಿಧಿನ್(28) ಎಂಬಾತನೇ ಬಂಧಿತ ಆರೋಪಿ. ಈತನ ಬಳಿಯಿದ್ದ 3 ಕೆ.ಜಿ. 90 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನವನ್ನೂ ಕೂಡ ವಶಕ್ಕೆ ಪಡೆಯಲಾಗಿದೆ. ಪೆರುಂಬಾಡಿ ಜಂಕ್ಷನ್ ಬಳಿ ಗಾಂಜಾ ಮಾರಾಟಕ್ಕೆ ಸಾಗಿಸುತ್ತಿರುವ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ಆರೋಪಿಯನ್ನು ಮಾಲು ಸಹಿತ ಬಂಧಿಸಲಾಗಿದೆ. ವಿರಾಜಪೇಟೆ ಡಿವೈಎಸ್‌ಪಿ ಮಹೇಶ್‌ಕುಮಾರ್, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ವಿರಾಜಪೇಟೆ ನಗರ ಪೊಲೀಸ್ ಠಾಣಾಧಿಕಾರಿ ಪ್ರಮೋದ್ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಪರಿಸರ ಸಂರಕ್ಷಣೆ ಕುರಿತು ವಿರಾಜಪೇಟೆಯಲ್ಲಿ ಜಾಥಾ



ಪರಿಸರ ಸಂರಕ್ಷಣೆ ಕುರಿತು ನಡೆದ ಜಾಥಾದಲ್ಲಿ ಭಾಗವಹಿಸಿರುವ ಶಾಲಾ ಮಕ್ಕಳು.

ವಿರಾಜಪೇಟೆ: ಕಾವೇರಿ ನದಿ ಮಲೀನ ತಡೆಯುವಂತೆ ಹಾಗೂ ಒತ್ತುವರಿ ಆಗದಂತೆ ಪ್ರಕೃತಿಯ ಸಮತೋಲನವನ್ನು ಕಾಪಾಡುವುದರೊಂದಿಗೆ ಗಿಡ–ಮರ ಬೆಳಸಿ ಪರಿಸರವನ್ನು ಉಳಿಸಲು ಎಲ್ಲರು ಕೈಜೋಡಿಸಬೇಕೆಂದು ಕೊಡಗು ಪರಿಸರ ರಕ್ಷಣಾ ಹೋರಾಟ ಸಮಿತಿ ವತಿಯಿಂದ ಪಟ್ಟಣದ ಮುಖ್ಯಬೀದಿಗಳಲ್ಲಿ ಪರಿಸರ ಸಂರಕ್ಷಣಾ ಜಾಥಾ ನಡೆಸಿ ತಹಶೀಲ್ದಾರ್ ರಾಮಚಂದ್ರ ಅವರಿಗೆ ಗಿಡ ಮತ್ತು ಮನವಿಯನ್ನು ಸಲ್ಲಿಸಲಾಯಿತು.

ಹೋರಾಟ ಸಮಿತಿಯ ಅಧ್ಯಕ್ಷ ಬಿ.ಯು. ಮಾಚಯ್ಯ ಮಾತನಾಡಿ, ಅರಣ್ಯ ಸಂರಕ್ಷಣೆ ಮತ್ತು ಗಿಡ ಮರಗಳನ್ನು ಉಳಿಸಿ ಬೆಳೆಸಲು ಭೂಮಿಯನ್ನು ಹಸಿರಾಗಿಸಲು ಮುಂಜಾಗ್ರತೆ ವಹಿಸಬೇಕು. ಕೊಡಗಿನ ನೆಲ ಜಲ ಪರಿಸರವನ್ನು ಉಳಿಸುವುದರೊಂದಿಗೆ ಭೂಮಿಯನ್ನು ರಕ್ಷಿಸಲು ಪ್ರತಿಯೊಬ್ಬರು ಮುಂದಾಗಬೇಕು. ವಿನಾಶದ ಅಂಚಿನಲ್ಲಿರುವ ವನ್ಯಜೀವಿಗಳನ್ನು ಅಧಿಕಾರಿಗಳು ಸಂರಕ್ಷಣೆ ಮಾಡುವಂತಾಗಬೇಕು. ಅರಣ್ಯದ ಮೂಲಕ ಹಾದು ಹೋಗುವ ವಾಹನಗಳಿಗೆ ಅನಗತ್ಯವಾಗಿ ವಾಹನ ನಿಲುಗಡೆಯನ್ನು ನಿರ್ಬಂಧಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಿದರು.

ಮೊದಲಿಗೆ ಪಟ್ಟಣದ ತೆಲುಗರ ಬೀದಿಯ ಮಾರಿಯಮ್ಮ ದೇವಸ್ಥಾದ ಬಳಿಯಿಂದ ಪರಿಸರ ಸಂರಕ್ಷಣಾ ಜಾಥಾಕ್ಕೆ ವಿರಾಜಪೇಟೆ ವೈದ್ಯರಾದ ಪಕ್ಷಿ ವೀಕ್ಷಕ ಡಾ.ಎಸ್.ವಿ.ನರಸಿಂಹನ್ ಅವರು ಚಾಲನೆ ನೀಡಿ ಮಾತನಾಡಿದರು. ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ ಮಾತನಾಡಿದರು.

ತಹಶೀಲ್ದಾರ್ ರಾಮಚಂದ್ರ ಮನವಿ ಸೀಕರಿಸಿದ ಬಳಿಕ ಮಾತನಾಡಿ, ಪರಿಸರ ಸಂರಕ್ಷಣೆ ಎಲ್ಲರ ಕರ್ತವ್ಯ. ಗಿಡ ಮರ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕೈಜೋಡಿಸುವುದು ಎಲ್ಲರ ಕರ್ತವ್ಯ ಎಂದರು.

ಕೊಡಗು ಪರಿಸರ ರಕ್ಷಣಾ ಹೋರಾಟ ಸಮಿತಿಯ ಉಪಾಧ್ಯಕ್ಷ ಟಿ.ಎನ್.ಕರುಣ್ ಕುಮಾರ್ ಶೆಟ್ಟಿ, ಗೌರವ ಕಾರ್ಯದರ್ಶಿ ಸುನಿತ ದಿನೇಶ್, ಖಜಾಂಚಿ ವಿನೂಪ್ ಕುಮಾರ್, ಸಂಚಾಲಕ ಶಶಿ ಅಚ್ಚಪ್ಪ ನಿರ್ದೇಶಕರಾದ ರತ್ನಾ ಕರುಂಬಯ್ಯ, ಶರಣು ನಂಜಪ್ಪ, ಅಶ್ವಿನ್, ಸಂತೋಷ್, ಸಾಜು, ರೋಟರಿ ಪ್ರೌಢ ಮತ್ತು ಪ್ರಾಥಮಿಕ ಶಾಲೆ, ತ್ರಿವೇಣಿ, ರೋಲಿಕ್ಸ್ ಆಂಗ್ಲ ಮಾಧ್ಯಮ ಮತ್ತು ಕೂರ್ಗ್‌ವ್ಯಾಲಿ ಶಾಲಾ ವಿದ್ಯಾರ್ಥಿಗಳು ಜಾಥಾದಲ್ಲಿ ಭಾಗವಹಿಸಿದ್ದರು.

ಪ್ರಧಾನ ಅರ್ಚಕರ ಮೇಲೆ ಹಲ್ಲೆ: ಮೂವರು ಆರೋಪಿಗಳ ಬಂಧನ

ಮಡಿಕೇರಿ,ಫೆ.2– ಕಟ್ಟೆಮಾಡು ಶ್ರೀ ಮಹಾ ಮೃತ್ಯುಂಜಯ ದೇವಾಲಯದ ಪ್ರಧಾನ ಅರ್ಚಕ ವಿಘ್ನೇಶ್ ಭಟ್ ಅವರ ಮೇಲೆ ಹಲ್ಲೆ ನಡೆಸಿದ್ದ ಆರೋಪಿಗಳನ್ನು ಮಡಿಕೇರಿ ಗ್ರಾಮಾಂತರ ಠಾಣಾ ಪೊಲೀಸರು ಬಂಧಿಸಿದ್ದಾರೆ.

ವಿರಾಜಪೇಟೆ ನಾಲ್ಕೇರಿ ಗ್ರಾಮದ ನಿವಾಸಿಗಳಾದ ಎಂ.ಬಿ. ಅಯ್ಯಪ್ಪ ಅಲಿಯಾಸ್ ಅನಿಲ(46), ಎಂ.ಪಿ.ಕಾಳಪ್ಪ(51) ಮತ್ತು ಟಿ.ಎಲ್. ಸುಬ್ಬಯ್ಯ ಅಲಿಯಾಸ್ ಸುನಿ(47) ಬಂಧಿತ ಆರೋಪಿಗಳು. ಜ.27ರ ಸಂಜೆ ವೇಳೆ ಅರ್ಚಕ ವಿಘ್ನೇಶ್ ಭಟ್ ಅವರ ಮನೆಯ ಬಳಿ ವಾಹನದಲ್ಲಿ ಆಗಮಿಸಿದ್ದ ಆರೋಪಿಗಳು ಅವರ ಮೇಲೆ ತೀವ್ರ ಹಲ್ಲೆ ನಡೆಸಿದ್ದರು. ಈ ಕುರಿತು ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಶನಿವಾರ 3 ಮಂದಿ ಆರೋಪಿಗಳನ್ನು ಬಂಧಿಸಿದ ಪೊಲೀಸರು ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಮಡಿಕೇರಿ ಡಿವೈಎಸ್‌ಪಿ ಸೂರಜ್ ಪಿ.ಎ, ಗ್ರಾಮಾಂತರ ಠಾಣಾ ವೃತ್ತ ನಿರೀಕ್ಷಕ ಹೆಚ್.ವಿ ಚಂದ್ರಶೇಖರ್, ಠಾಣಾಧಿಕಾರಿ ಶ್ರೀನಿವಾಸ್, ಸಂಚಾರಿ ಠಾಣಾಧಿಕಾರಿ ಎನ್.ಟಿ. ತಮ್ಮಯ್ಯ, ಅಪರಾಧ ಪತ್ತೆ ವಿಭಾಗದ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ.

ಮಲೆಮಹದೇಶ್ವರ ವನ್ಯಜೀವಿ ಧಾಮದಲ್ಲಿ 253 ಪ್ರಭೇದದ ಪಕ್ಷಿಗಳು ಪತ್ತೆ





ಮಲೆ ಮಹದೇಶ್ವರ ವನ್ಯಜೀವಿ ಧಾಮದಲ್ಲಿ ಎರಡು ದಿನಗಳ ಕಾಲ ನಡೆದ ಪಕ್ಷಿಗಳ ಗಣತಿಯಲ್ಲಿ ಕಂಡು ಬಂದ ಪಕ್ಷಿ. ಬಲಚಿತ್ರದಲ್ಲಿ ಪಕ್ಷಿ ಗಣತಿ ನಡೆಸಿದ ತಂಡ.

ಚಾಮರಾಜನಗರ: ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ವ್ಯಾಪ್ತಿಗೊಳಪಡುವ ಮಲೆ ಮಹದೇಶ್ವರ ವನ್ಯಜೀವಿ ಧಾಮದಲ್ಲಿ ಎರಡು ದಿನಗಳ ಕಾಲ ನಡೆದ ಪಕ್ಷಿಗಳ ಗಣತಿ ಕಾರ್ಯದಲ್ಲಿ 253 ಪ್ರಭೇದದ ಪಕ್ಷಿಗಳು ಪತ್ತೆಯಾಗಿವೆ.

ಹನೂರು ಹಾಗೂ ಕೊಳ್ಳೇಗಾಲ ತಾಲೂಕು ಸೇರಿದಂತೆ ಮಲೆ ಮಹದೇಶ್ವರ ವನ್ಯಜೀವಿ ಧಾಮದಲ್ಲಿ 7 ಅರಣ್ಯ ವಲಯಗಳಿವೆ. ಒಟ್ಟು 949.469 ಚದರ ಕಿ.ಮೀ.ನಷ್ಟು ಅರಣ್ಯ ಪ್ರದೇಶವನ್ನು ಹೊಂದಿದೆ. ಈ ವನ್ಯಧಾಮವು ಬೆಟ್ಟಗುಡ್ಡ ಪ್ರದೇಶದಿಂದ ಕೂಡಿದೆ. ಈ ವಿಭಾಗದಲ್ಲಿ ಅರೆ ಹರಿದ್ವರ್ಣ, ಶುಷ್ಕ ಅರಣ್ಯ, ಒಣ ಶುಷ್ಕ ಅರಣ್ಯ, ಕುರುಚಲು ಕಾಡುಗಳನ್ನು ಕಾಣಬಹುದಾಗಿದೆ.

ವನ್ಯಧಾಮದಲ್ಲಿ ಪ್ರಮುಖವಾಗಿ ಆನೆ, ಹುಲಿ, ಚಿರತೆ, ಜಿಂಕೆ, ಕಡವೆ, ಕಾಡೆಮ್ಮೆ, ಕಾಡುಹಂದಿ, ಕರಡಿ, ನರಿ, ಸೀಳುನಾಯಿ ಇತ್ಯಾದಿ ವನ್ಯ ಜೀವಿಗಳಿಗೆ ಆವಾಸಸ್ಥಾನವಾಗಿದ್ದು, ಪಕ್ಷಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಮೊದಲ ಬಾರಿಗೆ ಪಕ್ಷಿ ಗಣತಿ ನಡೆಸಲಾಯಿತು.

ಮಾಹಿತಿ ಸಂಗ್ರಹ: ಮೊದಲ ಬಾರಿಗೆ ನಡೆದ ಗಣತಿ ಕಾರ್ಯಕ್ಕೆ ರಾಜ್ಯದ ವಿವಿಧ ಜಿಲ್ಲೆಗಳು ಸೇರಿದಂತೆ ಹೊರ ರಾಜ್ಯಗಳಿಂದ ಸುಮಾರು 500ಕ್ಕೂ ಹೆಚ್ಚು ಮಂದಿ ನೋಂದಣಿ ಮಾಡಿಸಿಕೊಂಡಿದ್ದರು. ಈ ಪೈಕಿ 120 ಮಂದಿ ಪರಿಣತರನ್ನು ಅರಣ್ಯ ಇಲಾಖೆ ಆಯ್ಕೆ ಮಾಡಿ, 4 ತಂಡಗಳಾಗಿ ವಿಂಗಡಿಸಲಾಗಿತ್ತು.

ವೈವಿಧ್ಯಮಯ ಆವಾಸಸ್ಥಾನಗಳನ್ನು ಒಳಗೊಂಡಿರುವ ಅರಣ್ಯದಲ್ಲಿ ಪ್ರತಿ ದಿನ ಒಂದೊಂದು ತಂಡ 3 ರಿಂದ 4 ಕಿಮೀ ಉದ್ದದ 40 ಟ್ರ್ಯಾಕ್‌ಗಳನ್ನು ಆಯ್ಕೆ ಮಾಡಿಕೊಂಡು ಸಮೀಕ್ಷೆ ಕಾರ್ಯ ನಡೆಸಲಾಯಿತು.

ಪ್ರತಿ ತಂಡವು ಒಂದು ಟ್ರ್ಯಾಕ್‌ನಲ್ಲಿ ಪಕ್ಷಿ ವೀಕ್ಷಣೆ ನಡೆಸಿತು. ಪ್ರತಿ ಗುಂಪು ರಾತ್ರಿ ಪಕ್ಷಿ ವೀಕ್ಷಣೆಯೊಂದಿಗೆ ದಿನದ ಮೂರು ಪಾಳಯದಲ್ಲಿ ಪಕ್ಷಿ ವೀಕ್ಷಣೆ ನಡೆಸಿತು. ಪಕ್ಷಿ ಸಮೀಕ್ಷೆಯ ಕೊನೆಯಲ್ಲಿ, ಭಾಗವಹಿಸುವವರು ಸುಮಾರು 253 ಜಾತಿಯ ಪಕ್ಷಿಗಳನ್ನು ಗುರುತಿಸಿದರು.

ಬಿಳಿ ನೇಪ್ಡ್ ತುದಿ, ಬಿಳಿ ರಂಪ್ಡ್ ರಣಹದ್ದು, ನೀಲಗಿರಿ ಮರದ ಪಾರಿವಾಳ, ಕ್ರೆಸ್ಟೆಡ್ ಸರ್ಪೆಂಟ್ ಹದ್ದು ಮುಂತಾದ ಅಪರೂಪದ ಪ್ರಭೇದದ ಪಕ್ಷಿಗಳು ಸಮೀಕ್ಷೆಯಲ್ಲಿ ಪತ್ತೆಯಾಯಿತು.

ಸಚಿವ ಸಂಪುಟ ಸಭೆಗೆ ಕಪ್ಪು ಬಾವುಟ ಪ್ರದರ್ಶನದ ಎಚ್ಚರಿಕೆ



ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡುತ್ತಿರುವುದು.

ಚಾಮರಾಜನಗರ: ಹಾಲಿನ ಪ್ರೋತ್ಸಾಹ ಧನವನ್ನು ಕಳೆದ 8 ತಿಂಗಳಿಂದ ರಾಜ್ಯ ಸರ್ಕಾರ ಬಿಡುಗಡೆ ಮಾಡಿಲ್ಲ. ಸಂಪುಟ ಸಭೆ ನಡೆಸುವ ಮೊದಲು ಹಾಲಿನ ಪ್ರೋತ್ಸಾಹ ಧನ ಬಿಡುಗಡೆ ಮಾಡಬೇಕು. ಇಲ್ಲದಿದ್ದರೇ ಕಪ್ಪು ಬಾವುಟ ಪ್ರದರ್ಶನ ಮಾಡಲಾಗುವುದು ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಎಚ್ಚರಿಸಿದ್ದಾರೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹೈನುಗಾರಿಕೆ ನಡೆಸುವ ರೈತರ ಹಾಲಿನ ಪ್ರೋತ್ಸಾಹಧನ ಲೀಟರಿಗೆ 5 ರೂಪಾಯಿಗಳನ್ನು 8 ತಿಂಗಳಿಂದ ಬಿಡುಗಡೆ ಮಾಡಿಲ್ಲ. ಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟದ ಸಭೆ ನಡೆಸುವ ಮೊದಲು ಹಣ ಬಿಡುಗಡೆ ಮಾಡಿ ನಂತರ ಸಭೆ ನಡೆಸಬೇಕು. ಇಲ್ಲದಿದ್ದರೆ ಸಂಘಟನೆಯಿಂದ ಸಚಿವ ಸಂಪುಟಕ್ಕೆ ಕಪ್ಪು ಬಾವುಟ ಪ್ರದರ್ಶನ ಮಾಡಬೇಕಾಗುತ್ತದೆ ಎಂದರು.

ರೈತರಿಗೆ ಮರೀಚಿಕೆಯಾದ ಬಜೆಟ್: ಕೃಷಿ ಸಂಕಷ್ಟ ಅರಿಯದೆ, ರೈತರ ನೈಜ ಸಮಸ್ಯೆಗೆ ಪರಿಹಾರ ಸೂಚಿಸದೆ, ಬಜೆಟ್ ಮಂಡನೆಯಲ್ಲಿ ಅನ್ನದಾತನ ಗುಣಗಾನ ಮಾಡಿ ಕೃಷಿ ಕ್ಷೇತ್ರದ ಕಣ್ಣಿಗೆ ಮಣ್ಣೆರಚುವ ಕಾರ್ಯವನ್ನು ಕೇಂದ್ರ ಬಜೆಟ್‌ನಲ್ಲಿ ಮಾಡಲಾಗಿದೆ ಎಂದು ಟೀಕಿಸಿದರು.

ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಮಾಡುವುದು, ಕೃಷಿ ಸಾಲ ನೀತಿ ತಿದ್ದುಪಡಿ ಮಾಡುವುದು, ಬೆಳೆ ವಿಮೆ ಪದ್ಧತಿ ಬದಲಾಯಿಸುವುದರ ಬಗ್ಗೆ ಯಾವುದೇ ಪ್ರಸ್ತಾಪ ಮಾಡಿಲ್ಲ. ಕಿಸಾನ್ ಕಾರ್ಡ್ ಕೊಡುತ್ತೇವೆ ಎನ್ನುವುದು ರೈತರ ಕಣ್ಣಿಗೆ ಮಣ್ಣೆರಚುವ ತಂತ್ರಗಾರಿಕೆಯಾಗಿದೆ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ನಾಗಾರ್ಜುನ್, ಮಹದೇವಸ್ವಾಮಿ, ದೇವರಾಜ್, ರೇವಣ್ಣ, ಸತೀಶ್, ಶಿವಕುಮಾರ ಇದ್ದರು.

ಬಾಲಕನ ಪೋಷಕರ ಪತ್ತೆಗೆ ಮನವಿ

ಚಾಮರಾಜನಗರ: ಗುಂಡ್ಲುಪೇಟೆಯ ಅಣ್ಣೂರುಕೇರಿ ಗ್ರಾಮದ ಬಳಿ ಜ.16 ರಂದು ಸಾಗರ್ ಎಂಬ ಬಾಲಕ ಸಿಕ್ಕಿದ್ದು, ಈತನ ಪೋಷಕರ ಪತ್ತೆಗೆ ಸಹಕರಿಸುವಂತೆ ಕೋರಲಾಗಿದೆ.

ಬಾಲಕನು ನೇಪಾಳ ಮೂಲದವನಾಗಿದ್ದು ತಂದೆಯ ಜೊತೆಗೆ ಗುಂಡ್ಲುಪೇಟೆಗೆ ಬಂದಿದ್ದು ತಂದೆಯಿಂದ ಬೇರ್ಪಟ್ಟಿರುತ್ತಾನೆ. ಸುಮಾರು 15 ವರ್ಷದ ಸಾಗರ್ ಕೋಲುಮುಖ, ಬಿಳಿ ಮೈ ಬಣ್ಣ ಹೊಂದಿದ್ದು, ತಂದೆಯ ಹೆಸರು ಸಂತೋಷ್, ತಾಯಿಯ ಹೆಸರು ಲೇ. ದುರ್ಗ ಎಂದು ತಿಳಿಸಿರುತ್ತಾನೆ.

ಈತನ ಪೋಷಕರ ಬಗ್ಗೆ ತಿಳಿದಲ್ಲಿ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿಗಳ ಕಚೇರಿ ದೂ.ಸಂ. 08226–222354 ಸಂಪರ್ಕಿಸುವಂತೆ ಬಾಲಕರ ಸರ್ಕಾರಿ ಬಾಲಮಂದಿರದ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ನಾಪತ್ತೆ

ಚಾ.ನಗರ, ಫೆ.2– ಜನ್ನೂರು ಗ್ರಾಮದ ನಿವಾಸಿ ರಮೇಶ ಕಾಣೆಯಾಗಿದ್ದು, ಇವರ ಪತ್ತೆಗೆ ಸಹಕರಿಸುವಂತೆ ಕೋರಲಾಗಿದೆ.

45 ವರ್ಷದ ರಮೇಶ 4.5 ಅಡಿ ಎತ್ತರ, ಕೋಲುಮುಖ, ಎಣ್ಣೆಗೆಂಪು ಮೈ ಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಹಸಿರು ಬಣ್ಣದ ಚೆಕ್ಸ್ ಅಂಗಿ ಹಾಗೂ ನೀಲಿ ಬಣ್ಣದ ಪಂಚೆ ಧರಿಸಿದ್ದರು.

ಇವರ ಸುಳಿವು ದೊರೆತಲ್ಲಿ ಕುದೇರು ಠಾಣೆ ದೂ.ಸಂ.08226–234439, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಮೊ.ಸಂ 9480804647, ಚಾ.ನಗರ ಕಂಟ್ರೋಲ್ ರೂಂ.222083 ಸಂಪರ್ಕಿಸುವಂತೆ ಕುದೇರಿನ ಸಬ್‌ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಷೇತ್ರದಲ್ಲಿ ಕ್ರೀಡಾಭಿವೃದ್ಧಿಗೆ 55 ಕೋಟಿ ರೂ. ಪ್ರಸ್ತಾವನೆ : ಎಆರ್‌ಕೆ



ಗ್ರಾಮೀಣ ಕ್ರೀಡಾಕೂಟವನ್ನು ಶಾಸಕ ಎ.ಆರ್. ಕೃಷ್ಣಮೂರ್ತಿ ಉದ್ಘಾಟಿಸಿದರು.

ಯಳಂದೂರು, ಫೆ.2– ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದ ಕ್ರೀಡಾಭಿವೃದ್ಧಿಗೆ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ 55 ಕೋಟಿ ರೂ.ಗಳ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮೈದಾನದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಹಮ್ಮಿಕೊಂಡಿದ್ದ ತಾಲೂಕು ಮಟ್ಟದ ಗ್ರಾಮೀಣ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು. ಕೊಳ್ಳೇಗಾಲದಲ್ಲಿ ಒಳಾಂಗಣ ಹಾಗೂ ಹೊರಾಂಗಣ ಕ್ರೀಡಾಂಗಣದ ಅಭಿವೃದ್ಧಿ ಯಳಂದೂರು ತಾಲೂಕಿಗೆ ನೂತನ ಕ್ರೀಡಾಂಗಣ ನಿರ್ಮಾಣ ಸೇರಿದಂತೆ ಇತರೆ ಕ್ರೀಡಾ ಚಟುವಟಿಕೆಗಳಿಗೆ ಅನುಕೂಲವಾಗಲು ಪ್ರಸ್ತಾವನೆ ಸಲ್ಲಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಯಳಂದೂರಿನಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಅನುದಾನ ನೀಡುವ ಭರವಸೆ ನೀಡಿದ್ದಾರೆ. ಇದಕ್ಕೆ ಸೂಕ್ತ ಸ್ಥಳವನ್ನು ಹುಡುಕುವ ಕೆಲಸ ಪ್ರಗತಿಯಲ್ಲಿದೆ ಎಂದರು.

ಗ್ರಾಮೀಣ ಮಕ್ಕಳು ಕ್ರೀಡಾಕೂಟದಲ್ಲಿ ಹೆಚ್ಚು ಭಾಗವಹಿಸಬೇಕು. ಇಂದು ದೇಸಿ ಕ್ರೀಡೆಗಳಾದ ಕಬಡ್ಡಿ ಹಾಗೂ ಖೋಖೋ ಕ್ರೀಡೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆಗಳಿಸಿದ್ದು ಭಾರತ ಕ್ರೀಡಾಪಟುಗಳು ಇದನ್ನು ಜಯಿಸಿ ದೇಶಕ್ಕೆ ಕೀರ್ತಿ ತಂದಿದ್ದಾರೆ. ಕುರುಬೂರಿನ ಶಾಲೆಯ ಶಿಕ್ಷಕರು ಇಲ್ಲಿನ ಮಕ್ಕಳಿಗೆ ಖೋಖೋ ಹೇಳಿಕೊಡುವ ಮೂಲಕ ದೇಶದಲ್ಲೇ ಸದ್ದು ಮಾಡಿದ್ದಾರೆ. ಚೈತ್ರಾ ಎಂಬ ಪ್ರತಿಭೆ ಇದಕ್ಕೆ ಸಾಕ್ಷಿಯಾಗಿ ನಿಂತಿದ್ದು ಇಂತಹ ಅನೇಕ ಪ್ರತಿಭೆಗಳನ್ನು ಈ ಶಾಲೆಯ ಮೂಲಕ ನೀಡಿದ್ದಾರೆ. ಇಂತಹ ತರಬೇತುದಾರರ ಸಂಖ್ಯೆ ಹೆಚ್ಚಬೇಕು. ಗ್ರಾಮೀಣ ಮಕ್ಕಳು ಕ್ರೀಡೆಗೆ ಹೆಚ್ಚು ಆಸಕ್ತಿ ನೀಡಬೇಕು. ಇದರಲ್ಲಿ ಮನಸ್ಸು, ದೇಹ ಎರಡೂ ಸದೃಢವಾಗುತ್ತದೆ ಎಂದರು. ನಾನು ಕೂಡ ಖೋಖೋ, ಬಾಸ್ಕೆಟ್ ಬಾಲ್ ಆಟ ಆಡುತ್ತಿದ್ದೆ ಎಂದು ನೆನಪಿಸಿಕೊಂಡರು.

ಪಪಂ ಉಪಾಧ್ಯಕ್ಷೆ ಶಾಂತಮ್ಮ ನಿಂಗರಾಜು ಸದಸ್ಯರಾದ ಮಹೇಶ್, ವೈ.ಜಿ. ರಂಗನಾಥ, ಬಿ.ರವಿ, ಮಂಜು ನಾಮನಿರ್ದೇಶಿತ ಸದಸ್ಯರಾದ ಲಿಂಗರಾಜಮೂರ್ತಿ, ಮುನವ್ವರ್‌ಬೇಗ್ ಶ್ರೀ ಬಿಳಿಗಿರಿರಂಗನಾಥಸ್ವಾಮಿ ದೇಗುಲದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜೆ. ಶ್ರೀನಿವಾಸ್ ಸದಸ್ಯ ಗುಂಬಳ್ಳಿ ರಾಜಣ್ಣ, ಚಾಮುಲ್ ನಿರ್ದೇಶಕ ರೇವಣ್ಣ, ಪಿಎಸ್‌ಐ ಕರಿಬಸಪ್ಪ ದೈಹಿಕ ಪರಿವೀಕ್ಷಕ ಶಾಂತರಾಜು, ಪ್ರಾಂಶುಪಾಲ ಎಲ್. ಮಹೇಶ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಕೆ. ಸುರೇಶ್ ಸೇರಿದಂತೆ ಅನೇಕರು ಇದ್ದರು.

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ತಾಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ನಿವೃತ್ತ ನೌಕರರ ವೇದಿಕೆ ಸದಸ್ಯರು.

ಚಾಮರಾಜನಗರ, ಫೆ.2– ಸರ್ಕಾರಿ ನೌಕರಿಯಿಂದ ನಿವೃತ್ತರಾದವರಿಗೆ 7ನೇ ವೇತನ ಆಯೋಗದ ಲೆಕ್ಕಾಚಾರದ ಅನುಸಾರ ಡಿಸಿಆರ್‌ಜಿ ಕಮ್ಯುಟೇಶನ್, ಗಳಿಕೆ ರಜೆ ನಗದೀಕರಣಗಳ ನಿವೃತ್ತ ಆರ್ಥಿಕ ಸೌಲಭ್ಯವನ್ನು ನೀಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಜಿಲ್ಲಾದ್ಯಂತ ನಿವೃತ್ತ ನೌಕರರ ವೇದಿಕೆಯಿಂದ ಪ್ರತಿಭಟನೆ ನಡೆಯಿತು.

ಇಲ್ಲಿನ ತಾಲೂಕು ಕಚೇರಿಯ ಮುಂಭಾಗ ಸಮಾವೇಶಗೊಂಡ ನಿವೃತ ನೌಕರರು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಘೋಷಣೆ ಕೂಗಿದರು. ಬಳಿಕ ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

2022ರ, ಜುಲೈ 1 ರಿಂದ 2024ರ ಜು. 31ರ ಅವಧಿಯಲ್ಲಿ ನಿವೃತ್ತಿಯಾದ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ಲೆಕ್ಕಾಚಾರದ ಅನುಸಾರ ಡಿಸಿಆರ್‌ಜಿ ಕಮ್ಯುಟೇಶನ್, ಗಳಿಕೆ ರಜೆ ನಗದೀಕರಣಗಳ ನಿವೃತ್ತ ಆರ್ಥಿಕ ಸೌಲಭ್ಯವನ್ನು ನೀಡಬೇಕು ಎಂದು ಆಗ್ರಹಿಸಿದರು.

ನಿವೃತ್ತಿಯಾದ ನೌಕರರಿಗೆ 7ನೇ ವೇತನ ಲೆಕ್ಕಾಚಾರದ ಅನುಸಾರ ಡಿಸಿಆರ್‌ಜಿ ಕಮ್ಯುಟೇಶನ್‌ಗಳಾದ, ಗಳಿಗೆ ರಜೆ ನಗದೀಕರಣ ನಿವೃತ್ತಿ ಆರ್ಥಿಕ ಸೌಲಭ್ಯವನ್ನು ನೀಡಿದ್ದಾರೆ. ಈ ನಿಟ್ಟಿನಲ್ಲಿ ನಮಗೆ ಸುಮಾರು 12ರಿಂದ 22ಲಕ್ಷ ರೂ.ಗಳಷ್ಟು ಆರ್ಥಿಕ ನಷ್ಟವಾಗಿ ಅನ್ಯಾಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಚಾಮರಾಜನಗರ ತಾಲೂಕು ಸಂಚಾಲಕ ಮಹದೇವಯ್ಯ, ದುಂಡಮಾದಯ್ಯ, ಶ್ರೀಕಂಠಸ್ವಾಮಿ, ನಾಗಯ್ಯ, ಬಸವಯ್ಯ ಚಂದ್ರು ಇತರಿದ್ದರು.

ಹೊನಲು, ಬೆಳಕಿನ ಖೋಖೋ ಪಂದ್ಯಾವಳಿ ಯಶಸ್ವಿ

ಚಾಮರಾಜನಗರ: ಜಿಲ್ಲೆಯಲ್ಲಿಯೇ ಇದೇ ಮೊದಲ ಬಾರಿಗೆತಾಲೂಕಿನಮೆಕಟಯ್ಯನ ಛತ್ರ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ರಾಜ್ಯ ಮಟ್ಟದ ಹೊನಲು, ಬೆಳಕಿನ ಖೋಖೋ ಪಂದ್ಯಾವಳಿ ಯಶಸ್ವಿಯಾಗಿ ನಡೆಯಿತು.

ಚಾಮರಾಜನಗರ ಜಿಲ್ಲಾ ಖೋಖೋ ಸಂಸ್ಥೆಯಿಂದ ಆಯೋಜಿಸಿದ್ದ ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ 16 ತಂಡಗಳು ಪಾಲ್ಗೊಂಡಿದ್ದವು.

ಕ್ರೀಡಾ ನೈಪುಣ್ಯತೆ ಅಗತ್ಯ: ಪಂದ್ಯಾವಳಿಗೆ ಚಾಲನೆ ನೀಡಿದ ಎಂಎಸ್‌ಐಎಲ್‌ನ ಅಧ್ಯಕ್ಷರೂ ಆದ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಕ್ರೀಡೆಗಳಲ್ಲಿ ಭಾಗವಹಿಸುವವರು ಶಕ್ತಿಶಾಲಿ ಆಗುವುದರೊಂದಿಗೆ ಕ್ರೀಡಾ ನೈಪುಣ್ಯತೆ ಹೊಂದಿರಬೇಕು ಎಂದು ತಿಳಿಸಿದರು.

ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಹೆಸರು ಕೀರ್ತಿ ಸಂಪಾದಿಸಿದ್ದಾರೆ. ಜಿಲ್ಲೆಯ ವೆಂಕಟಯ್ಯನಛತ್ರ ಗ್ರಾಮದಲ್ಲಿ ಹಲವಾರು ವರ್ಷಗಳಿಂದ ಗ್ರಾಮೀಣ ಕ್ರೀಡೆಯಾದ ಖೋಖೋ ಕ್ರೀಡೆಯನ್ನು ಪ್ರದರ್ಶಿಸುತ್ತ ಬಂದಿರುವುದು ಸಂತಸದ ಸಂಗತಿಯಾಗಿದೆ ಎಂದರು.ನಂತರ ಚಾ.ನಗರ ಜಿಲ್ಲಾಖೋಖೋ ಸಂಸ್ಥೆಅಧ್ಯಕ್ಷಎಚ್‌ಬಿ.ಶಮಿತ್ ಕುಮಾರ್ ಮಾತನಾಡಿ, ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಕ್ರೀಡಾಕೂಟಗಳು ಹೆಚ್ಚಿನ ಮಟ್ಟದಲ್ಲಿ ಆಯೋಜನೆಯಾಗುತ್ತಿವೆ. ಖೋಖೋ ಕ್ರೀಡೆಯಲ್ಲಿ ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸಿದ್ದ ಕ್ರೀಡಾಪಟು ಚೈತ್ರಾಳಿಗೆ ಸರ್ಕಾರ 5ಲಕ್ಷ ರೂ. ಪುರಸ್ಕಾರ ನೀಡಿ, ಗೌರವಿಸಿದೆ. ಅವರಿಗೆ 50 ಲಕ್ಷ ರೂ. ಪ್ರೋತ್ಸಾಹ ಬಹುಮಾನ ನೀಡಬೇಕಿತ್ತು ಎಂದರು.





ಖೋಖೋ ಪಂದ್ಯಾವಳಿ ಸಮಾರಂಭ ಉದ್ಘಾಟಿಸಿದ ಶಾಸಕ ಸಿ.ಪುಟ್ಟರಂಗಶೆಟ್ಟಿ

ಭಗವಾನ್ ಸೂರ್ಯಗೆ ಕೃತಕೃತ್ಯರಾಗೋಣ...

■ನಂ.ಶ್ರೀಕಂಠಕುಮಾರ್
ಮೊ.9481067333

5-2-2025ರಂದು ರಥಸಪ್ತಮಿ ಹಬ್ಬದ ಆಚರಣೆಯ ಅಂಗವಾಗಿ ವಿಶೇಷ ಲೇಖನ





ಪ್ರಾಚೀನ ನಾಗರಿಕತೆಯಲ್ಲಿ ಕಂಡು ಬರುವ ರಥಗಳ ಕಲ್ಪನೆ ಮತ್ತು ಸ್ವರೂಪಗಳು ಮನುಕುಲದ ಇತಿಹಾಸದಲ್ಲಿ ಚಕ್ರದ ಆವಿಷ್ಕಾರದ ನಂತರ ಬಳಕೆಯಾಗುತ್ತಾ ಬಂದ ವಾಹನ ರಥ. ಇದರಲ್ಲಿ ಕುಳಿತು ಆನಂದಪಡುವುದರಿಂದ ರಥ ಎಂದು ಹೆಸರಿಸಲಾಗಿದೆ. ರಥ ಎಂದರೆ ಸಾಮಾನ್ಯವಾಗಿ ಎರಡು ಚಕ್ರಗಳುಳ್ಳ, ಕುದುರೆಗಳಿಂದ ಎಳೆಯುವ ಲಘುವಾಹನವೆಂದೇ ತಿಳಿಯಲಾಗಿದೆ. ಮೊಟ್ಟಮೊದಲು ಯುದ್ಧದಲ್ಲಿ ಕತ್ತೆಗಳಿಂದ ಎಳೆಯುತ್ತಿದ್ದ ನಾಲ್ಕು ಚಕ್ರಗಳ ಭಾರಿ ಗಾತ್ರದ ವಾಹನದಂತೆ ಇರುತ್ತಿತ್ತು ಎಂಬುದಾಗಿದೆ. ಕಾಲಾನಂತರ ಕುದುರೆಗಳ ಬಳಕೆ ಪ್ರಾರಂಭವಾಯಿತು. ಮರದಿಂದ ತಯಾರಾದ ತುಂಬುಚಕ್ರದ ಹಾಗೂ ಈ ಚಕ್ರಕ್ಕೆ ತಾಮ್ರದ ಪಟ್ಟಿಕೆಗಳನ್ನು ಹೊದಿಸಲಾಗುತ್ತಿತ್ತು. ಸಾರಥಿ ಮತ್ತು ರಥಿಕರುಗಳಿಗಾಗಿ ಸ್ಥಳದೊಂದಿಗೆ ಈಟಿ, ಬರ್ಜಿ, ಇತರೆ ಆಯುಧಗಳನ್ನು ಇಟ್ಟುಕೊಳ್ಳಲು ಸ್ಥಳಾವಕಾಶವು ರಥದಲ್ಲಿ ಇರುತ್ತಿತ್ತು. ಇದೇ ಮಾದರಿಯ ರಥಗಳು ಕೆಲವು ಮಧ್ಯ ಪ್ರಾಚ್ಯದೇಶಗಳಲ್ಲಿಯೂ ಸಹ ಬಳಕೆಯಲ್ಲಿದ್ದವು ಎನ್ನಲಾಗಿದೆ. ಭಾರತೀಯ ಪರಂಪರೆಯಲ್ಲಿ ರಥಗಳು ವೇದದ ಕಾಲದಲ್ಲಿ ಋಗ್ವೇದ ಆರನೇಯ ಮಂಡಲದ ಕೊನೆಯ ಸೂಕ್ತಕಗಳಲ್ಲಿ ಕಂಡು ಬಂದಿರುತ್ತದೆ. ರಥಗಳು ದೇವಾಲಯಗಳ ಪೂಜಾವಿಧಿಗಳಲ್ಲಿ ಅವಿಭಾಜ್ಯ ಅಂಗಗಳೆನಿಸಿವೆ. ಭಾರತೀಯ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಕೃತಿಗಳಲ್ಲಿಯೂ ರಥಗಳ ಪ್ರಸ್ತಾಪವಂತು ತೀರ ಸಾಮಾನ್ಯವಾಗಿದೆ. ರಥ ನಡೆಸುವ ಸಾರಥ್ಯದ ಕೆಲಸ ಸುಲಭದ್ದೇನೂ ಆಗಿರಲಿಲ್ಲವೆಂಬುದಾಗಿದೆ. ಹತ್ತೂ ದಿಕ್ಕುಗಳಲ್ಲಿಯೂ ರಥ ನಡೆಸುವ ಸಾಮರ್ಥ್ಯ ಹೊಂದಿದ್ದ ಅಯೋಧ್ಯೆಯ ಮಹಾರಾಜನಿಗೆ ದಶರಥನೆಂದು ಹೆಸರು ಬಂದಿತೆಂದು ರಾಮಾಯಣ ಮಹಾಕಾವ್ಯದಿಂದ ತಿಳಿದು ಬರುತ್ತದೆ. ಶ್ರೀಕೃಷ್ಣ, ಶಲ್ಯ ಇವರೆಲ್ಲ ಮಹಾರಥಿಗಳಾಗಿದ್ದರೆಂದು ಮಹಾಭಾರತದಲ್ಲಿ ಉಲ್ಲೇಖಿಸಲಾಗಿದೆ. ದೇವೇಂದ್ರನ ಸಾರಥಿ ಮಾತಲಿ, ಭಗವಾನ್ ಸೂರ್ಯನಾರಾಯಣನ ಸಾರಥಿ ಅರುಣ ಪುರಾಣ ಪ್ರಸಿದ್ಧರು. ಲೌಕಿಕ ಸಂದರ್ಭದಲ್ಲಿ ಬೇರೆ ಬೇರೆ ಉದ್ದೇಶಗಳಿಗೆ ಬಳಕೆಯಾಗುವ ರಥಗಳಿಗೆ ಬೇರೆ ಬೇರೆ ಹೆಸರುಗಳಿವೆ. ಯುದ್ಧಕ್ಕೆ ಬಳಸುವ ರಥಗಳಿಗೆ ಚಕ್ರೀಣಿ, ಶತಾಂಗ, ಕ್ರೀಡಾ ಉದ್ದೇಶಗಳಿಗೆ ಬಳಸುವ ರಥಗಳಿಗೆ ಸ್ಯಂದನವೆಂದು, ಪುಷ್ಯರಥಗಳೆಂದು, ಯಾತ್ರೆಗಳಿಗೆ ಬಳಸುವ ರಥಕ್ಕೆ ಕರ್ಣೀ, ಪ್ರವಹಣವೆಂದು, ದೇವತೆಗಳ ಉತ್ಸವಕ್ಕೆ ಬಳಸುವ ರಥಗಳಿಗೆ ಮರುದ್ರಥಗಳೆಂದು ಹೆಸರಿಸಲಾಗಿದೆ.

ರಥಗಳಿಗೆ ಸಂಬಂಧಿಸಿದಂತೆ ಕಾವ್ಯಾದಿಗಳಲ್ಲಿ ಮಾತ್ರವಲ್ಲದೇ ಕೆಲವು ಉತ್ಖನನಗಳಲ್ಲಿಯೂ ಆಧಾರಗಳು ದೊರಕಿವೆ. ಪುರಿಯ ಸ್ವಾಮಿಜಗನ್ನಾಥ ದೇವಾಲಯದಲ್ಲಿ ಆಚರಿಸುವ ರಥೋತ್ಸವವು ಜಗತ್ಪ್ರಸಿದ್ಧವಾದುದು. 12ನೇ ಶತಮಾನದ ಚೋಳರ ಶಿಲ್ಪಕಲೆಗೆ ಉತ್ತಮ ನಿದರ್ಶನವಾದ ತಂಜಾವೂರಿನ ಐರಾವತೇಶ್ವರ ಗುಡಿಯ ಅಲಂಕಾರ ಮಂಟಪ ಒಂದು ರಥದ ಆಕಾರದಲ್ಲಿಯೇ ಇದೆ. ಎಂಟು ಗ್ರಹಗಳಿಂದ ಸುತ್ತುವರಿದ ಕಮಲದ ಹೂವಿನ ಮುಖವುಳ್ಳ ಭಗವಾನ್ ಸೂರ್ಯನಾರಾಯಣ ದೇವರು ಏಳು ಕುದುರೆಗಳು ಎಳೆಯುತ್ತಿರುವ ರಥದಲ್ಲಿ ಕುಳಿತಿರುವುದನ್ನು ತಿರುಚನಾಪಳ್ಳಿಯ ಗಂಗೈಕೊಂಡ ಚೋಳಪುರದ ಬೃಹದೇಶ್ವರ ದೇವಾಲಯದಲ್ಲಿ ಕೆತ್ತಿರುವುದು ಕಾಣಬಹುದಾಗಿದೆ. ಭಾರತದ ಒರಿಸ್ಸಾ ರಾಜ್ಯದ ಪುರಿ ಜಿಲ್ಲೆಯಲ್ಲಿರುವ ಪ್ರಮುಖ ಯಾತ್ರಾ ಕ್ಷೇತ್ರ ಕೋಣಾರ್ಕ. ಇಲ್ಲಿರುವ ಭಗವಾನ್ ಸೂರ್ಯನಾರಾಯಣ ದೇವಾಲಯವು ಒಂದು ಅದ್ಭುತ ಕಲಾಕೃತಿ. ವಿಶ್ವದ ಅನೇಕ ಕಲಾವಿಮರ್ಶಕರು ಈ ದೇವಾಲಯದ ಶಿಲ್ಪಕಲೆಯನ್ನು ಪ್ರಶಂಸಿಸಿದ್ದಾರೆ. ಈ ದೇವಾಲಯವನ್ನು ಗಂಗವಂಶದ ಒಂದನೇಯ ರಾಜ ಲಾಂಗುಲ ನರಸಿಂಹದೇವನು ಸುಮಾರು 1238-1284ರ ಕಾಲದಲ್ಲಿ ನಿರ್ಮಿಸಿದನು ಎನ್ನಲಾಗಿದೆ. ವಿಷ್ಣು ಮಹಾರಾಣ ಎಂಬ ಶಿಲ್ಪಿ ಈ ದೇವಾಲಯದ ಸ್ವರೂಪವನ್ನು ಮನಸ್ಸಿನಲ್ಲಿ ಚಿತ್ರಿಸಿಕೊಂಡು ಕಟ್ಟಿದನೆಂಬುದಾಗಿ ದಂತಕಥೆ ಇದೆ. ಏಳು ಮಹಾಬಲಶಾಲಿ ಕುದುರೆಗಳು ಎಳೆಯುತ್ತಿರುವ ಹಾಗೆ ಪೂರ್ವಾಭಿಮುಖವಾಗಿ ಈ ದೇವಾಲಯವನ್ನು ರಚಿಸಲಾಗಿದೆ. ಸುಮಾರು 1200ಕ್ಕೂ ಮೀರಿ ಶಿಲ್ಪಿಗಳು 12 ವರ್ಷಗಳ ಕಾಲ ಅಂದಾಜು 228 ಅಡಿ ಎತ್ತರದ ಈ ದೇವಾಲಯದ ಸುತ್ತ 24 ಚಕ್ರಗಳನ್ನು ನಿರ್ಮಿಸಿದ್ದು ಇದು 24 ಗಂಟೆಗಳ ಸೂಚಕವಾಗಿದೆ. ದೇವಾಲಯವು ಕಳಿಂಗ ರೇಖಾನಾಗರ ಪ್ರಾಸಾದಶೈಲಿಯದಾಗಿದ್ದು ದೇವಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಬಗೆ ಬಗೆಯ ರೇಖಾಚಿತ್ರಗಳಿವೆ. ವಿವಿಧ ಭಾವ ಭಂಗಿಗಳಲ್ಲಿರುವ, ನಾನಾ ಕಾರ್ಯ ಮಗ್ನರಾಗಿರುವ ಜನರು, ಅರಮನೆಯ, ಜನಸಾಮಾನ್ಯರ ನಿತ್ಯ ಜೀವನದ ದೃಶ್ಯಗಳು, ನಾಟ್ಯಗಾರರು, ಸಂಗೀತಗಾರರು, ನಾಗ-ನಾಗಿಣಿಯರು, ದೇವತೆಯರು, ಆನೆ, ಕುದುರೆ, ಸಿಂಹ, ಮೊದಲಾದ ಪ್ರಾಣಿಗಳು, ಬೇಟೆ, ಆನೆ ಹಿಡಿಯುವುದು, ವರ್ತಕರ ಬಿಡಾರ ಹೀಗೆ ಅನೇಕ ದೃಶ್ಯಗಳನ್ನು ಕೆತ್ತಲಾಗಿದೆ. ಮಿತಾಲಂಕಾರ ಮಾನವರ, ಮುಖ್ಯವಾಗಿ ಸ್ತ್ರೀಯರ ಹಾವಭಾವಗಳು, ಅಂಗಸೌಷ್ಟವ ಇವೆಲ್ಲವನ್ನು ಎತ್ತಿ ತೋರಿಸುವ ಅತೀ ಸೂಕ್ಷ್ಮ ಕುಸುರಿ ಕೆತ್ತನೆ ಆಕರ್ಷಕವಾಗಿದೆ. ಭಗವಾನ್ ಸೂರ್ಯನಾರಾಯಣ ದೇವರ ಮೂರ್ತಿಯನ್ನು ದಕ್ಷಿಣ ದಿಕ್ಕಿನಲ್ಲಿ ಉದಯಿಸುತ್ತಿರುವ ಸೂರ್ಯಮಿತ್ರ, ಪಶ್ಚಿಮ ದಿಕ್ಕಿನಲ್ಲಿ ಪುನಸನ ಸೂರ್ಯ, ಉತ್ತರ ದಿಕ್ಕಿನಲ್ಲಿ ಹರಿತಸ್ವ ಸೂರ್ಯಮೂರ್ತಿಗಳನ್ನು ದೇವಾಲಯದ ಮೇಲ್ಭಾಗದಲ್ಲಿ ಕಾಣಬಹುದು. ದೇವಾಲಯದ ಮುಂದೆ ಎರಡು ಬೃಹತ್ ಸಿಂಹಗಳು ಆನೆಯನ್ನು ತನ್ನ ಕಾಲಡಿಗೆ ಹಾಕಿಕೊಂಡಂತಹ ಬೃಹದಾಕಾರದ ಕಲಾಕೃತಿಯನ್ನು ಕಾಣಬಹುದು.


ಸನಾತನ ಸಂಸ್ಕೃತಿಯಲ್ಲಿ ಆಚರಿಸುವ ಹಬ್ಬ-ಹರಿದಿನಗಳಲ್ಲಿ ಅತಿಮುಖ್ಯವಾದ ಒಂದು ಹಬ್ಬ ರಥಸಪ್ತಮಿ. ಸೂರ್ಯನ ಆರಾಧನೆ ಭಾರತೀಯ ಸಂಸ್ಕೃತಿಯ ಭಾಗ. ಪ್ರತ್ಯಕ್ಷ ದೇವತೆ ಎನ್ನಲಾಗುವ ಸೂರ್ಯ ಶಕ್ತಿಯ ಕೇಂದ್ರ. ಋಗ್ವೇದದಲ್ಲಿ 'ಆಪ್ರಾ ದ್ಯಾವಾ ಪೃಥೀವಿ ಅಂತರಿಕ್ಷಃ ಸೂರ್ಯ ಆತ್ಮ ಜಗತಸ್ಥಶ್ಚ' ಎಂದರೆ ವಿಶ್ವದ ಸಕಲ ಚರಾಚರಗಳ ಆತ್ಮ ಸೂರ್ಯನೆಂದು ಸ್ತುತಿಸಲಾಗಿದೆ. ಕೇವಲ ಭಾರತ ಮಾತ್ರವೇ ಅಲ್ಲದೇ ಬಹುತೇಕ ವಿಶ್ವದ ಎಲ್ಲಾ ನಾಗರೀಕತೆಗಳಲ್ಲಿ ಸೂರ್ಯನಿಗೆ ಮಹತ್ವದ ಸ್ಥಾನವನ್ನು ನೀಡಲಾಗಿದೆ. ಆಧ್ಯಾತ್ಮಿಕ ಹಾಗೂ ಲೌಕಿಕ ಉನ್ನತಿಗಳೆರಡಕ್ಕೂ ಸೂರ್ಯ ಕಾರಣ. ಸೂರ್ಯನ ಚಲನೆಯನ್ನಾಧರಿಸಿ ಹಿಂದೂ ಸಂಸ್ಕೃತಿಯಲ್ಲಿ ಉತ್ತರಾಯಣ ಹಾಗೂ ದಕ್ಷಿಣಾಯಣವೆಂದು ಕಾಲಗಣನೆ ಮಾಡಲಾಗಿದೆ. ಮಾರ್ಗಶಿರ ಮಾಸದ ಶುಕ್ಲ ಸಪ್ತಮೀಯ ದಿವಸ ಸೂರ್ಯನು ಸಿಂಹರಾಶಿಯಿಂದ ಮಕರರಾಶಿಯನ್ನು ಪ್ರವೇಶಿಸುವ ಸುದಿನವನ್ನು ರಥಸಪ್ತಮಿ ಎಂದು ಆಚರಿಸಲಾಗುತ್ತಿದೆ. ಸಪ್ತಾಶ್ವಗಳಿಂದ ಮುನ್ನಡೆಸಲ್ಪಡುವ ರಥಾರೂಢನಾಗಿ ತೇಜೋಮಯನಾಗಿ ಕಂಗೊಳಿಸುವ ಸೂರ್ಯದೇವನ ಪರಿಕಲ್ಪನೆಯೇ ಅತ್ಯಂತ ಮನೋಹರವಾಗಿದೆ. ಎಲ್ಲಾ ವರ್ಗದವರು ಆಚರಿಸುವುದೇ ಈ ಹಬ್ಬದ ವಿಶೇಷವಾಗಿದೆ. ಪಂಚಾಯತನ ಎಂದು ಕರೆಯಲ್ಪಡುವ ಒಂದು ಪೂಜಾ ಕಲ್ಪದಲ್ಲಿಯೂ ಭಗವಾನ್ ಸೂರ್ಯದೇವರು ಆರಾಧ್ಯದೇವತೆಗಳಲ್ಲಿ ಒಬ್ಬರಾಗಿ ಪರಿಗಣಿಸಲ್ಪಟ್ಟಿದ್ದಾರೆ. ಇಡೀ ಮಾಘಮಾಸವೇ ಪ್ರಾತಃಕಾಲದ ಸ್ನಾನಕ್ಕೆ ಪ್ರಶಸ್ತ. ಅರುಣೋದಯ ಸಮಯದಲ್ಲಿ ಸ್ನಾನಾದಿಗಳನ್ನು ಮಾಡಿ ವ್ರತವನ್ನು ಆಚರಿಸಿದರೆ ಅಕ್ಷಯ ಫಲ ಸಿದ್ಧಿಯಾಗುತ್ತದೆ. ಎಂಬುದು ಆಸ್ತಿಕರ ನಂಬಿಕೆ. ಇದು ಎಲ್ಲಾ ಸಂಪ್ರದಾಯಗಳಲ್ಲೂ ರೂಢಿಯಲ್ಲಿದೆ. ಸಮುದ್ರದಲ್ಲಾಗಲಿ, ಪುಷ್ಕರಾದಿ ಪುಣ್ಯಸರೋವರಗಳಲ್ಲಾಗಲಿ, ಗಂಗಾದಿ ಮಹಾನದಿಗಳಲ್ಲಾಗಲೀ ಅರುಣೋದಯದಲ್ಲಿ ಅವಗಾಹನ ಸ್ನಾನವನ್ನು ಮಾಡುವುದು ತುಂಬಾ ಪ್ರಶಸ್ತ. ಭಗವಾನ್ ಸೂರ್ಯದೇವರನ್ನು ಆರಾಧಿಸುವುದು, ಸುವರ್ಣದ ಸೂರ್ಯದೇವರನ್ನು ಅಶ್ವಸಮೇತವಾದ ರಥದಲ್ಲಿರಿಸಿ ಅಂದು ದಾನ ಮಾಡುವವನು ಅಖಂಡ ಭೂಮಂಡಲದ ಚಕ್ರಾಧಿಪತ್ಯವನ್ನು ಪಡೆಯುತ್ತಾನೆ ಎಂಬುದಾಗಿ ಪ್ರತೀತಿ. ಭಗವಾನ್ ಸೂರ್ಯನಾರಾಯಣ ದೇವರ ಏಳು ಅಶ್ವಗಳು, ಏಳು ಲೋಕಗಳು, ಭೂಗೋಳದಲ್ಲಿರುವ ಏಳು ದ್ವೀಪಗಳು, ಏಳು ಸಾಗರಗಳು, ಏಳು ಸಪ್ತಾಶ್ವಗಳಾದ ಗಾಯತ್ರಿ, ವೃಹತೀ, ಉಷ್ಣಿಕ, ಜಗತೀ, ತ್ರಿಷ್ಟುಪ್, ಅನುಷ್ಟುಪ್ ಹಾಗೂ ಪಂಕ್ತಿ ಹೆಸರಿನ ಏಕಚಕ್ರವುಳ್ಳ ಸೂರ್ಯನ ರಥವನ್ನು 'ಸಪ್ತಯಜ್ಞಂತಿ ರಥಮೇಕ ಚಕ್ರಮೇಕೋ ಅಶ್ವರೋಹತಿ ಸಪ್ತನಾಮಾ' ದೇವರೇ ಎಂಬುದಾಗಿ ಋಗ್ವೇದದಲ್ಲಿನ ಶ್ಲೋಕ ಪಠಿಸುತ್ತಾ ಸಪ್ತಲೋಕಗಳಿಗೂ ಪ್ರದೀಪವಾಗಿರುವ ಸ್ವಾಮಿಯೇ, ಸಪ್ತಮೀ ಸಹಿತನಾಗಿ ಈ ಅರ್ಘ್ಯವನ್ನು ಸ್ವೀಕರಿಸು ದಿವಾಕರನೇ ಎಂಬುದಾಗಿ ಪ್ರಾರ್ಥಿಸುತ್ತಾ ಏಳು ಎಕ್ಕದ ಎಲೆಗಳು, ಎಳಚಿಯ ಎಲೆಗಳು, ದೂರ್ವೆ, ಅಕ್ಷತೆ, ಚಂದನ ಇವುಗಳನ್ನು ಸೇರಿಸಿಕೊಂಡು ಸ್ನಾನ ಮಾಡುವಾಗ ಭಗವಾನ್ ಸೂರ್ಯನಾರಾಯಣನಿಗೆ ಅಷ್ಟಾಂಗ ವಿಧಿಯಿಂದ ಅರ್ಘ್ಯವನ್ನು ಸಮರ್ಪಿಸಿ ರಥಸಪ್ತಮಿ ಪರ್ವವನ್ನು ಸ್ತುತಿಸಬೇಕು.

ಭಗವಾನ್ ಸೂರ್ಯನಾರಾಯಣನಿಂದ ಭೂಮಂಡಲಕ್ಕೆ ಆಗುತ್ತಿರುವ ಲಾಭ' ವರ್ಣನಾತೀತವಾದುದು. ಸೂರ್ಯನಿಲ್ಲದೇ ಯಾವ ಜೀವಿಗೂ ಬೆಳಕಿಲ್ಲ, ಚೈತನ್ಯವಿಲ್ಲ, ಆಹಾರವಿಲ್ಲ. ಗಿಡಮರಗಳು ತಮ್ಮ ಆಹಾರವನ್ನು ತಯಾರಿಸಿಕೊಳ್ಳುವುದು ಸೂರ್ಯನ ಪ್ರಕಾಶದ ಸಹಾಯದಿಂದಲೇ ಎಂಬುದು ಎಲ್ಲರಿಗೂ ವೇದ್ಯವಾಗಿದೆ. ಇಂತಹ ಜೀವನಾಧಾರವು, ಆಶ್ಚರ್ಯದ ಅಗರವೂ ಆಗಿರುವ ಸೂರ್ಯನನ್ನು ದೇವರೆಂದು ಭಾವಿಸಿ ನಮ್ಮ ಪೂರ್ವಜರಾದ ಋಷಿಮುನಿಗಳು, ಮಹರ್ಷಿಗಳು ಸೂರ್ಯಾರಾಧನೆಯನ್ನು ಪ್ರಾರಂಭಿಸಿದರು. ಭಗವಾನ್ ಸೂರ್ಯದೇವನು ಸ್ವಯಂಪ್ರಕಾಶನಾಗಿ ತನ್ನ ತೇಜಸ್ಸಿನಿಂದ ಏಳು ಲೋಕಗಳನ್ನು ಬೆಳಗುತ್ತಿರುವವನನ್ನು ರಥಸಪ್ತಮಿ ಆಚರಣೆಯಿಂದ ಪೂಜಿಸಿ ಕೃತಕೃತ್ಯರಾಗೋಣ.

ಮಕ್ಕಳ ಚಿತ್ರಕಥೆ

'ಹೀಗೊಂದು ಅಪರೂಪದ ಪ್ರಸಂಗ'


■ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




1. ಜೀವನದಲ್ಲಿ ಮುಂದುವರೆಯಲು ಎರಡು ಸಂಗತಿಗಳು ಬಹು ಮುಖ್ಯ ಪಾತ್ರವಹಿಸುತ್ತವೆ. ಮೊದಲನೆಯದು ಉತ್ತಮ ವ್ಯಕ್ತಿಗಳೊಂದಿಗೆ ಸಾಂಗತ್ಯ ಮತ್ತು ಕಠಿಣ ಪರಿಶ್ರಮ. ಈ ಬಗೆಯ ಒಳ್ಳೆಯ ವ್ಯಕ್ತಿಗಳ ಒಡನಾಟದಿಂದಾಗುವ ಪ್ರಯೋಜನಕ್ಕೆ ಒಂದು ಉದಾಹರಣೆ ಈ ನೈಜ ಪ್ರಸಂಗ. ಐನ್‌ಸ್ಟೈನ್‌ನೊಬ್ಬ ವಿಶ್ವ ವಿಖ್ಯಾತ ವಿಜ್ಞಾನಿ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆತನಿಗೊಬ್ಬ ಅಚ್ಚುಮೆಚ್ಚಿನ ಡ್ರೈವರ್ ಇದ್ದ.




2. ಅತನ ಹೆಸರು "ಹ್ಯಾರಿ". ಬಹಳಷ್ಟು ವರ್ಷಗಳಿಂದ ಡ್ರೈವರ್ ಆಗಿದ್ದ ಆತ, ಐನ್‌ಸ್ಟೈನ್ ಹೋದೆಡೆಯಲ್ಲೆಲ್ಲಾ ಜೊತೆಯಲ್ಲೇ ಇರುತ್ತಿದ್ದ. ಅಂದರೆ ಅದು ಉಪನ್ಯಾಸದ ಕಾರ್ಯಕ್ರಮವಿರಲಿ, ಸ್ಕಾಲರ್‌ಶಿಪ್ ಕಾರ್ಯಕ್ರಮವಿರಲಿ ಇನ್ನಿತರ ಯಾವುದೇ ಕಾರ್ಯಕ್ರಮಗಳಿರಲಿ, ಅಲ್ಲಿನ ಸಭಾಂಗಣದ ಒಂದು ಮೂಲೆಯಲ್ಲಿ ನಿಂತು ತದೇಕಚಿತ್ತದಿಂದ ಅವರ ಮಾತುಗಳನ್ನು ಸಂಪೂರ್ಣವಾಗಿ ಆಲಿಸುತ್ತಿದ್ದ.




3. ಹೀಗಾಗಿ ಅವನಿಗೆ ಐನ್‌ಸ್ಟೈನ್ ನೀಡುತ್ತಿದ್ದ ಭಾಷಣ ಕಂಠಪಾಠವಾದಂತೆ ಅವರು ಉಪಯೋಗಿಸುವ ಪದಗಳು, ಉಚ್ಚರಿಸುವ ಬಗೆ, ಹಾವ-ಭಾವಗಳು ಮನಸ್ಸನ್ನು ಹೊಕ್ಕಿ ನಿಂತುಬಿಟ್ಟಿದ್ದವು. ಒಂದು ದಿನ ಡ್ರೈವರ್ ಹ್ಯಾರಿ ಐನ್‌ಸ್ಟೈನ್ ರವರಿಗೆ, "ಬಹಳ ಕಾಲದಿಂದಲೂ ನನಗೆ ನಿಮ್ಮ ಪ್ರತಿಯೊಂದು ಭಾಷಣಗಳನ್ನು ಕೇಳುತ್ತಾ, ಕೇಳುತ್ತಾ ನಾನೂ ಕೂಡ ನಿಮ್ಮಂತೆಯೇ ವೇದಿಕೆಯ ಮೇಲೆ ನಿಂತು ಭಾಷಣ ಮಾಡಬಲ್ಲೆ...!' ಎಂದ.



4. ಆಗ ಆಶ್ಚರ್ಯಗೊಂಡ ಐನ್‌ಸ್ಟೈನ್‌ರು "ಸರಿ, ಹಾಗಾದರೆ ನಾನು ಸೂಚಿಸಿದ ಸಮಯದಲ್ಲಿ ನೀನು ನನ್ನ ಸ್ಥಳದಲ್ಲಿ ನಿಂತು ವೇದಿಕೆಯಲ್ಲಿ ಭಾಷಣ ನೀಡು, ನಾನು ನಿನ್ನ ಸ್ಥಳದಲ್ಲಿ ನಿಲ್ಲುವೆ" ಎಂದರು ನಗುನಗುತ್ತಾ. ಕಡೆಗೂ ಆ ಘಳಿಗೆ ಬಂದೇಬಿಟ್ಟಿತು. ಒಮ್ಮೆ ಐನ್‌ಸ್ಟೈನ್‌ರವರಿಗೆ ಬ್ರಿಟಿಷ್ ಯುನಿವರ್ಸಿಟಿಯ ಕಾರ್ಯಕ್ರಮವೊಂದರಲ್ಲಿ ಉಪನ್ಯಾಸ ನೀಡಲು ಆಮಂತ್ರಿಸಲಾಗಿತ್ತು. ಅಲ್ಲಿ ಐನ್‌ಸ್ಟೈನ್‌ರವರನ್ನು ಗುರುತಿಸಬಲ್ಲವರು ಯಾರೂ ಇರಲಿಲ್ಲ. ಜೊತೆಗೆ ಅವರ ಆರೋಗ್ಯವೂ ಸ್ವಲ್ಪ ಹದಗೆಟ್ಟಿತ್ತು.




5. ಆದ್ದರಿಂದ ಇದೇ ಸರಿಯಾದ ಸಮಯವೆಂದು ತೀರ್ಮಾನಿಸಿದ ಐನ್‌ಸ್ಟೈನ್, ಡ್ರೈವರ್ ಹ್ಯಾರಿಗೆ "ಇಂದು ನೀನು ವೇದಿಕೆಯನ್ನೇರಿ ನನ್ನ ಜಾಗದಲ್ಲಿ ನಿಂತು ಭಾಷಣ ನೀಡು. ನಾನು, ನಿನ್ನ ಜಾಗದಲ್ಲಿ ನಿಲ್ಲುವೆ" ಎಂದರು. ಅದಕ್ಕೊಪ್ಪಿದ ಹ್ಯಾರಿ ಅಂದು ನೆರೆದಿದ್ದ ಸಭಿಕರೆದುರು ನಿಂತು ಐನ್‌ಸ್ಟೈನ್‌ರ ಮಾದರಿಯಲ್ಲೇ ಅತ್ಯುತ್ತಮವಾಗಿ ಉಪನ್ಯಾಸ ನೀಡಿಯೇಬಿಟ್ಟ. ನಂತರ ಪ್ರಶ್ನೋತ್ತರ ಕಾರ್ಯಕ್ರಮ ಪ್ರಾರಂಭವಾಯಿತು.



6. ಐನ್‌ಸ್ಟೈನ್‌ರವರು ಈಗ ಇವನ ನಿಜ ಬಣ್ಣ ಬಯಲಾಗಬಹುದು ಎಂದುಕೊಂಡರು. ಅದಕ್ಕೆ ತಕ್ಕಂತೆ ಸಭಿಕರಲ್ಲೊಬ್ಬ ಎದ್ದು ನಿಂತು ಹ್ಯಾರಿಗೆ (ಐನ್‌ಸ್ಟೈನ್ ಸ್ಥಳದಲ್ಲಿದ್ದ) ಒಂದು ಅತ್ಯಂತ ಕಠಿಣವಾದ ಪ್ರಶ್ನೆಯೊಂದನ್ನ ಕೇಳಿದ. ಇದರಿಂದ ಹ್ಯಾರಿ, ಸ್ವಲ್ಪ ಗಡಿಬಿಡಿಗೊಂಡರೂ ತನ್ನ ಬುದ್ಧಿ-ಚತುರತೆಯಿಂದ ತಕ್ಷಣವೇ ಸಾವರಿಸಿಕೊಂಡು "ಇಷ್ಟು ಸುಲಭವಾದ ಪ್ರಶ್ನೆಗೆ ಉತ್ತರ ಕೇಳುತ್ತಿರುವೆಯಲ್ಲ, ನಿನ್ನ ಪ್ರಶ್ನೆಗೆ ನನ್ನ ಡ್ರೈವರ್ ಕೂಡ ಉತ್ತರಿಸಬಲ್ಲ..!" ಎನ್ನುತ್ತಾ ಐನ್‌ಸ್ಟೈನ್‌ರು ನಿಂತಿದ್ದ ಕಡೆಗೆ ಕೈ ತೋರಿಸಿಬಿಟ್ಟ. ಡ್ರೈವರ್ ವೇಷಧಾರಿಯಾಗಿದ್ದ ಐನ್‌ಸ್ಟೈನ್ ಆ ಪ್ರಶ್ನೆಗೆ ಸಮರ್ಪಕವಾಗಿ ಉತ್ತರ ನೀಡಿದರು. ಇದರಿಂದ ರೋಮಾಂಚನಗೊಂಡ ಸಭಿಕರು ಕಿವಿಗಡಚಿಕ್ಕುವಂತೆ ಕರತಾಡನ ನೀಡಿದರು.

ವಾರಭವಿಷ್ಯ



03.02.2025 ರಿಂದ 08.02.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಕರ, ಚಂದ್ರ-ಮೀನ, ಮೇಷ, ವೃಷಭ, ಮಿಥುನ, ಕುಜ-ಮಿಥುನ, ಬುಧ-ಮಕರ, ಗುರು-ವೃಷಭ, ಶುಕ್ರ-ಮೀನ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಈ ವಾರದಲ್ಲಿ ಹೊಸ ಅವಕಾಶಗಳು ದೊರೆತು ಜೀವನ ಸಮೃದ್ಧಿಯಾಗಲಿದೆ. ಉದ್ಯೋಗದಲ್ಲಿ ಗೌರವ ಹೆಚ್ಚುವುದು. ಕುಟುಂಬದಲ್ಲಿ ಸಂತೋಷಮಯ ವಾತಾವರಣ ಇರುವುದು. ಪ್ರಭಾವೀ ವ್ಯಕ್ತಿಗಳ ಪರಿಚಯ, ಸಹವಾಸ ನಿಮ್ಮ ಅಭಿವೃದ್ಧಿಗೆ ಪೂರಕವಾಗುವುದು. ದಾಂಪತ್ಯದಲ್ಲಿ ಉಂಟಾಗಿದ್ದ ಭಿನ್ನಾಭಿಪ್ರಾಯಗಳು ಕೊನೆಗೊಳ್ಳುವುದು. ಮಕ್ಕಳ ಸಾಧನೆಯಿಂದ ಹೆಮ್ಮೆಪಡುವಿರಿ. ವಾತರೋಗ ಕಾಡುವುದು.
ಶ್ರೀ ನರಸಿಂಹಸ್ವಾಮಿ ಪೂಜೆ. ಶುಭ ಸಂಖ್ಯೆ-4

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ವಾರದ ಪೂರ್ವಾರ್ಧಕ್ಕೆ ಆಪ್ತರ ಸಲಹೆಯಿಂದ ಪ್ರಯೋಜನ, ಕುಟುಂಬದಲ್ಲಿ ನೆಮ್ಮದಿ. ನನೆಗುದಿಗೆ ಬಿದ್ದಿದ್ದ ಕೆಲಸಗಳಲ್ಲಿ ಪ್ರಗತಿ ಉಂಟಾಗಿ ಜಯಶೀಲರಾಗುವಿರಿ. ಶತ್ರುಗಳು ಮಿತ್ರರಾಗುವರು. ಚಂದ್ರ-ಗುರು ಸಂಯೋಗದಿಂದ ಆರ್ಥಿಕ ಬಿಕ್ಕಟ್ಟುಗಳು ನಿವಾರಣೆ ಆಗುವುದು. ವಾರದ ಉತ್ತರಾರ್ಧಕ್ಕೆ ಕೋಪದಿಂದ ಕಾರ್ಯಗೇಡು. ಮರಳು ಮಾಡುವ ಜನರಿಂದ ವಂಚನೆಯಾಗುವ ಸಾಧ್ಯತೆ ಇರುತ್ತದೆ.
ಶ್ರೀ ಸಪ್ತಮಾತೃಕಾದೇವಿ ದರ್ಶನ. ಶುಭ ಸಂಖ್ಯೆ-3

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಈ ವಾರ ಪೂರ್ತಿ ನಿಮಗೆ ಕೈ ಹಿಡಿಯುವ ಗ್ರಹ ಚಂದ್ರ. ಉದ್ಯೋಗದಲ್ಲಿ ಅನುಕೂಲ. ಆರೋಗ್ಯದಲ್ಲಿ ಚೇತರಿಕೆ. ಮಕ್ಕಳ ಜೀವನದಲ್ಲಿ ಬದಲಾವಣೆ. ಸ್ಥಿರಾಸ್ತಿ ಮಾರಾಟದ ಮಾತುಕತೆಗಳು ಸರಿದಾರಿಯಲ್ಲಿ ಸಾಗುವುದು. ಆಕಸ್ಮಿಕ ಧನಾಗಮವೂ ಉಂಟು. ಆಹಾರದಲ್ಲಿ ವ್ಯತ್ಯಾಸದಿಂದ ಆರೋಗ್ಯ ಕೆಡುವುದು. ಸರ್ಕಾರಿ ಅಧಿಕಾರಿಗಳೊಡನೆ ಘರ್ಷಣೆಯಿಂದ ಕಾರ್ಯ ವಿಳಂಬ. ಅಗ್ನಿ ಅವಘಡಗಳಿಂದ ಜಾಗ್ರತವಾಗಿರಿ.
ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ-7

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)
ಬುದ್ಧಿವಂತಿಕೆಯಿಂದ ಧನ ಸಂಪಾದನೆ ಆಗುವುದು. ಪಶು ಸಂಗೋಪನೆ, ಜಾನುವಾರು ವ್ಯಾಪಾರದಲ್ಲಿ ಹೇರಳ ಧನಲಾಭವಾಗುವುದು. ವಿದ್ಯಾ ಪ್ರಸಂಗಗಳಲ್ಲಿ ಗೌರವಕ್ಕೆ ಪಾತ್ರರಾಗುವಿರಿ. ಧಾರ್ಮಿಕ ಪ್ರವೃತ್ತಿಯಿಂದ ನಡೆದು ಸಮಾಜದ ಪ್ರಶಂಸೆಗೆ ಭಾಜನರಾಗುವಿರಿ. ಶನಿದೇವ ಅಶುಭವಾಗಿದ್ದು, ಅಪವಾದಕ್ಕೆ ಗುರಿಯಾಗುವ ಸಾಧ್ಯತೆ ಇರುತ್ತದೆ. ಸರ್ಕಾರಿ ನೌಕರರು ಸೌಕರ್ಯವಿಲ್ಲದ ಸ್ಥಳಕ್ಕೆ ವರ್ಗವಾಗುವರು.
ಶ್ರೀ ದೇವಿ ಉಪಾಸನೆ. ಶುಭ ಸಂಖ್ಯೆ-1

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಅಂದುಕೊಂಡಿದ್ದೆಲ್ಲಾ ಆಗುವುದಿಲ್ಲ. ಹೊಂದಿಕೊಂಡು ಹೋಗುವುದೇ ಜೀವನ ಪಾಠ. ಉತ್ತಮ ನಡತೆ ಹಾಗೂ ನಾಜೂಕು ಮಾತಿನಿಂದ ಇತರರ ಮೇಲೆ ಒಳ್ಳೆಯ ಪ್ರಭಾವ ಬೀರುವಿರಿ. ನಿಮ್ಮ ಸಂವೇದನಾಶೀಲತೆಯಿಂದ ಸ್ತ್ರೀಯರ ಮನಸ್ಸು ಗೆಲ್ಲುವಿರಿ. ವಾರಮಧ್ಯೆ ಆಪ್ತೇಷ್ಟರು ಮನೆಗೆ ಆಗಮಿಸುವರು. ಅವರ ಉಪಚಾರ, ಉಡುಗೊರೆಗಳಿಗೆ ಧನ ವ್ಯಯವಾಗುವುದು. ಸಟ್ಟಾ, ಜೂಜುಗಳಿಂದ ದೂರವಿದ್ದರೆ ಒಳಿತು.
ಶ್ರೀ ಸೂರ್ಯೋಪಾಸನೆ. ಶುಭ ಸಂಖ್ಯೆ-5

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ನಿಮ್ಮ ಪ್ರಾಮಾಣಿಕತೆಗೆ ಸಮಾಜದಲ್ಲಿ ಮನ್ನಣೆ ದೊರೆಯುವುದು. ಧೈರ್ಯ ಸಾಹಸ ಕೃತ್ಯಗಳಿಗೆ ಮನಸ್ಸಾಗುವುದು. ವಿರೋಧಿಗಳನ್ನು ಮಣಿಸಲು ಹೊಸ ತಂತ್ರಗಳಲ್ಲಿ ಮಗ್ನರಾಗುವಿರಿ. ನಿಮ್ಮ ಇಚ್ಛಿತ ಗುರಿಮುಟ್ಟಲು ಗುರು ಹಿರಿಯರ ಆಸರೆ ಮಾರ್ಗದರ್ಶನ ದೊರೆಯುವುದು. ಅಧ್ಯಾಪಕ ವೃತ್ತಿಯವರಿಗೆ ಸರ್ಕಾರದಿಂದ ಮನ್ನಣೆ ದೊರೆಯುವುದು. ವಾರದ ಕಡೆಗೆ ಆಕಸ್ಮಿಕ ಘಟನೆಗಳಿಂದ ವಿಚಲಿತರಾಗುವಿರಿ.
ಶ್ರೀ ಅಷ್ಟಾಕ್ಷರಿ ಮಂತ್ರ ಜಪ. ಶುಭ ಸಂಖ್ಯೆ-2

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಪೂರ್ವಯೋಜಿತ ಕೆಲಸಗಳಿಗೆ ಸರಿಯಾದ ತಯಾರಿ ಇಲ್ಲದೆ ಸಫಲವಾಗದು. ಆಯ-ವ್ಯಯಗಳಲ್ಲಿ ಸಮತೋಲನ ಕಾಪಾಡುವುದು ಕಷ್ಟವಾಗುವುದು. ಯಾವುದನ್ನೂ ಊಹೆಯ ಮೇಲೆ ವ್ಯವಹಾರ ಮಾಡಬೇಡಿ. ನೆಂಟರಿಷ್ಟರ ಮಧ್ಯೆ ಉಂಟಾಗಿರುವ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಲು ಪ್ರಯತ್ನಿಸಿ. ವಾರದ ಉತ್ತರಾರ್ಧದಲ್ಲಿ ವ್ಯಾಪಾರದ ಸಲುವಾಗಿ ಪ್ರಯಾಣದ ಸಾಧ್ಯತೆ ಇರುತ್ತದೆ. ಸಣ್ಣಪುಟ್ಟ ಅನಾರೋಗ್ಯ ಕಾಡುವುದು.
ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-9

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ
ಶ್ರದ್ಧಾ-ಭಕ್ತಿಗಳಿಂದ ಮಾಡಿದ ಕೆಲಸಗಳಲ್ಲಿ ಗೆಲುವು ಉಂಟಾಗುವುದು. ಆರ್ಥಿಕ ವ್ಯವಹಾರಗಳು ಮುನ್ನಡೆಯಲ್ಲಿ ಸಾಗುವುದು. ಪಾಲುಗಾರಿಕೆ ವ್ಯವಹಾರಗಳು ಪ್ರಗತಿ ಹೊಂದುತ್ತವೆ. ಸಜ್ಜನರ ಸಹವಾಸ ಮಾನಸಿಕ ನೆಮ್ಮದಿಗೆ ಕಾರಣವಾಗುವುದು. ಕಲಾಕಾರರಿಗೆ ಪ್ರಶಂಸೆ, ಪ್ರಶಸ್ತಿಗಳು ದೊರೆಯುವುದು. ಪದವೀಧರರಿಗೆ ಹೊಸ ಅವಕಾಶವು ಕಾಯುತ್ತಿದೆ. ಇದರ ಆಹ್ವಾನವನ್ನು ಸ್ವೀಕರಿಸಿ.
ಶ್ರೀ ಗುರು ಚರಿತ್ರೆ ಓದಿ. ಶುಭ ಸಂಖ್ಯೆ-6

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ವಾರದ ಆದಿಗೆ ಹಣಕಾಸಿನ ವಿಚಾರಗಳು ತಹಬದಿಗೆ ಬರುವುದು. ಸಿಮೆಂಟ್, ಕಬ್ಬಿಣ ಮಾರಾಟಗಾರರಿಗೆ ವ್ಯಾಪಾರದಲ್ಲಿ ಹೆಚ್ಚಳ ಹಾಗೂ ಧನಲಾಭ. ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯವಾಗುವುದು. ಕೆಲವರು ನಿಮ್ಮ ಒಳ್ಳೆಯತನವನ್ನು ದುರುಪಯೋಗ ಪಡಿಸಿಕೊಳ್ಳಬಹುದು. ವಾರದ ಕಡೆಗೆ ಆರೋಗ್ಯದ ಬಗ್ಗೆ ಅಸಡ್ಡೆ ತೋರಿದರೆ ತೊಂದರೆಗೆ ಗುರಿಯಾಗುವಿರಿ.
ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-7

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಸಾಮಾಜಿಕವಾಗಿ ಸ್ಥಾನಮಾನಗಳು ನಿಮ್ಮನ್ನು ಅರಸಿ ಬರುವುದು. ನಿಮ್ಮ ಆರ್ಥಿಕ ಸ್ಥಿತಿಯನ್ನು ಪರ್ಯಾಲೋಚಿಸಿ ಯೋಜನೆಯನ್ನು ತಯಾರಿಸುವ ಅಗತ್ಯವಿದೆ. ರಾಜಕೀಯ ವಿರೋಧಿಗಳು ಮೇಲುಗೈ ಸಾಧಿಸುವುದು. ಆರ್ಥಿಕ ವ್ಯವಹಾರದಲ್ಲಿ ಜಾಗರೂಕರಾಗಿರಿ. ವಾರದ ಉತ್ತರಾರ್ಧದಲ್ಲಿ ವರಮಾನಕ್ಕಿಂತ ಖರ್ಚುಗಳು ಹೆಚ್ಚುವುದು. ಅನವಶ್ಯಕ ಹಾಗೂ ಖಯ್ಯಾಲಿ ಪ್ರವಾಸಗಳು ತೊಂದರೆ ತರುವುದು.
ಶ್ರೀ ಶನಿ ಮೂಲ ಮಂತ್ರ ಜಪಿಸಿ. ಶುಭ ಸಂಖ್ಯೆ-2


ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಈ ವಾರದಲ್ಲಿ ಧೈರ್ಯ ಹಾಗೂ ಪ್ರಾಮಾಣಿಕತೆಯ ಅಗತ್ಯ ಕಂಡು ಬರುತ್ತದೆ. ಹೊಸ ಪರಿಚಯಸ್ಥರಿಂದ ಲಾಭವಾಗುವುದು. ಸರಿಯಾದ ಹೆಜ್ಜೆಯಿಟ್ಟು ಸಾಗಿದರೆ ಪ್ರಗತಿ ಸಾಧಿಸುವಿರಿ. ಕುಟುಂಬ ವಿಷಯದಲ್ಲಿ ಆಸ್ಥೆ ವಹಿಸಿ. ಕಷ್ಟಸಾಧ್ಯ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದರಿಂದ ತೊಂದರೆಗೆ ಸಿಲುಕುವಿರಿ. ವಾರಾಂತ್ಯಕ್ಕೆ ಹೆಚ್ಚು ಧಾರ್ಮಿಕ ಕೆಲಸಗಳಲ್ಲಿ ಪಾಲ್ಗೊಳ್ಳುವುದರಿಂದ ಮನಸ್ಸಿನ ದುಗುಡ ಕಡಿಮೆ ಆಗುವುದು.
ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-4

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಮನೋಕಾರಕ ಚಂದ್ರ ಚಂಚಲತೆಯನ್ನು ನೀಡುವನು. ನಿಮ್ಮ ವಿಚಾರದಲ್ಲಿ ಸ್ಥಿರ, ಮನೋಭಾವವಿದ್ದಲ್ಲಿ ಉತ್ತಮ ಸಾಧನೆಯನ್ನು ಮಾಡಬಲ್ಲಿರಿ. ವಿರೋಧಿಗಳು ನಿಮ್ಮ ಹೊಸ ತಂತ್ರಗಾರಿಕೆಯಿಂದ ಶಸ್ತ್ರ ತ್ಯಾಗ ಮಾಡುವರು. ವಾರ ಮಧ್ಯೆ ಹೊಸ ಆಹ್ವಾನಗಳನ್ನು ಸ್ವೀಕರಿಸಿ ಪ್ರಗತಿಯತ್ತ ಸಾಗುವಿರಿ. ಕೆಲಸದಲ್ಲೇ ಮಗ್ನರಾಗಿದ್ದು ಆರೋಗ್ಯವನ್ನು ಕಡೆಗಣಿಸದಿರಿ.
ಶ್ರೀ ಗುರುರಾಯರ ಉಪಾಸನೆ. ಶುಭ ಸಂಖ್ಯೆ-1

ತಿ.ನರಸೀಪುರ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಚುನಾವಣೆ

ಐವರು ನಿರ್ದೇಶಕರಿಗೆ ಭರ್ಜರಿ ಜಯ, 2 ಕ್ಷೇತ್ರಗಳ ಫಲಿತಾಂಶಕ್ಕೆ ತಡೆ

- ಒಟ್ಟು 14 ಸದಸ್ಯರ ಪೈಕಿ 7 ಮಂದಿ ಅವಿರೋಧ ಆಯ್ಕೆ
- ನ್ಯಾಯಾಲಯದ ಆದೇಶ: ಬನ್ನೂರಿನ ಸಾಲಗಾರರ, ಸಾಲಗಾರಲ್ಲದ ಕ್ಷೇತ್ರಗಳ ಫಲಿತಾಂಶಕ್ಕೆ ಬ್ರೇಕ್




ತಿ.ನರಸೀಪುರ ಪಿಎಲ್‌ಡಿ ಬ್ಯಾಂಕ್ ಚುನಾವಣೆಯಲ್ಲಿ ಮಾದಾಪುರ ಕ್ಷೇತ್ರದಿಂದ ಹೆಮ್ಮಿಗೆ ಸೋಮಣ್ಣ, ಸೋಸಲೆ ಮೀಸಲು ಕ್ಷೇತ್ರದಿಂದ ಲಿಂಗಪ್ಪಾಜಿ ಜಯಗಳಿಸಿದರು.

ತಿ.ನರಸೀಪುರ, ಫೆ.2– ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿರ್ದೇಶಕರ ಆಯ್ಕೆಗಾಗಿ ಭಾನುವಾರ ನಡೆದ ಚುನಾವಣೆಯಲ್ಲಿ ಐವರು ನಿರ್ದೇಶಕರು ಜಯಗಳಿಸಿದರೇ, 2 ಕ್ಷೇತ್ರಗಳ ಚುನಾವಣಾ ಫಲಿತಾಂಶ ತಡೆ ಹಿಡಿಯಲಾಯಿತು.

ಒಟ್ಟು 14 ಸದಸ್ಯರ ಬಲದ ಬ್ಯಾಂಕ್‌ನ 7 ಕ್ಷೇತ್ರಗಳಿಗೆ ಪಟ್ಟಣದ ಬಿಇಓ ಕಚೇರಿ ಹಿಂಭಾಗದಲ್ಲಿರುವ ಬಾಲಕಿಯರ ಪ್ರೌಢಶಾಲೆಯಲ್ಲಿ ಚುನಾವಣೆ ನಡೆಯಿತು. ಸಾಲಗಾರರ ಕ್ಷೇತ್ರದಿಂದ 6 ನಿರ್ದೇಶಕರು ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ ಒಂದು ನಿರ್ದೇಶಕರ ಸ್ಥಾನದ ಆಯ್ಕೆಗಾಗಿ ನಡೆದ ಚುನಾವಣೆಯಲ್ಲಿ ಬೆಳಗ್ಗೆಯಿಂದಲೇ ಬ್ಯಾಂಕ್‌ನ ರೈತ ಸದಸ್ಯರು ಉತ್ಸಾಹದಿಂದಲೇ ಮತ ಚಲಾಯಿಸಿದರು. ಸಂಜೆ 4 ಗಂಟೆ ನಂತರ ಮತ ಎಣಿಕೆ ನಡೆದು 7 ಕ್ಷೇತ್ರಗಳ ಪೈಕಿ 5 ಕ್ಷೇತ್ರದ ಚುನಾವಣಾ ಫಲಿತಾಂಶ ಪ್ರಕಟಿಸಲಾಯಿತು.

ಬನ್ನೂರು ಸಾಲಗಾರರು ಕ್ಷೇತ್ರದಿಂದ ಸಾಮಾನ್ಯ ವರ್ಗಕ್ಕೆ ಮೀಸಲಾದ ಒಂದು ಸ್ಥಾನ ಹಾಗೂ ಸಾಲಗಾರರಲ್ಲದ ಒಂದು ಕ್ಷೇತ್ರದ ಚುನಾವಣಾ ಫಲಿತಾಂಶವನ್ನು ನ್ಯಾಯಾಲಯದ ಆದೇಶದ ಮೇರೆಗೆ ತಡೆ ಹಿಡಿಯಲಾಯಿತು.

ಪ.ಪಂಗಡಕ್ಕೆ ಮೀಸಲಾದ ಸಾಲಗಾರರ ಕ್ಷೇತ್ರದಿಂದ ಆಯ್ಕೆ ಬಯಸಿದ್ದ ಹೆಮ್ಮಿಗೆ ಗ್ರಾಮದ ಸೋಮಣ್ಣ ತಮ್ಮ ಪ್ರತಿಸ್ಪರ್ಧಿ ಪ್ರಭುಸ್ವಾಮಿ ವಿರುದ್ಧ ಜಯಗಳಿಸಿದರೆ, ಸೋಸಲೆ ಕ್ಷೇತ್ರದಿಂದ ಪರಿಶಿಷ್ಟ ಜಾತಿಗೆ ಮೀಸಲಾದ ಸ್ಥಾನಕ್ಕೆ ಲಿಂಗಪ್ಪಾಜಿ 25 ಮತ ಪಡೆದು ಎರಡನೇ ಬಾರಿಗೆ ಗೆಲುವು ದಾಖಲಿಸಿದರು. ಪ್ರತಿಸ್ಪರ್ಧಿಗಳಾದ ಪರಶಿವ ಮೂರ್ತಿ ಹಾಗೂ ಚಿಕ್ಕತಾಯಮ್ಮ ತಲಾ 13 ಮತ ಪಡೆದು ಪರಾಭವಗೊಂಡರು.

ತಲಕಾಡು ಹಿಂದುಳಿದ ಪ್ರವರ್ಗ ಎ ವರ್ಗಕ್ಕೆ ಮೀಸಲಾದ ಕ್ಷೇತ್ರದಿಂದ ಎಸ್.ಎಂ. ಶಿವನಂಜಪ್ಪ ಅವರ ಪುತ್ರ ಎಸ್.ಮಹೇಶ್ 22 ಮತ ಪಡೆದು ಜಯಗಳಿಸಿದರೆ, 10 ಮತ ಪಡೆದ ರುದ್ರಸ್ವಾಮಿ ಸೋಲನುಭವಿಸಿದರು. ಕೊತ್ತೇಗಾಲ ಕ್ಷೇತ್ರದಿಂದ ಸಾಮಾನ್ಯ ವರ್ಗಕ್ಕೆ ಮೀಸಲಾದ ಸ್ಥಾನಕ್ಕೆ ಮಾಜಿ ಅಧ್ಯಕ್ಷ ಮಾದ್ರಹಳ್ಳಿ ಎಂ.ಎಸ್.ಶಿವಮೂರ್ತಿ 48 ಮತ ಪಡೆದು ಜಯಗಳಿಸಿದರೆ, ಎದುರಾಳಿ ಮಂಜುನಾಥ್ ಕೇವಲ 2 ಮತ ಪಡೆದು ಹೀನಾಯವಾಗಿ ಸೋಲನುಭವಿಸಿದರು.

ಯಾಚೇನಹಳ್ಳಿಯಿಂದ ಸಾಮಾನ್ಯ ವರ್ಗಕ್ಕೆ ಮೀಸಲಾದ ಸ್ಥಾನಕ್ಕೆ ತುರುಗನೂರು ಟಿ.ಎಸ್.ಪ್ರಸನ್ನ 38 ಮತ ಪಡೆದು 21 ಮತ ಪಡೆದ ಟಿ.ಎಸ್.ಸಿದ್ದರಾಜು ಅವರಿಗೆ ಸೋಲುಣಿಸಿದರು. ಉಳಿದ 7 ಸಾಲಗಾರರ ಕ್ಷೇತ್ರಗಳ ಪೈಕಿ ಕುಪ್ಯ ಕ್ಷೇತ್ರದಿಂದ ಹಾಲಿ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಸೋಮನಾಥಪುರ ಕ್ಷೇತ್ರದಿಂದ ವಡ್ಡಲ್ಲೇಗೌಡ ಉರುಫ್ ವಜ್ರೇಗೌಡ, ಅತ್ತಹಳ್ಳಿ ಕ್ಷೇತ್ರದಿಂದ ಎ.ಎಂ.ಮಹದೇವ, ಚಿದರವಳ್ಳಿ ಕ್ಷೇತ್ರದಿಂದ ಎನ್.ಎನ್.ಮಹದೇವಸ್ವಾಮಿ, ಮೂಗೂರು ಕ್ಷೇತ್ರದಿಂದ ರಾಜಮಣಿ, ಕಸಬಾ ಕ್ಷೇತ್ರದಿಂದ ಎಂ.ನಾಗರತ್ನ ಹಾಗೂ ದೊಡ್ಡೇಬಾಗಿಲು ಕ್ಷೇತ್ರದಿಂದ ಎಂ.ಮಲ್ಲಿಕಾರ್ಜುನ ಸ್ವಾಮಿ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಚುನಾವಣಾಧಿಕಾರಿ ಹೆಚ್.ಎಸ್.ಮನೋಜ್ ಕುಮಾರ್, ಸಹಾಯಕ ಚುನಾವಣಾಧಿಕಾರಿ ವಿಮಲ್ ಕುಮಾರ್ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಬ್ಯಾಂಕ್‌ನ ಹಾಲಿ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ನೂತನ ನಿರ್ದೇಶಕರಾದ ದೊಡ್ಡೇಬಾಗಿಲು ಮಲ್ಲಿಕಾರ್ಜುನಸ್ವಾಮಿ, ಮಹದೇವಸ್ವಾಮಿ, ಮುಖಂಡರಾದ ವಾಟಾಳು ನಾಗೇಶ್, ಶಂಭುದೇವನಪುರ ರಮೇಶ್, ಕುಮಾರ್, ಪುರಸಭೆ ಸದಸ್ಯ ಎಸ್.ಕೆ.ಕಿರಣ್, ಪರಮೇಶ್, ಹೆಮ್ಮಿಗೆ ಶೇಷಾದ್ರಿ, ಮಾವಿನಹಳ್ಳಿ ಪುಟ್ಟಸ್ವಾಮಿ, ಗೌಡ್ರರಾಜಶೇಖರ್, ಅಕ್ಕೂರು ಗುರುಮೂರ್ತಿ, ಕೆ.ಎಂ.ಶಾಂತರಾಜು, ಚೌಹಳ್ಳಿ ಮಹದೇವಪ್ಪ, ಕು.ಶಿ.ಬೃಂಗೀಶ್, ಪುಟ್ಟಬುದ್ಧಿ, ಪ್ರಭುಸ್ವಾಮಿ, ಹಿರಿಯೂರು ನವೀನ, ಬಸವರಾಜು, ಮಾದ್ರಹಳ್ಳಿ ನಾಗೇಂದ್ರ ಮರಿಸ್ವಾಮಿ, ಎಂ.ಆರ್.ಮಹದೇವಸ್ವಾಮಿ, ಶಿವಣ್ಣ ಸೇರಿದಂತೆ ಇತರರಿದ್ದರು.

ಲಾಟರಿಯಲ್ಲಿ ಒಲಿದ ಅದೃಷ್ಟ...!

ಬನ್ನೂರು ಹಾಗೂ ಸಾಲಗಾರರಲ್ಲದ ಕ್ಷೇತ್ರದ ಚುನಾವಣಾ ಫಲಿತಾಂಶ ತಡೆ ಹಿಡಿದರೆ, ಮತ್ತೊಂದೆಡೆ ಲಾಟರಿ ಮೂಲಕ ಅಭ್ಯರ್ಥಿಗೆ ಜಯ ಒಲಿಯಿತು. ಪ.ಪಂಗಡಕ್ಕೆ ಮೀಸಲಾದ ಮಾದಾಪುರ ಕ್ಷೇತ್ರದಿಂದ ಆಯ್ಕೆ ಬಯಸಿ ಹೆಮ್ಮಿಗೆ ಸೋಮಣ್ಣ ಹಾಗೂ ಪ್ರಭುಸ್ವಾಮಿ ಕಣದಲ್ಲಿದ್ದರು. ಮತ ಎಣಿಕೆ ವೇಳೆ ಇಬ್ಬರಿಗೂ ತಲಾ 22 ಮತಗಳು ಬಂದ ಹಿನ್ನೆಲೆಯಲ್ಲಿ ಲಾಟರಿ ಮೂಲಕ ಅಭ್ಯರ್ಥಿ ಆಯ್ಕೆ ಮಾಡಲು ನಿರ್ಧರಿಸಲಾಯಿತು. ಅಂತಿಮವಾಗಿ ವಿಜಯ ಲಕ್ಷ್ಮಿ ಹೆಮ್ಮಿಗೆ ಸೋಮಣ್ಣ ಅವರಿಗೆ ಒಲಿಯಿತು.

ಈ ವೇಳೆ ಮಾತನಾಡಿದ ಸೋಮಣ್ಣ, ಜನತಂತ್ರ ವ್ಯವಸ್ಥೆಯಲ್ಲಿ ನಮ್ಮಿಬ್ಬರಿಗೂ ಸಮನಾಂತರ ಮತಗಳು ಬಂದವು. ಅಂತಿಮವಾಗಿ ಗೆಲುವು ನನ್ನದೇ ಆಯಿತು. ಮುಂದೆ ಸಹಕಾರ ಬ್ಯಾಂಕ್‌ನಿಂದ ರೈತರಿಗೆ ದೊರಕಬಹುದಾದ ಎಲ್ಲ ಸವಲತ್ತುಗಳನ್ನು ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಮಹಿಳೆಯರಿಗೆ ಕಾನೂನು ಅರಿವು ಕಾರ್ಯಕ್ರಮ



ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶ ಡಿ.ಪಾಲಾಕ್ಷ ಉದ್ಘಾಟಿಸಿದರು.

ನಂಜನಗೂಡು, ಫೆ.2– ಬಾಲ್ಯ ವಿವಾಹ ನಿಷೇಧ ಕಾನೂನು ಜಾರಿಯಲ್ಲಿದ್ದು, ಹುಡುಗಿಗೆ 18, ಹುಡುಗನಿಗೆ 21 ವರ್ಷ ತುಂಬುವ ಮೊದಲು ವಿವಾಹ ಮಾಡಿದರೆ ಶಿಕ್ಷಾರ್ಹ ಅಪರಾಧ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಡಿ.ಪಾಲಾಕ್ಷ ತಿಳಿಸಿದರು.

ತಾಲೂಕಿನ ಹೆಮ್ಮರಗಾಲ ಗ್ರಾಮದ ಆಯುರ್ವೇದ ಆಸ್ಪತ್ರೆ ಆವರಣದಲ್ಲಿ ಕಾನೂನು ಸೇವಾ ಪ್ರಾಧಿಕಾರ, ವಕೀಲರ ಸಂಘ ಮತ್ತು ವಿವಿಧ ಇಲಾಖೆ ವತಿಯಿಂದ ಭಾನುವಾರ ಆಯೋಜಿಸಿದ್ದ ಮಹಿಳೆಯರಿಗೆ ಕಾನೂನು ಅರಿವು–ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ.ಜಾತಿ ಮತ್ತು ಪಂಗಡಗಳ ಮಹಿಳೆಯರು ಮತ್ತು ವಾರ್ಷಿಕ 3 ಲಕ್ಷಕ್ಕಿಂತ ಕಡಿಮೆ ಆದಾಯ ಹೊಂದಿರುವವರು ಜಿಲ್ಲಾ ಅಥವಾ ತಾಲೂಕು ಕಾನೂನು ಸೇವಾ ಪ್ರಾಧಿಕಾರಗಳ ಮೂಲಕ ಉಚಿತ ಕಾನೂನು ನೆರವು ಪಡೆಯಬಹುದಾಗಿದೆ. ಪ್ರಾಧಿಕಾರಕ್ಕೆ ನಿಮ್ಮ ಸಮಸ್ಯೆಗಳನ್ನು ಹೇಳಿಕೊಂಡರೆ ನುರಿತ ವಕೀಲರನ್ನು ಉಚಿತವಾಗಿ ನೇಮಿಸಿ ಕೊಡಲಾಗುವುದು. ಸಾರ್ವಜನಿಕರು ಕಾನೂನನ್ನು ಪಾಲಿಸಿದರೆ ನಾಗರಿಕ ಬದುಕು ಉತ್ತಮಗೊಳ್ಳುತ್ತದೆ. ಸಂಚಾರ ನಿಯಮಗಳನ್ನು ಚಾಚು ತಪ್ಪದೆ ಪಾಲಿಸಬೇಕು. ಇಲ್ಲವಾದರೆ ದಂಡ ಕಟ್ಟಬೇಕಾಗುತ್ತದೆ. ಜೊತೆಗೆ ಜನನ ಮತ್ತು ಮರಣ ನೋಂದಣಿಯನ್ನು ಕಡ್ಡಾಯವಾಗಿ ಮಾಡಿಸಿದರೆ ಸರ್ಕಾರಿ ಸವಲತ್ತುಗಳನ್ನು ಸುಲಭವಾಗಿ ಪಡೆಯಬಹುದಾಗಿದೆ. ಅಲ್ಲದೆ ನಿಮ್ಮ ನ್ಯಾಯದ ವ್ಯಾಜ್ಯಗಳಿಗೆ ನ್ಯಾಯ ಅದಾಲತ್ ಮೂಲಕ ತ್ವರಿತವಾಗಿ ನ್ಯಾಯ ಪಡೆಯಬಹುದಾಗಿದೆ. ಎಲ್ಲರೂ ಕೂಡ ಕಾನೂನನ್ನು ಕಡ್ಡಾಯವಾಗಿ ಪಾಲಿಸಿದಲ್ಲಿ ಸುಖಿ ಸಮಾಜ ನಿರ್ಮಾಣ ಸಾಧ್ಯ ಎಂದರು.

ವಕೀಲೆ ಅಶ್ವಿನಿ ಮಾತನಾಡಿ, ಹಿರಿಯ ನಾಗರಿಕರ ಯೋಗಕ್ಷೇಮವನ್ನು ಅವರ ಮಕ್ಕಳು ನೋಡಿಕೊಳ್ಳಬೇಕು. ಹಿರಿಯ ನಾಗರಿಕರ ಆಸ್ತಿ ಪಡೆದ ನಂತರ ಅವರನ್ನು ಪೋಷಿಸದೆ ನಿರ್ಲಕ್ಷ ವಹಿಸಿದರೆ ಹಿರಿಯ ನಾಗರಿಕ ಸಂಹಿತೆ ಪ್ರಕಾರ ಹಿರಿಯರು ಅವರ ಆಸ್ತಿ ವಾಪಸ್ ಪಡೆಯಬಹುದಾಗಿದೆ. ತಂದೆ–ತಾಯಿಯರನ್ನು ನೋಡಿಕೊಳ್ಳದ ಮಕ್ಕಳು ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಯಾಗುತ್ತಾರೆ. ಆಸ್ತಿ ಹೊಂದಿಲ್ಲದ ಹಿರಿಯರು ಕೂಡ ತಮ್ಮ ಮಕ್ಕಳಿಂದ ನಿರ್ಲಕ್ಷ್ಯಕ್ಕೆ ಒಳಗಾದಲ್ಲಿ ಕಾನೂನು ಪ್ರಾಧಿಕಾರದ ಮೂಲಕ ನ್ಯಾಯ ಪಡೆಯಬಹುದಾಗಿದೆ. ಮಹಿಳೆಯರು ತಮ್ಮ ಹಕ್ಕುಗಳ ಬಗ್ಗೆ ಅರಿವು ಮೂಡಿಸಿ ಕೊಳ್ಳಬೇಕು. ಜೊತೆಗೆ ವಿವಿಧ ಇಲಾಖೆಯಿಂದ ಮಹಿಳೆಯರಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳನ್ನು ಸದುಪಯೋಗ ಪಡಿಸಿ ಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಪ್ರಧಾನ ಸಿವಿಲ್ ನ್ಯಾಯಾಧೀಶ ಕೆ.ಜಿ.ಸತೀಶ್ ಮಾತನಾಡಿದರು. ಸಮಾರಂಭದಲ್ಲಿ ಹೆಮ್ಮರಗಾಲ ಗ್ರಾಪಂ ಅಧ್ಯಕ್ಷ ಶ್ರೀಧರ್, ಕಾಂಗ್ರೆಸ್ ಎಸ್ಸಿ ವರ್ಗದ ರಾಜ್ಯ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿ ನಾಯಕ, ಗ್ರಾಪಂ ಮಾಜಿ ಅಧ್ಯಕ್ಷೆ ಶೀಲಾ, ಸರ್ಕಾರಿ ಅಭಿಯೋಜಕ ಶ್ರೀಕಂಠಪ್ರಸಾದ್, ವಕೀಲರಾದ ನಾಗರಾಜಯ್ಯ, ವಸಂತಲಕ್ಷ್ಮಿ, ಜಿ.ರಮೇಶ್, ಪ್ರಶಾಂತ್, ಮುತ್ತುರಾಜ್, ಕಾನೂನು ಪ್ರಾಧಿಕಾರದ ಸಿಬ್ಬಂದಿ ರಾಮಣ್ಣ, ಪಿಡಿಓ ಪುಟ್ಟಸ್ವಾಮಿಚಾರಿ ಸೇರಿದಂತೆ ಸ್ತ್ರೀ ಶಕ್ತಿ ಸ್ವಸಹಾಯ ಸಂಘದ ಮಹಿಳೆಯರು, ಗ್ರಾಮಸ್ಥರು ಇದ್ದರು.

ಕೊತ್ತೇಗಾಲ ಗ್ರಾಪಂ: ಪುಷ್ಪ ಅಧ್ಯಕ್ಷೆ, ಬಸವರಾಜು ಉಪಾಧ್ಯಕ್ಷ



ಕೊತ್ತೇಗಾಲ ಗ್ರಾಪಂ ಅಧ್ಯಕ್ಷೆಯಾಗಿ ಪುಷ್ಪ ಉಪಾಧ್ಯಕ್ಷರಾಗಿ ಕೆ.ಎಂ.ಬಸವರಾಜು ಆಯ್ಕೆಯಾದರು.

ತಿ.ನರಸೀಪುರ, ಫೆ2– ತಾಲೂಕಿನ ಕೊತ್ತೇಗಾಲ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಪುಷ್ಪ ಮಹಾದೇವಸ್ವಾಮಿ, ಉಪಾಧ್ಯಕ್ಷರಾಗಿ ಕೆ.ಎಂ.ಬಸವರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


ನಿಕಟಪೂರ್ವ ಅಧ್ಯಕ್ಷೆ ಮೀನಾಕ್ಷಿ, ಉಪಾಧ್ಯಕ್ಷೆ ವನಜಾಕ್ಷಮ್ಮ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಗ್ರಾಪಂ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಪುಷ್ಪ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಕೆ.ಎಂ.ಬಸವರಾಜು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಬನ್ನೂರು ಕಾವೇರಿ ನೀರಾವರಿ ನಿಗಮದ ಎಇಇ ರಶೀದ್ ಘೋಷಿಸಿದರು.

ನೂತನ ಅಧ್ಯಕ್ಷೆ ಪುಷ್ಪ ಮಾತನಾಡಿ, ಗ್ರಾಪಂ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿ ಕುಡಿಯುವ ನೀರು, ಬೀದಿ ದೀಪ, ರಸ್ತೆ ಮತ್ತು ಸ್ವಚ್ಛತೆಗೆ ಮೊದಲ ಆದ್ಯತೆ ನೀಡಲಾಗುವುದು ಎಂದರು.

ಸದಸ್ಯರಾದ ವನಜಾಕ್ಷಮ್ಮ, ಬಿ.ಮಹೇಶ್, ಮಲ್ಲೇಶ್, ಆರ್.ನಾಗಮಣಿ, ಮಹಾದೇವಿ, ಭಾಗ್ಯಮ್ಮ ಮರಿಸ್ವಾಮಿ, ನಾಗೇಂದ್ರ ಮೀನಾಕ್ಷಿ, ಲಕ್ಷ್ಮಣ, ಲೀಲಾವತಿ, ಸಿ.ಮಣಿಕಂಠ, ಶಿವಮ್ಮ, ರಾಜಮ್ಮ, ಮಹದೇವಸ್ವಾಮಿ, ಕೆ.ಬಿ..ಬಸವರಾಜು ಚುನಾವಣೆಯಲ್ಲಿ ಭಾಗವಹಿಸಿದ್ದರು.

ತಾಪಂ ಮಾಜಿ ಸದಸ್ಯ ಸೀಹಳ್ಳಿ ಗುರುಮೂರ್ತಿ, ಕು.ಶಿ.ಬೃಂಗೇಶ್, ಮಹಾದೇವಸ್ವಾಮಿ, ಕೆ.ಬಿ.ರಾಜಪ್ಪ, ಮಹದೇವಪ್ರಸಾದ್, ಕನ್ನಹಳ್ಳಿ ಶಿವಕುಮಾರ್, ಗುರುಸ್ವಾಮಿ, ಮಾದ್ರಹಳ್ಳಿ ಬಾಬು, ನಾಗೇಂದ್ರಸ್ವಾಮಿ, ಕನ್ನಹಳ್ಳಿ ಬಸವರಾಜು, ಶಿವಕುಮಾರ್, ಕೆ.ಆರ್. ಚಿಕ್ಕಸ್ವಾಮಿ, ಲಕ್ಷ್ಮಣ, ಶಿವಮಲ್ಲಯ್ಯ, ನುಂಜುಂಡಶೆಟ್ಟಿ, ಕೊತ್ತೇಗಾಲ ಬಸವರಾಜು, ಗುತ್ತಿಗೆದಾರ ಶಾಂತಮೂರ್ತಿ, ಪಟೇಲ್ ಶಿವಕುಮಾರಸ್ವಾಮಿ, ಕುರುಬೂರು ಶಿವಕುಮಾರ್, ಲೋಕೇಶ್, ಶಿವಮಲ್ಲಯ್ಯ, ಕರೋಹಟ್ಟಿ ಗ್ರಾಪಂ ಉಪಾಧ್ಯಕ್ಷ ರೇವಣ್ಣ, ಪಿಡಿಓ ಶ್ರೀನಿವಾಸ್, ಗುಮಾಸ್ತ ವಿಶ್ವನಾಥ್, ಬಿಲ್ ಕಲೆಕ್ಟರ್ ಮಹೇಶ್ ಕುಮಾರ್ ಇತರರಿದ್ದರು.

ಪಿಎಲ್‌ಡಿ ಬ್ಯಾಂಕ್ ಚುನಾವಣೆಯಲ್ಲಿ ಮಹೇಶ್‌ಗೆ ಜಯ



ತಿ.ನರಸೀಪುರ ಪಿಎಲ್‌ಡಿ ಬ್ಯಾಂಕ್ ಚುನಾವಣೆಯಲ್ಲಿ ತಲಕಾಡು ಹಿಂದುಳಿದ 'ಎ' ವರ್ಗಕ್ಕೆ ಮೀಸಲಾದ ಕ್ಷೇತ್ರದಿಂದ ಎಸ್.ಎಂ.ಶಿವನಂಜಪ್ಪ ಅವರ ಪುತ್ರ ಎಸ್.ಮಹೇಶ್ 22 ಮತ ಪಡೆದು ಜಯಗಳಿಸಿದರು. ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಶಿವಮೂರ್ತಿ, ಮಹದೇವಸ್ವಾಮಿ, ಮಾವಿನಹಳ್ಳಿ ಪುಟ್ಟಸ್ವಾಮಿ, ರಮೇಶ್, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಪುರಸಭಾ ಸದಸ್ಯ ಕಿರಣ್, ಅಮ್ಜದ್ ಖಾನ್, ಕುಮಾರ್ ಮತ್ತಿತರರಿದ್ದರು.

ಕೋಟೆಯಲ್ಲಿ ಸಾವಿತ್ರಿಬಾಯಿ ಫುಲೆ ಜಯಂತಿ



ಉತ್ತಮ ಸೇವೆ ಸಲ್ಲಿಸಿದ ಶಿಕ್ಷಕಿಯರನ್ನು ಗೌರವಿಸಲಾಯಿತು.

ಹೆಚ್.ಡಿ.ಕೋಟೆ, ಫೆ.2– ಸಾವಿತ್ರಿಬಾಯಿ ಫುಲೆಯವರು ಶಾಲೆಗಳನ್ನು ಆರಂಭಿಸಿ, ಶಾಲೆ ಬಿಟ್ಟ ಮಕ್ಕಳಿಗೆ ಮತ್ತೆ ಓದಲು ಅವಕಾಶ ಕಲ್ಪಿಸಿಕೊಟ್ಟಿದ್ದರು ಎಂದು ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಜವರೇಗೌಡ ತಿಳಿಸಿದರು.

ಪಟ್ಟಣದ ಗುರುಭವನದಲ್ಲಿ ಸಾವಿತ್ರಿಬಾಯಿ ಫುಲೆ ರಾಷ್ಟ್ರೀಯ ಶಿಕ್ಷಕಿಯರ ಫೆಡರೇಷನ್, ಕರ್ನಾಟಕ ರಾಜ್ಯ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘ ಜಿಲ್ಲಾ ಮತ್ತು ತಾಲೂಕು ಘಟಕದಿಂದ ಹಮ್ಮಿಕೊಳ್ಳಲಾಗಿದ್ದ ಸಾವಿತ್ರಿಬಾಯಿ ಫುಲೆ ಜಯಂತಿ, ಮಹಿಳಾ ರತ್ನ ಪ್ರಶಸ್ತಿ ಪ್ರದಾನ ಮತ್ತು ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಫುಲೆಯವರು ಅಂದು ಶಾಲೆ ಬಿಟ್ಟ ಮಕ್ಕಳಿಗೆ ಶಾಲೆ ಕಟ್ಟಿದಂತೆ ಪ್ರಸ್ತುತ ಶಿಕ್ಷಕಿಯರು ಶಾಲೆ ಬಿಟ್ಟ ಮಕ್ಕಳು ಮತ್ತೆ ಶಾಲೆಗೆ ಬರುವಂತೆ ನೋಡಿಕೊಳ್ಳಬೇಕು. ಶೂನ್ಯ ದಾಖಲಾತಿ ಇರುವ ಶಾಲೆಗಳಿಗೆ ಮತ್ತೆ ದಾಖಲಾಗಬೇಕು. ಹೆಣ್ಣು ಮಕ್ಕಳು ಶಾಲೆ ಬಿಡದಂತೆ ನೋಡಿಕೊಳ್ಳಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕಾಂತರಾಜು ಮಾತನಾಡಿ, ಸಾವಿತ್ರಿ ಭಾಯಿ ಫುಲೆಯವರು ರಾಷ್ಟ್ರದ ಮೊದಲ ಮಹಿಳಾ ಶಿಕ್ಷಕಿಯಾಗಿದ್ದು, ಶಿಕ್ಷಕಿಯರಿಗೆ ಮಾದರಿಯಾಗಿ ನಿಲ್ಲುತ್ತಾರೆ ಎಂದರು.

ತಾಲೂಕಿನಲ್ಲಿ ಶೇ.80 ರಷ್ಟು ಮಹಿಳಾ ಶಿಕ್ಷಕಿಯರಿದ್ದು, ಮಕ್ಕಳನ್ನು ತಾಯಿಯಂತೆ ಪೋಷಣೆ ಮಾಡಿ ಶಿಕ್ಷಣ ನೀಡುತ್ತಿದ್ದಾರೆ ಎಂದರು.

ಯುವರಾಜ ಕಾಲೇಜಿನ ಉಪನ್ಯಾಸಕಿ ನಿವೇದಿತಾ ಮಾತನಾಡಿದರು. ಇದೇ ವೇಳೆ ಉತ್ತಮಸೇವೆ ಸಲ್ಲಿಸಿದ ಶಿಕ್ಷಕಿಯರಾದ ರೇಖಾಮಣಿ, ಸರಸ್ವತಿ, ಸರೋಜಮ್ಮ, ಕೋಮಲಾ, ಸರಸ್ವತಿ ಅವರಿಗೆ ಮಹಿಳಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕ್ಷೇತ್ರ ಸಮನ್ವಯಾಧಿಕಾರಿ ಕೃಷ್ಣಯ್ಯ, ಗೌತಮಿ ಬಂತೇಜಿ, ಸಂಘದ ಅಧ್ಯಕ್ಷೆ ಪ್ರತಿಭಾ, ಕಾರ್ಯದರ್ಶಿ ರೂಪ, ಪ್ರೌಢಶಾಲಾ ಮುಖ್ಯಶಿಕ್ಷಕರ ಸಂಘದ ಅಧ್ಯಕ್ಷ ನಾರಾಯಣ್, ಮಿಲ್ ನಾಗರಾಜು, ಸೆಲ್ವಿಯಾ, ವೀಣಾ, ಪ್ರಾಥಮಿಕ ಶಾಲೆ ಶಿಕ್ಷಕರ ಸಂಘದ ಅಧ್ಯಕ್ಷೆ ರಾಜೇಶ್ವರಿ, ಸಿದ್ದರಾಜು, ಭೀಮಪ್ಪ, ಎ.ಎಸ್. ಮಹದೇವು, ಸಿದ್ದರಾಜು, ಸೋಮಸುಂದರ್, ಸುಂದ್ರಮ್ಮ, ಜಯರಾಮೇಗೌಡ, ಯಶ್ವಂತ್ ಕುಮಾರ್, ದೀಪಾ, ಕೆಂಪರಾಜು, ದೊರೆಸ್ವಾಮಿ, ಪ್ರಮೋದ್, ಕೋಮಲಾ ಇದ್ದರು.

ರೋಟರಿ ಕ್ಲಬ್‌ಗೆ ಆಯ್ಕೆ

ಹೆಚ್.ಡಿ.ಕೋಟೆ: ತಾಲೂಕಿನ ರೋಟರಿ ಕ್ಲಬ್ ನೂತನ ಅಧ್ಯಕ್ಷರಾಗಿ ಎನ್.ಧರ್ಮೇಶ್, ಕಾರ್ಯದರ್ಶಿಯಾಗಿ ಸಿ.ಬಿ.ಸತೀಶ್ ಸುರಭಿ ಆಯ್ಕೆಯಾಗಿದ್ದು, ಪದಗ್ರಹಣ ಕಾರ್ಯಕ್ರಮ ಜುಲೈನಲ್ಲಿ ನಡೆಯಲಿದೆ ಎಂದು ರೋಟರಿ ಕ್ಲಬ್ ಕಾರ್ಯದರ್ಶಿ ಶಿವಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಎನ್.ಧರ್ಮೇಶ್, ಸಿ.ಬಿ.ಸತೀಶ್ ಸುರಭಿ

ಕೆ.ಮಂಜುಗೆ ಪಿಹೆಚ್.ಡಿ

ಮೈಸೂರು: ಡಾ. ಎಂ.ವಿ. ದಿನೇಶ ಅವರ ಮಾರ್ಗದರ್ಶನದಲ್ಲಿ ಕೆ. ಮಂಜು ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಹನಗೂಡಲ್ಲಿ ಹುಲಿ ದಾಳಿಗೆ ಬಸವ ಸಾವು



ಹುಲಿ ದಾಳಿಯಿಂದ ಸಾವನ್ನಪ್ಪಿರುವ ಬಸವ

ಹನಗೋಡು, ಫೆ.2– ಹುಲಿ ದಾಳಿಗೆ ಬಸವ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಮುದಗನೂರು ಗ್ರಾಮ ದಲ್ಲಿ ನಡೆದಿದೆ.

ಗ್ರಾಮದ ಪಟ್ಲ ದಮ್ಮ ದೇವಾಲಯಕ್ಕೆ ಸೇರಿದ ಬಸವ ಸಾವ ನ್ನಪ್ಪಿರುವುದು. ಬಸವ ಶನಿವಾರ ಗ್ರಾಮದ ನಿವಾಸಿ ವೆಂಕಟೇಶ್ ಅವರಿಗೆ ಸೇರಿದ ತೋಟದ ಬಳಿ ಮೇವು ತಿಂದು ರಾತ್ರಿ ಅಲ್ಲೇ ಮಲಗಿದೆ ಎನ್ನಲಾಗಿದೆ. ಈ ವೇಳೆ ನಾಗರಹೊಳೆ ಅರಣ್ಯದಿಂದ ಬಂದಿರುವ ಹುಲಿ ದಾಳಿ ನಡೆಸಿ ಬಲಿ ಪಡೆದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ ಗ್ರಾಮಸ್ಥರೊಂದಿಗೆ ಸೇರಿ ಬಸವನ ಅಂತ್ಯಸಂಸ್ಕಾರ ನಡೆಸಿದರು.

ಹುಲಿ ಸೆರೆಗೆ ಆಗ್ರಹ: ಕಳೆದೊಂದು ವರ್ಷದಿಂದ ಈ ಭಾಗದ ಅರಣ್ಯ ಪ್ರದೇಶದಲ್ಲಿ ಹುಲಿ ಬೀಡು ಬಿಟ್ಟಿದ್ದು, ಕಾಡಂಚಿನ ಗ್ರಾಮಗಳಲ್ಲಿ ಹಾಡುಹಗಲೇ ಕಾಣಿಸಿಕೊಳ್ಳುತ್ತಿದೆ. ಅಲ್ಲದೇ ಅಕ್ಕಪಕ್ಕದ ಗ್ರಾಮಗಳಲ್ಲಿ ಜಾನುವಾರುಗಳ ಮೇಲೆ ದಾಳಿ ಮಾಡಿ ಬಲಿ ಪಡೆದಿದೆ. ಇದರಿಂದ ಈ ಭಾಗದ ಗ್ರಾಮಸ್ಥರು ಭಯ ಭೀತರಾಗುತ್ತಿದ್ದಾರೆ. ಹೀಗಾಗಿ ಕೂಡಲೇ ಅರಣ್ಯ ಇಲಾಖೆಯವರು ಬೋನಿಟ್ಟು ಹುಲಿ ಸೆರೆ ಹಿಡಿಯಬೇಕೆಂದು ದೊಡ್ಡಹೆಜ್ಜೂರು ಗ್ರಾಪಂ ಮಾಜಿ ಅಧ್ಯಕ್ಷ ಮುದಗನೂರು ಸುಭಾಷ್ ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಗುಂಪು ಮನೆ ನಿರ್ಮಾಣಕ್ಕೆ ಅನುದಾನ ಮಂಜೂರಿಗೆ ಪ್ರಯತ್ನ

ವಿಶ್ರಾಂತಿ ಗೃಹ ನಿರ್ಮಾಣಕ್ಕೆ ಚಾಲನೆ ನೀಡಿದ ಶಾಸಕ ಡಿ.ರವಿಶಂಕರ್



ವಿಶ್ರಾಂತಿ ಗೃಹ ನಿರ್ಮಾಣಕ್ಕೆ ಶಾಸಕ ಡಿ.ರವಿಶಂಕರ್ ಭೂಮಿ ಪೂಜೆ ನೆರವೇರಿಸಿದರು.

ಕೆ.ಆರ್.ನಗರ, ಫೆ.2– ಆಶ್ರಯ ಮನೆ ಪಡೆಯಲು ಸರ್ಕಾರಕ್ಕೆ ಪುರಸಭೆ ಮೂಲಕ ಹಣ ಕಟ್ಟಿರುವ ಪಟ್ಟಣ ವ್ಯಾಪ್ತಿಯ ಎಲ್ಲಾ ನಾಗರಿಕರಿಗೂ ಮನೆ ನೀಡಬೇಕಾದದ್ದು ನಮ್ಮ ಕರ್ತವ್ಯ. ಅದಕ್ಕಾಗಿ ಗುಂಪು ಮನೆಗಳ ನಿರ್ಮಾಣಕ್ಕೆ ಸರ್ಕಾರದಿಂದ ಅಗತ್ಯ ಅನುದಾನ ಮಂಜೂರು ಮಾಡಿಸಲು ಪ್ರಯತ್ನಿಸುತ್ತಿದ್ದೇನೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಗರುಡಗಂಭ ವೃತ್ತದ ಬಳಿಯ ಪುರಸಭೆ ಜಾಗದಲ್ಲಿ ಕೂಲಿ ಕಾರ್ಮಿಕರಿಗಾಗಿ ವಿಶ್ರಾಂತಿ ಗೃಹ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು ವರ್ಷದೊಳಗೆ ಮನೆ ನಿರ್ಮಾಣ ಮಾಡಿ ಹಣ ಸಂದಾಯ ಮಾಡಿದವರಿಗೆ ವಿತರಣೆ ಮಾಡುವ ಸಲುವಾಗಿ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ್ದೇನೆ ಎಂದರು.

ನಗರದ ಜನತೆಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಅಮೃತ್ ಯೋಜನೆಯಡಿ 30 ಕೋಟಿ ರೂ.ಗಳಲ್ಲಿ ಕಾಮಗಾರಿ ನಡೆಯುತ್ತಿದ್ದು, ಹೊಸ ಬಡಾವಣೆಗಳಿಗೆ ಯುಜಿಡಿ ಸೌಲಭ್ಯ ನೀಡಲು 20 ಕೋಟಿ ರೂ.ಗಳನ್ನು ನಗರಾಭಿವೃದ್ಧಿ ಇಲಾಖೆಯಿಂದ ಬಿಡುಗಡೆ ಮಾಡಿಸಲಾಗಿದೆ. ಮುಖ್ಯಮಂತ್ರಿಗಳ ವಿಶೇಷ ಅನುದಾನದಿಂದ ಪಟ್ಟಣದ ಅಭಿವೃದ್ಧಿಗಾಗಿ 10 ಕೋಟಿ ರೂ. ಮಂಜೂರು ಮಾಡಿಸಿದ್ದೇನೆ ಎಂದರು.

ಪುರಸಭೆಯ 72 ವಾಣಿಜ್ಯ ಮಳಿಗೆಗಳಿಗೆ ನಾನಾ ಕಾರಣಕ್ಕಾಗಿ ಬೀಗ ಹಾಕಲಾಗಿದ್ದು, ಶೀಘ್ರದಲ್ಲೇ ವ್ಯಾಪಾರಸ್ಥರಿಗೆ ನೀಡಲು ಪುರಸಭೆಯೊಂದಿಗೆ ಮಾತನಾಡಿ, ಇರುವ ಸಮಸ್ಯೆ ಬಗೆಹರಿಸುತ್ತೇನೆ. ತರಕಾರಿ ಮಾರುಕಟ್ಟೆ ಬಳಿ ಹೊಸ ವಾಣಿಜ್ಯ ಮಳಿಗೆ ನಿರ್ಮಿಸಲು ನಿರ್ಧರಿಸಿದ್ದು, ಕಾಮಗಾರಿಗೆ ಕೂಡಲೆ ಚಾಲನೆ ನೀಡಲಾಗುತ್ತದೆ ಎಂದರು.

ಲೋಡರ್ಸ್ ಸಂಘದವರ ಬಹಳ ದಿನದ ಬೇಡಿಕೆಯಂತೆ ವಿಶ್ರಾಂತಿ ಕಟ್ಟಡ ನಿರ್ಮಾಣ ಮಾಡಲಾಗುತ್ತಿದ್ದು, ಕಾರ್ಮಿಕರು ಬೀದಿ ಬದಿಯಲ್ಲಿ ನಿಲ್ಲುವ ಬದಲು ಕೆಲಸಕ್ಕೆ ತೆರಳುವ ಮೊದಲು ಮತ್ತು ಬಂದ ನಂತರ ಕೊಠಡಿಯಲ್ಲಿ ವಿಶ್ರಾಂತಿ ಪಡೆಯಬೇಕೆಂದು ಸಲಹೆ ನೀಡಿದರು.

ಅರ್ಕೇಶ್ವರ ಲೋಡರ್ಸ್ ಸಂಘ ಮಾಡಿಕೊಂಡಿರುವ ಪದಾಧಿಕಾರಿಗಳು ಕೂಲಿ ಕಾರ್ಮಿಕರನ್ನು ಸಂಘದ ಸದಸ್ಯರನ್ನಾಗಿ ಮಾಡಿಕೊಂಡು ಸಂಘವನ್ನು ಬಲಿಷ್ಠವಾಗಿ ಕಟ್ಟಬೇಕೆಂದು ಕಿವಿಮಾತು ಹೇಳಿದ ಶಾಸಕರು, ಸರ್ಕಾರ ಮತ್ತು ಕಾರ್ಮಿಕ ಇಲಾಖೆಯಿಂದ ದೊರೆಯುವ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಕಾರ್ಮಿಕ ಇಲಾಖೆಯಿಂದ ನೋಂದಣಿ ಅದಾಲತ್ ಮಾಡುವಂತೆ ಇಲಾಖೆ ಅವರಿಗೆ ಸೂಚಿಸಲಾಗಿದ್ದು, ಆ ಸಂದರ್ಭ ಕಾರ್ಮಿಕರು ಅಗತ್ಯ ದಾಖಲಾತಿ ನೀಡಿ ಕಾರ್ಡ್ ಮಾಡಿಸಿಕೊಳ್ಳುವುದರ ಜೊತೆಗೆ ಹಳೆಯ ಕಾರ್ಡ್‌ಗಳನ್ನು ಕಡ್ಡಾಯವಾಗಿ ನವೀಕರಣ ಮಾಡಿಸಿಕೊಳ್ಳಬೇಕು. ಸರ್ಕಾರದಿಂದ ದೊರೆಯುವ ಸೌಲಭ್ಯ ಬಳಸಿಕೊಂಡು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಮನವಿ ಮಾಡಿದರು.

ಪುರಸಭೆ ಅಧ್ಯಕ್ಷ ಶಿವುನಾಯಕ್, ಸದಸ್ಯರಾದ ಪ್ರಕಾಶ್, ಬಿ.ಎಸ್.ತೋಂಟದಾರ್ಯ, ಸೈಯದ್ ಸಿದ್ಧಿಕ್, ಶಂಕರ್, ಸೌಮ್ಯ, ಶಂಕರ್ ಸ್ವಾಮಿ, ಅಶ್ವಿನಿ, ಮಾಜಿ ಸದಸ್ಯ ಕೆ.ವಿನಯ್, ಮುಖ್ಯಾಧಿಕಾರಿ ಬಿ.ವಿ.ವೆಂಕಟೇಶ್, ಕಾಂಗ್ರೆಸ್ ನಗರಾಧ್ಯಕ್ಷ ಎಂ.ಜೆ.ರಮೇಶ್, ಮುಖಂಡರಾದ ಧರ್ಮರಾಜ್, ನವೀದ್, ವೃಷಬೇಂದ್ರ, ಸಂಘದ ಅಧ್ಯಕ್ಷ ಬಾಲರಾಮೇಗೌಡ, ಉಪಾಧ್ಯಕ್ಷ ರಂಗಸ್ವಾಮಿ, ಗೌರವ ಕಾರ್ಯದರ್ಶಿ ಯೂನಸ್, ಕಾರ್ಯದರ್ಶಿ ಕುಮಾರಸ್ವಾಮಿ, ಖಜಾಂಚಿ ನವಾಜ್ ಮತ್ತು ಪದಾಧಿಕಾರಿಗಳು ಹಾಜರಿದ್ದರು.

ಕಂಪಲಾಪುರದಲ್ಲಿ ಅದ್ಧೂರಿ ಚೌಡೇಶ್ವರಿ ಉತ್ಸವ



ಕಂಪಲಾಪುರದಲ್ಲಿ ಚೌಡೇಶ್ವರ ಉತ್ಸವ ಅದ್ದೂರಿಯಾಗಿ ನಡೆಯಿತು.

ಕಂಪಲಾಪುರ, ಫೆ.2– ಇಲ್ಲಿನ ಶ್ರೀರಾಮಲಿಂಗ ಚೌಡೇಶ್ವರಿ ದೇವಸ್ಥಾನದ 17ನೇ ಪೂಜಾ ಮಹೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಭಾನುವಾರ ವಿಜೃಂಭಣೆಯಿಂದ ನೆರವೇರಿತು.

ಶನಿವಾರದಿಂದಲೇ ಕೆಆರ್.ನಗರದ ಗಣೇಶ್ ಮತ್ತು ತಂಡದಿಂದ ಪೂಜಾ ಕೈಂಕರ್ಯಗಳು ನೆರವೇರಿದವು. ಭಾನುವಾರ ಬೆಳಗ್ಗೆ ಹೋಮದ ನಂತರ ಮಹಾಮಂಗಳಾರತಿ, ಶ್ರೀನಾಗ ವಿದ್ಯಾ ಸಂಸ್ಥೆ ಆವರಣದಲ್ಲಿ 5 ಸಾವಿರ ಮಂದಿಗೆ ಅನ್ನಸಂತರ್ಪಣೆ ನಡೆಯಿತು.

ದೇವಾಂಗ ಸಮುದಾಯದ ಪುಟ್ಟ ಮಕ್ಕಳು, ಯುವ ಸಮೂಹ ಹಾಗೂ ಹಿರಿಯರೆಲ್ಲರೂ ಶ್ವೇತವಸ್ತ್ರಧಾರಿಗಳಾಗಿ ಪೂಜಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು. ಸಂಜೆ 6 ಗಂಟೆಗೆ ಮಡಿಕೇರಿಯ ನಜೀರ್ ಮಾಲೀಕತ್ವದ ವಿದ್ಯುತ್ ದೀಪಲಂಕಾರದ ಭವ್ಯ ಮಂಟಪದಲ್ಲಿ ಚೌಡೇಶ್ವರಿ ದೇವಿಯನ್ನು ಪ್ರತಿಷ್ಠಾಪಿಸಿ ಮೆರವಣಿಗೆ ನಡೆಸಲಾಯಿತು. ಈ ವೇಳೆ ಮಂಗಳವಾದ್ಯ, ಕೇರಳದ ಶೋಭಿತ್ ಮೋಹನ್ ತಂಡದ ಚಂಡೆನಾದಕ್ಕೆ ಹೆಂಗಳೆಯರು ಸೇರಿದಂತೆ ಯುವಕರೆಲ್ಲಾ ಹೆಜ್ಜೆಹಾಕಿ ಸಂಭ್ರಮಿಸಿದರು.

ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿಯ ಗೋಕುಲ ಲೈಟಿಂಗ್ಸ್ ಅವರು ಗ್ರಾಮದ ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ಪ್ರಮುಖ ಬೀದಿಗಳ ಎರಡೂ ಬದಿಗೆ ಮಾಡಿದ್ದ ವಿದ್ಯುತ್ ದೀಪಲಂಕಾರ ನೋಡುಗರ ಕಣ್ಮನ ಸೆಳೆಯುವಂತಿತ್ತು. ಭಾನುವಾರ ಸಚಿವ ಕೆ.ವೆಂಕಟೇಶ್ ದೇವಿಯ ದರ್ಶನ ಪಡೆದರು.

ಬಿಜೆಪಿ ರೆಬಲ್ ಟೀಂನಿಂದ ದೆಹಲಿಯಲ್ಲಿ ಹೈಕಮಾಂಡ್ ಭೇಟಿ

● ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ● ಯತ್ನಾಳ್, ಪ್ರತಾಪ್ ಸಿಂಹ ಗೈರು ● ಶಕ್ತಿ ದೇವತೆ ಪೂಜಿಸಿ ಶಕ್ತಿ ನೀಡುವಂತೆ ಕೋರಿಕೆ ● ಇಂದಿನ ದೆಹಲಿ ಭೇಟಿಯತ್ತ ಎಲ್ಲರ ಚಿತ್ತ ● ಯಾರ ಕೈ ಮೇಲಾಗುವುದು ಎಂಬ ಕುತೂಹಲ

ಮೈಸೂರು, ಫೆ2(ಬಿಎಲ್‌ಯು)– ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ತಿರುಗಿ ಬಿದ್ದಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದ ಬಿಜೆಪಿ ರೆಬಲ್ಸ್ ಟೀಂ ನಾಳೆ (ಫೆ. 3) ದೆಹಲಿಯಲ್ಲಿ ಹೈಕಮಾಂಡ್ ಭೇಟಿ ಮಾಡುವ ಮುನ್ನ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಭಾನುವಾರ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಮಾಜಿ ಸಚಿವರಾದ ರಮೇಶ್ ಜಾರಕಿಹೊಳಿ ಹಾಗೂ ಕುಮಾರ್ ಬಂಗಾರಪ್ಪ ಅವರು ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ತಾಯಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ಆದರೆ ರೆಬಲ್ ಟೀಂ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ಹಾಗೂ ರೆಬಲ್ ಟೀಂನಲ್ಲಿ ಗುರುತಿಸಿಕೊಂಡಿರುವ ಸ್ಥಳೀಯರಾದ ಮಾಜಿ ಸಂಸದ ಪ್ರತಾಪ್ ಸಿಂಹ ಗೈರು ಹಾಜರಾಗಿದ್ದರು. ಈ ಬೆಳವಣಿಗೆ ಸಹಜವಾಗಿಯೇ ಕುತೂಹಲಕ್ಕೆಡೆ ಮಾಡಿದೆ.

ವಿಜಯೇಂದ್ರ ವಿರುದ್ಧ ತಿರುಗಿ ಬಿದ್ದಿರುವ ಬಿಜೆಪಿ ಬಂಡಾಯ ನಾಯಕರು ಸೋಮವಾರ ದೆಹಲಿಯಲ್ಲಿ ಸಭೆ ನಡೆಸಿ ನಂತರ ಹೈಕಮಾಂಡ್ ಭೇಟಿ ಮಾಡಲು ನಿರ್ಧರಿಸಿದ್ದಾರೆ. ಇಂದು ರಮೇಶ್ ಜಾರಕಿಹೊಳಿ ಹಾಗೂ ಕುಮಾರ್ ಬಂಗಾರಪ್ಪ ಹೈಕಮಾಂಡ್ ಭೇಟಿ ಮಾಡುವ ಮುನ್ನ ಶಕ್ತಿ ದೇವತೆ ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಿ ತಮ್ಮ ಈ ಹೋರಾಟಕ್ಕೆ ಶಕ್ತಿ ನೀಡುವಂತೆ ಕೋರಿದ್ದಾರೆ.



ಚಾಮುಂಡಿಬೆಟ್ಟಕ್ಕೆ ಭಾನುವಾರ ಭೇಟಿ ನೀಡಿದ್ದ ಬಿಜೆಪಿ ರೆಬಲ್ ನಾಯಕರಾದ ಶಾಸಕ ರಮೇಶ್ ಜಾರಕಿಹೊಳಿ ಹಾಗೂ ಮಾಜಿ ಸಚಿವ ಕುಮಾರ್ ಬಂಗಾರಪ್ಪ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ರೆಬಲ್ ಟೀಂನಲ್ಲಿರುವ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ಮೊನ್ನೆ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿದ್ದರು. ತರುವಾಯ ಈಗ ರೆಬಲ್ ಟೀಂನ ಎಲ್ಲರೂ ಹೈಕಮಾಂಡ್ ಭೇಟಿ ಮಾಡುತ್ತಿರುವುದು ಮಹತ್ವ ಪಡೆದಿದೆ.

ಕರ್ನಾಟಕದಲ್ಲಿ ಎರಡು ಬಣಗಳಾಗಿದ್ದು ಬಿಜೆಪಿ ಹೈಕಮಾಂಡ್ ಯಾರನ್ನು ಸಮಾಧಾನಪಡಿಸುತ್ತದೆ. ಈ ಮೂಲಕ ಪಕ್ಷದಲ್ಲಿ ಎದ್ದಿರುವ ಬಂಡಾಯದ ಸ್ಫೋಟವನ್ನು ಹೇಗೆ ಆರಿಸುತ್ತದೆ ಎಂಬುದು ಕುತೂಹಲಕ್ಕೆಡೆ ಮಾಡಿದೆ.

ವಿಜಯೇಂದ್ರ ಅವರು ಕಳೆದ ನಾಲ್ಕು ತಿಂಗಳಿನಿಂದ ಹತ್ತಾರು ಬಾರಿ ಬಿಜೆಪಿ ಹೈಕಮಾಂಡ್ ಭೇಟಿ ಮಾಡಿ ರೆಬಲ್ ಟೀಂ ವಿರುದ್ಧ ದೂರು ನೀಡುತ್ತಾ ಬಂದಿದ್ದಾರೆ. ಅಮಿತ್ ಶಾ, ಜೆ.ಪಿ.ನಡ್ಡಾ ಅವರು ರೆಬಲ್ ನಾಯಕರಿಗೆ ಈ ತನಕ ಎಚ್ಚರಿಕೆ ಕೂಡ ನೀಡಿಲ್ಲ. ಇದರಿಂದ ಕರ್ನಾಟಕದಲ್ಲಿ ಬಿಜೆಪಿ ಬಣ ಬಡಿದಾಟ ತಾರಕಕ್ಕೇರುತ್ತಿದೆ ಈಗಲಾದರೂ ಹೈಕಮಾಂಡ್ ಗಾಯಕ್ಕೆ ಮುಲಾಮು ಹಚ್ಚುತ್ತದೆಯೇ ಅಥವಾ ಇದೇ ರೀತಿ ಬಡಿದಾಡಿ ಎಂದು ಮೌನವಹಿಸುತ್ತದೆಯೇ ಎಂದು ಕಾದು ನೋಡಬೇಕಿದೆ.

ಆಮ್ ಆದ್ಮಿ ಪಾರ್ಟಿಯಿಂದ ಚಿಂತಕರ ಸಭೆ

ರಾಜ್ಯ ಬಜೆಟ್‌ನಲ್ಲಿ ಸೇರಿಸಬೇಕಾದ ವಿಚಾರಗಳ ಬಗ್ಗೆ ಚರ್ಚೆ



ಆಮ್ ಆದ್ಮಿ ಪಾರ್ಟಿಯ ನಗರ ಘಟಕದ ವತಿಯಿಂದ ರಾಜ್ಯ ಬಜೆಟ್ ದೃಷ್ಟಿಯಲ್ಲಿಟ್ಟುಕೊಂಡು ಚಿಂತಕರ ಸಭೆಯನ್ನು ಭಾನುವಾರ ನಡೆಸಲಾಯಿತು.

ಮೈಸೂರು, ಫೆ.2(ಜಿಎ)– ಮೈಸೂರಿನ ಸರಸ್ವತಿಪುರಂನಲ್ಲಿರುವ ಜವರೇಗೌಡ ಉದ್ಯಾನವನದಲ್ಲಿ ಆಮ್ ಆದ್ಮಿ ಪಾರ್ಟಿಯ ನಗರ ಘಟಕದ ವತಿಯಿಂದ ರಾಜ್ಯ ಬಜೆಟ್ ದೃಷ್ಟಿಯಲ್ಲಿಟ್ಟುಕೊಂಡು ಚಿಂತಕರ ಸಭೆಯನ್ನು ಭಾನುವಾರ ನಡೆಸಲಾಯಿತು.

ಮೈಸೂರಿನ ಸಮಗ್ರ ಅಭಿವೃದ್ಧಿ, ಪ್ರವಾಸೋದ್ಯಮ ಪಾರಂಪರಿಕ ಕಟ್ಟಡಗಳು ಮತ್ತು ಚಾಮುಂಡಿಬೆಟ್ಟ ಸಂರಕ್ಷಣೆ ಸೇರಿದಂತೆ ವಿವಿಧ ಅಂಶಗಳನ್ನಿಟ್ಟುಕೊಂಡು ಪಕ್ಷದ ಪದಾಧಿಕಾರಿಗಳು, ಸಾರ್ವಜನಿಕರು ಮತ್ತು ಕಳಕಳಿಯುಳ್ಳ ಹಿರಿಯರು ಸಭೆಯಲ್ಲಿ ಚರ್ಚಿಸಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಮುಖವಾಗಿ ಮೈಸೂರಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಎಲ್ಲಾ ವಿಧಾನ ಸಭಾ ಕ್ಷೇತ್ರದಲ್ಲಿ ಉನ್ನತ ದರ್ಜೆಯ ಹೈಟೆಕ್ ನೂರು ಹಾಸಿಗೆಯ ಆಸ್ಪತ್ರೆ ಚಾಮುಂಡಿ ಬೆಟ್ಟದಲ್ಲಿ ಮೆಟ್ಟಿಲುಗಳ ನವೀಕರಣ, ಶೌಚಾಲಯ ನಿರ್ಮಾಣ ಹಾಗೂ ತಮಿಳುನಾಡಿನ ಪಳನಿಯಂತೆ ಕೇಬಲ್ ಕಾರ್ ಅಳವಡಿಕೆ ಹಾಗೂ ಈ ಹಿಂದೆ ಬಜೆಟ್‌ನಲ್ಲಿ ಘೋಷಿಸಿರುವ ಫಿಲಂ ಸಿಟಿ ನಿರ್ಮಾಣವಾಗಬೇಕು ಎಂಬಿತ್ಯಾದಿ ಬೇಡಿಕೆಗಳು ಸಭೆಯಲ್ಲಿ ಕೇಳಿಬಂತು.

ಈ ವೇಳೆ ಎಎಪಿ ನಗರಾಧ್ಯಕ್ಷ ಸೋಮಶೇಖರ್ ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚೆಯಾದ ವಿಚಾರಗಳ ಬಗ್ಗೆ ಪಕ್ಷದ ಹಿರಿಯರೊಟ್ಟಿಗೆ ಚರ್ಚಿಸಿ ರಾಜ್ಯ ಸರ್ಕಾರಕ್ಕೆ ರವಾನಿಸುತ್ತೇವೆ ಎಂದು ತಿಳಿಸಿದರು.

ಸಭೆಯಲ್ಲಿ ಸಾಮಾಜಿಕ ಕಾರ್ಯಕರ್ತ ದೇಶಿಹಳ್ಳಿ ರಾಮಚಂದ್ರ, ಸಮಾಜ ಸೇವಕ ಬಿ.ಸಿ. ರಾಮೇಗೌಡ, ಕಾರ್ಮಿಕ ನಿವೃತ್ತ ನೌಕರ ಸಿದ್ರಾಮು, ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಕೆ.ಜಿ.ಕೊಪ್ಪಲು ಶ್ರೀ ಚಾಮುಂಡೇಶ್ವರಿ ದೇವಸ್ಥಾನದ 35ನೇ ವಾರ್ಷಿಕೋತ್ಸವ; ಕುಂಬಾಭಿಷೇಕ

ಮೈಸೂರು, ಫೆ.2(ಎಂಕೆ)– ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿ ಫೆ.4ರಂದು ಶ್ರೀ ಚಾಮುಂಡೇಶ್ವರಿ ದೇವಸ್ಥಾನದ 35ನೇ ವಾರ್ಷಿಕೋತ್ಸವ ಹಾಗೂ ಅಮ್ಮನವರ ಕುಂಬಾಭಿಷೇಕ ನಡೆಯಲಿದೆ.

ಅಂದು ಮಧ್ಯಾಹ್ನ 12.30ಕ್ಕೆ ಮಹಾ ಮಂಗಳಾರತಿ ಹಾಗೂ 1 ಗಂಟೆಗೆ ಅನ್ನ ಸಂತರ್ಪಣೆ ನೆರವೇರಲಿದೆ. ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥನಂದ ಸ್ವಾಮೀಜಿ ವಹಿಸಲಿದ್ದು, ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಎಲ್.ನಾಗೇಂದ್ರ ಮುಡಾ ಮಾಜಿ ಅಧ್ಯಕ್ಷರಾದ ಹೆಚ್.ವಿ.ರಾಜೀವ್, ಸಿ.ಬಸವೇಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ, ವಕೀಲ ಸಿ.ಬಸವರಾಜು, ಕೋಳಿ ಗುತ್ತಿಗೆದಾರ ಸೋಮಣ್ಣ, ಡಿ–ಗ್ರೂಪ್ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿ.ವೆಂಕಟೇಶ್, ವ್ಯಾಪಾರಿ ಗಣೇಶ್ ಪ್ರಭು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಹಾಗೆಯೇ ನಗರಪಾಲಿಕೆ ಮಾಜಿ ಸದಸ್ಯರಾದ ನಿಂಗಣ್ಣ, ಚನ್ನಪ್ಪ, ಕೇಬಲ್ ರಮೇಶ್, ಬಾಲು, ಕೆಂಪಣ್ಣ, ಎಂ.ಶಂಕರ್, ಸಿ.ಬಸವರಾಜು, ಲಕ್ಷ್ಮಿಕಿರಣ್, ಶೋಭ ದೇವಸ್ಥಾನದ ಧರ್ಮದರ್ಶಿ ನಿಂಗಪ್ಪ, ಗೌರವಾಧ್ಯಕ್ಷ ನಿಂಗಣ್ಣ, ದೇವಸ್ಥಾನದ ಜೀರ್ಣೋದ್ಧಾರದ ದಾನಿ ಕೀರ್ತಿಶೇಷರಾದ ಎಂ.ದೇಸಿಗೌಡರ ಕುಟುಂಬಸ್ಥರು ಸೇರಿದಂತೆ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ಅಧ್ಯಕ್ಷ ಗಿರೀಶ್ ಡಿ.ಗೌಡ, ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಕಾರ್ಯದರ್ಶಿ ಮಲ್ಲೇಗೌಡ(ಮಲ್ಲಣ್ಣ), ಖಜಾಂಚಿ ವಿ.ರಾಜಣ್ಣ, ಸಹ ಕಾರ್ಯದರ್ಶಿ ಬಿ.ಲಕ್ಷ್ಮಣ, ಸಮಿತಿ ಸದಸ್ಯರು, ಗ್ರಾಮದ ಯಜಮಾನರು, ಮುಖಂಡರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಬೀಳ್ಕೊಡುಗೆ



ಭಾರತೀಯ ಜೀವ ವಿಮಾ ನಿಗಮ, ಶಾರದಾದೇವಿ ನಗರದ ಶಾಖಾಧಿಕಾರಿ, ಜಿ.ಬಾಲಾಜಿ ಅವರು ವಯೋಸಹಜ ನಿವೃತ್ತಿ ಹೊಂದಿದರು, ಈ ಸಂದರ್ಭದಲ್ಲಿ ಅವರನ್ನು, ಆಡಳಿತಾಧಿಕಾರಿ ವೆಂಕಟೇಶನ್, ಶಾಖೆಯ ವ್ಯವಸ್ಥಾಪಕ ಉಮಾಶಂಕರ್, ನಿವೃತ್ತ ಅಭಿವೃದ್ಧಿ ಅಧಿಕಾರಿ ಬೂಕನಕೆರೆ ವಿಜೇಂದ್ರ ಹಾಗೂ ಶಾಖೆಯ ಸಿಬ್ಬಂದಿ ವರ್ಗದವರು ಅವರನ್ನು ಆತ್ಮೀಯವಾಗಿ ಬೀಳ್ಕೊಟ್ಟರು

ಮೈಸೂರಲ್ಲಿ ಗಮನ ಸೆಳೆದ 'ಚಾಮುಂಡಿ ಚಾಲೆಂಜ್' ಸೈಕಲ್ ರನ್

ನಗದು ಬಹುಮಾನ, ಪದಕ, ಪ್ರಮಾಣ ಪತ್ರ ಪಡೆದ ಸ್ಪರ್ಧಿಗಳು



ಮೈಸೂರು ಜಿಲ್ಲಾ ಅಮೆಚ್ಯೂರ್ ಸ್ಕೈಕ್ಲಿಂಗ್ ವತಿಯಿಂದ ಆಯೋಜಿಸಿದ್ದ 'ಚಾಮುಂಡಿ ಚಾಲೆಂಜ್' ಸೈಕಲ್ ರನ್ ಸ್ಪರ್ಧೆಯ ವಿಜೇತರಿಗೆ ಪದಕ, ಪ್ರಮಾಣ ಪತ್ರ ಹಾಗೂ ನಗದು ಬಹುಮಾನ ನೀಡಿ ಅಭಿನಂದಿಸಲಾಯಿತು.

ಮೈಸೂರು, ಫೆ.2(ಜಿಎ)–ಮೈಸೂರು ಜಿಲ್ಲಾ ಅಮೆಚ್ಯೂರ್ ಸ್ಕೈಕ್ಲಿಂಗ್ ವತಿಯಿಂದ ಆಯೋಜಿಸಿದ್ದ 'ಚಾಮುಂಡಿ ಚಾಲೆಂಜ್' ಸೈಕಲ್ ರನ್ ಸ್ಪರ್ಧೆಯು ಸುಗಮವಾಗಿ ನಡೆದು ಗಮನ ಸೆಳೆಯಿತು. ಸ್ಪರ್ಧೆಯಲ್ಲಿ 85ಕ್ಕೂ ಹೆಚ್ಚು ಸ್ಪರ್ಧಿಗಳು ವಿವಿಧ ವಿಭಾಗಗಳಲ್ಲಿ ಭಾಗವಹಿಸಿ, ನಗದು ಬಹುಮಾನ ಗಳಿಸಿಕೊಂಡರು.

ಉತ್ತನಹಳ್ಳಿಯ ಚಾಮುಂಡಿಬೆಟ್ಟದ ಗೇಟ್‌ನಿಂದ ಆರಂಭವಾದ ಚಾಮುಂಡಿ ಚಾಲೆಂಜ್‌ಗೆ ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಉಪ ಆಯುಕ್ತ ರಮೇಶ್ ನರಸಯ್ಯ ಹಾಗೂ ಗ್ರಂಥಾಲಯ ಇಲಾಖೆಯ ಉಪ ನಿರ್ದೇಶಕ ಬಿ.ಮಂಜುನಾಥ್ ಮುಂಜಾನೆ ಚಾಲನೆ ನೀಡಿದರು.

ನಂತರ ಸ್ಪರ್ಧಿಗಳು 6.8 ಕಿ.ಮೀ ಚಾಮುಂಡಿಬೆಟ್ಟದ ದೇವಿಕೆರೆವರೆಗೂ ಸೈಕಲ್ ತುಳಿದು 9.30ರ ವೇಳೆಗೆ ಎಲ್ಲಾ ವಿಭಾಗದ ಸ್ಪರ್ಧಿಗಳು ಅಂತಿಮ ಘಟ್ಟ ತಲುಪಿ, ಉಪಹಾರ ಸೇವಿಸಿ ನಂತರ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪದಕ, ಪ್ರಮಾಣ ಪತ್ರ ಹಾಗೂ ನಗದು ಬಹುಮಾನ ಪಡೆದರು.ಪ್ರಥಮ 5 ಸಾವಿರ ರೂ, ದ್ವಿತೀಯ 3 ಸಾವಿರ ರೂ., ಹಾಗೂ ತೃತೀಯ 2 ಸಾವಿರ ರೂ. ನೀಡಲಾಯಿತು.

ಸ್ಪರ್ಧೆಯಲ್ಲಿ ಅಮೆಚ್ಯೂರ್ ಪುರುಷ, ಮಾಸ್ಟರ್ ಪುರುಷ, ಮಾಸ್ಟರ್ ಮಹಿಳೆ, ಪುರುಷ ಎಲೈಟ್, ಅಂಡರ್ 18 ಪುರುಷ, ಅನುಭವಿ ಪುರುಷ ಹಾಗೂ ಮಹಿಳಾ ವಿಭಾಗಕ್ಕೆ ಸೈಕಲಿಸ್ಟ್‌ಗಳು ಭಾಗವಹಿಸಿ ತಮ್ಮ ಸಾಮರ್ಥ್ಯ ಮೆರೆದರು. ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಅಮೆಚ್ಯೂರ್ ಸ್ಕೈಕ್ಲಿಂಗ್ ಕಾರ್ಯದರ್ಶಿ ಲೋಕೇಶ್, ಫರೀಯಾಲ್ ಸೇರಿದಂತೆ ಮತ್ತಿತರು ಉಪಸ್ಥಿತರಿದ್ದರು.

ವಿಜೇತರು : ಮಹಿಳಾ ವಿಭಾಗ– ಪ್ರಥಮ ಕೆರನ್ ಮಾರ್ಷಲ್, ದ್ವಿತೀಯ ನಿತೀಲ್ ದಾಸ್, ತೃತೀಯ ಹೆಚ್.ಎನ್. ನಾಗಶ್ರೀ. ಅನುಭವಿ ಪುರುಷ–ಪ್ರಥಮ– ಉಮಾಶಂಕರ್, ದ್ವಿತೀಯ–ಸುರೇಶ್ ಸುಬ್ಬರಾವ್, ತೃತೀಯ–ಧನಂಜಯ್ ದಾಸೇಗೌಡ. ಅಂಡರ್ 14 ಪುರುಷ – ಪ್ರಥಮ–ವಿಜ್ಞೇಶ್ ಗೌಡ, ದ್ವಿತೀಯ– ಶಣೈ ರಾಯ್, ತೃತೀಯ–ಸಮೃದ್ ರಾಜೇಶ್. ಅಂಡರ್ 14 ಮಹಿಳೆ– ಪ್ರಥಮ –ಸುಹಾಸಿನಿ ಗಿರೀಶ್, ದ್ವಿತೀಯ–ಇಮ್ಯಾ ಪ್ರಕಾಶ್ ಅಂಡರ್ 18 ಪುರುಷ– ಪ್ರಥಮ– ವಿಜ್ಞೇಶ್, ದ್ವಿತೀಯ–ಧನುಷ್ ಪ್ರಶಾಂತ್, ತೃತೀಯ–ವಿ.ಪ್ರಾವ್. ಎಲೈಟ್ ಪುರುಷ– ಪ್ರಥಮ–ಚರಿತ್ ಗೌಡ, ದ್ವಿತೀಯ– ಎಸ್.ಧನಂಜಯ್, ತೃತೀಯ–ಕೆವಿ.ವೈಶಾಕ್. ಮಾಸ್ಟರ್ ಮಹಿಳೆ– ಪ್ರಥಮ–ವೀಣಾ ಅಶೋಕ್. ಮಾಸ್ಟರ್ ಪುರುಷ– ಪ್ರಥಮ– ವೀರ ಮಣಿಕಂಠ, ದ್ವಿತೀಯ–ಜೋಸೆಫ್, ನಿಕ್ಸನ್ ತೃತೀಯ–ಜಿ.ಎಸ್.ಸುನಿಲ್ ಕುಮಾರ್. ಅಮ್ಯೆಚೂರ್ ಪುರುಷ– ಪ್ರಥಮ–ಅಬ್ದುಲ್ ಹುಬ್ಬಾರ್, ದ್ವಿತೀಯ–ವಿಶ್ವನಾಥ್ ಮಲೇಲಾ, ತೃತೀಯ–ಎಸ್.ನವೀನ್ ಕುಮಾರ್ ಪದಕ, ಪ್ರಮಾಣ ಪತ್ರ ಹಾಗೂ ನಗದು ಬಹುಮಾನ ತಮ್ಮದಾಗಿಸಿಕೊಂಡರು.

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಸಿ.ಬಸವೇಗೌಡರ ಪುತ್ರ ರವಿಗೌಡರ 'ಐ ಆಮ್ ಗಾಡ್' ಚಿತ್ರದ ಟೈಟಲ್ ಬಿಡುಗಡೆ

ಮೈಸೂರು,ಫೆ.2(ಎಸ್‌ಪಿಎನ್)– ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸಿಬಿಜಿ ಪ್ರೊಡಕ್ಷನ್ ವತಿಯಿಂದ ಏರ್ಪಡಿಸಿದ್ದ ನಟ ರವಿಗೌಡ ಅಭಿನಯ, ನಿರ್ದೇಶನದ 'ಐ ಆಮ್ ಗಾಡ್' ಚಿತ್ರದ ಟೈಟಲ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಐ ಆಮ್ ಗಾಡ್' ಚಿತ್ರದ ನಟನಾಗಿ ಅಭಿನಯಿಸಿರುವ ರವಿಗೌಡನ ತಂದೆ ಸಿ.ಬಸವೇಗೌಡರು, ನಾನು ಸ್ನೇಹಿತರು. ರವಿಗೌಡನ ಬೆಳವಣಿಗೆಯನ್ನು ಬಹಳ ಹತ್ತಿರದಿಂದ ಗಮನಿಸಿದ್ದೇನೆ. ಆತ ಈಗ ಸಿನಿಮಾ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಚಿತ್ರ ನಿರ್ಮಾಣ ಮಾಡಿದ್ದಾನೆ. ಈ ಸಿನಿಮಾ ಈ ಜನರ ಮನ ಗೆಲ್ಲಲಿ ಎಂದು ಆಶಿಸಿದರು.

ಬಸವೇಗೌಡರು ಹೆಚ್ಚು ಮಾತನಾಡುವುದಿಲ್ಲ. ಆದರೆ, ಉತ್ತಮ ಕೆಲಸಗಾರರು. ಅದೇ ವಂಶಾವಳಿ ಹಿನ್ನೆಲೆಯಿಂದ ಬಂದಿರುವ ನಟ ರವಿಗೌಡ, ಸಿನಿಮಾ ಕ್ಷೇತ್ರದಲ್ಲಿ ಯಶಸ್ಸು ಕಾಣಲಿ ಎಂದು ಆಶಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಈ ಸಿನಿಮಾ ಬಿಡುಗಡೆಯಾದ ನಂತರ ಬಂದು ನೋಡುತ್ತೇನೆ ಎಂದು ನಟ ರವಿಗೌಡರಿಗೆ ಭರವಸೆ ನೀಡಿದರು.

ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ನನಗೆ ನಲ್ವತ್ತು ವರ್ಷಗಳ ಪರಿಚಯ. ಅವರು ಉತ್ತಮ ಆಡಳಿತಗಾರರು, ಸಮುದಾಯ ಸ್ನೇಹಿ ಕೂಡ. ನನ್ನ ಮಗ ನಿರ್ದೇಶಿಸಿ, ಅಭಿನಯಿಸಿರುವ 'ಐ ಆಮ್ ಗಾಡ್' ಚಿತ್ರದ ಟೈಟಲ್ ಬಿಡುಗಡೆಗೆ ಆಗಮಿಸಿದ್ದು ಸಂತೋಷವಾಗಿದೆ ಎಂದರು.

ಈ ವೇಳೆ ಸಮಾಜ ಕಲ್ಯಾಣ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್. ಸಿ.ಮಹದೇವಪ್ಪ, ಶಾಸಕ ರವಿಶಂಕರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ನಟ ರವಿಗೌಡ ಅಭಿನಯದ 'ಐ ಆಮ್ ಗಾಡ್' ಚಿತ್ರದ ಟೈಟಲ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಬಿಡುಗಡೆಗೊಳಿಸಿದರು.

ಮೈಕ್ರೋ ಫೈನಾನ್ಸ್ ವಿರುದ್ಧ ವಾಟಾಳ್ ನಾಗರಾಜ್ ವಿಭಿನ್ನ ಪ್ರತಿಭಟನೆ

ಮೈಸೂರು, ಫೆ.2(ಜಿಎ)–ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಮೈಕ್ರೋ ಫೈನಾನ್ಸ್ ವಿರುದ್ಧ ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಒನಕೆ ಹಿಡಿದು ವಿನೂತನ ಪ್ರತಿಭಟನೆ ನಡೆಸಿದರು.

ನಂತರ ಮಾತನಾಡಿದ ಅವರು, ರಾಜ್ಯದಲ್ಲಿ ತಲೆ ಎತ್ತಿರುವ ಅಕ್ರಮ ಫೈನಾನ್ಸ್ ಕಂಪನಿಗಳ ರದ್ದು ಮಾಡಬೇಕು. ಫೈನಾನ್ಸ್ ಕಂಪನಿಗಳ ವಿರುದ್ಧ ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಿ ತನಿಖೆ ನಡೆಸಬೇಕು. ನೆರೆ ರಾಜ್ಯಗಳ ಕಪ್ಪು ಹಣ ತಂದು ರಾಜ್ಯದ ಜನರಿಗೆ ಹಿಂಸೆ ಕೊಡುವ ಫೈನಾನ್ಸ್ ಕಂಪನಿಗಳ ವಿರುದ್ಧ ಕಾನೂನಾತ್ಮಕ ಕ್ರಮ ತೆಗೆದುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸುವುದರೊಂದಿಗೆ ಕರ್ನಾಟಕ ಬಂದ್‌ಗೆ ಕರೆ ನೀಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಜಾರಿ ನಿರ್ದೇಶನಾಲಯದವರಿಗೆ ತಾಕತ್ತಿದ್ದರೆ ಮೈಕ್ರೋ ಫೈನಾನ್ಸ್‌ನ ಮೇಲೆ ದಾಳಿ ಮಾಡಿ. ಮೈಕ್ರೋ ಫೈನಾನ್ಸ್ ಸಾಲ ದೌರ್ಜನ್ಯ ನಿಲ್ಲಿಸಿ. ಯಾರಿಗೂ ಹಿಂಸೆ ಕೊಡಬಾರದು, ಮನೆಗಳಿಗೆ ಬೀಗ ಹಾಕಬಾರದು, ಆತ್ಮಹತ್ಯೆ ಮಾಡಿಕೊಂಡವರಿಗೆ ಒಂದೊಂದು ಕೋಟಿ ರೂ. ಪರಿಹಾರ ಕೊಡಬೇಕು ಎಂದು ಆಗ್ರಹಿಸಿದರು.

ಮೈಕ್ರೋ ಸಾಲದ ಬಡ್ಡಿ ವಸೂಲಿ ಆಗಿರುವ ಬಗ್ಗೆ ಸಮಗ್ರವಾಗಿ ತನಿಖೆ ಆಗಬೇಕು. ಅಸಲಿಗಿಂತ ಬಡ್ಡಿ ವಸೂಲಿ ಜಾಸ್ತಿಯಾಗಿದೆ. ರೌಡಿಗಳ ಮೂಲಕ ಬೆದರಿಕೆ ಹಾಕುವುದು ನಿಲ್ಲಬೇಕು. ಇದುವರೆವಿಗೂ ಮೈಕ್ರೋ ಫೈನಾನ್ಸ್ ಸಾಲದಿಂದ ಆಗಿರುವ ಸಾವು–ನೋವುಗಳ ಬಗ್ಗೆ ಉನ್ನತಮಟ್ಟದ ತನಿಖೆ ಆಗಲೇಬೇಕು ಎಂದು ಒತ್ತಾಯಿಸಿದರು.

ರಾಜ್ಯ ಬಿಜೆಪಿಯಲ್ಲಿ ಭಿನ್ನಾಭಿಪ್ರಾಯ ಕುರಿತು ಪ್ರತಿಕ್ರಿಯಿಸಿ, ರಾಜ್ಯ ಬಿಜೆಪಿಯಲ್ಲಿ ಮನೆಯೊಂದು ಮೂರು ಬಾಗಿಲಲ್ಲ. ನೂರೊಂದು ಬಾಗಿಲಾಗಿದೆ. ಅದರ ಬಗ್ಗೆ ಮಾತಾಡಲಿಕ್ಕೆ ಸಮಯ ಇಲ್ಲ. ಅವರ ಬಗ್ಗೆ ಮಾತಾಡಿದರೆ, ಒಂದು ದಿನ ಸಾಕಾಗಲ್ಲ. ಅದರ ಬಗ್ಗೆ ಇನ್ನೊಂದು ದಿನ ಮಾತಾಡುತ್ತೇನೆ. ಅಲ್ಲಿರುವವರು ಯಾರು ಪ್ರಾಮಾಣಿಕರಲ್ಲ. ಎಲ್ಲ ಲೂಟಿಕೋರರು, ಲೂಟಿ ಹೊಡೆದ ಹಣದಿಂದ ಹೀಗೆ ಆಡುತ್ತಿದ್ದಾರೆ ಎಂದು ಕಿಡಿಕಾರಿದರು.

ಯಾರೂ ಬಾಯಿ ಬಿಡುತ್ತಿಲ್ಲ : ರಾಜ್ಯಕ್ಕೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರಿದೆ. ಮಾನ ಮರ್ಯಾದೆ ಇಲ್ಲ. ಕುಮಾರಸ್ವಾಮಿ ಊರಲ್ಲಿರುವುದಲ್ಲ ಮಾತಾಡ್ತಾರೆ. ಇದರ ಬಗ್ಗೆ ಯಾಕೆ ಮಾತನಾಡಿಲ್ಲ. ಜೋಶಿ ಬಹಳ ಮಡಿವಂತ ಆದರೆ ಬಜೆಟ್ ಬಗ್ಗೆ ಮಾತನಾಡಿಲ್ಲ ಯಾಕೆ. ಶೋಭ ಕರಂದ್ಲಾಜೆ ತುಟಿ ಬಿಚ್ಚಿಲ್ಲ ಯಾಕೆ ಎಂದು ಪ್ರಶ್ನಿಸಿದರು.

ರಾಜ್ಯ ದಿಕ್ಕೆಟ್ಟು ಹೋಗುತ್ತೆ: ಸಿಎಂ ಕುರ್ಚಿ ಬದಲಾವಣೆ ಕುರಿತು ಮಾತನಾಡಿ, ಸಿದ್ದರಾಮಯ್ಯ ನಮ್ಮ ರಾಜ್ಯದಲ್ಲಿ ಇರೋದರಲ್ಲಿ ಒಬ್ಬ ಒಳ್ಳೆಯ ವ್ಯಕ್ತಿ ಇವರೇ ಕೊನೆಯ ಕೊಂಡಿ, ಈ ಕೊಂಡಿ ಕಳಚಿದರೆ ರಾಜ್ಯ ದಿಕ್ಕೆಟ್ಟು ಹೋಗುತ್ತದೆ ಸಿದ್ದರಾಮಯ್ಯ ಅವರನ್ನು ತೆಗೆಯಲು ಜೆಡಿಎಸ್, ಬಿಜೆಪಿ ಮತ್ತು ಕಾಂಗ್ರೆಸ್‌ನ ಕೆಲವರು ಪಿತೂರಿ ಮಾಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ರಾಜೀನಾಮೆ ಕೊಡಬಾರದು ಎಂದು ಒತ್ತಾಯಿಸಿದರು.

ನಾಗರಹಾವು : ರಾಜ್ಯಪಾಲರಿಗೆ ಇರುವ ಈ ಕೆಟ್ಟ ಅಧಿಕಾರ ತೆಗೆಯಬೇಕು. ಇದಕ್ಕೆ ಸಂಬಂಧಿಸಿದಂತೆ ಚರ್ಚೆಗಳು ನಡೆಯಬೇಕು. ಸಿದ್ದರಾಮಯ್ಯ ನೂರಾರು ನಾಗರ ಹಾವುಗಳ ನಡುವೆ ಮಲಗಿದ್ದಾರೆ. ಜೋಪಾನವಾಗಿ ಇರಬೇಕು. ಸಿದ್ದರಾಮಯ್ಯ ಅರೆಸ್ಟ್ ಆದರೂ ರಾಜೀನಾಮೆ ಕೊಡಬೇಕು. ಜೈಲಿನಲ್ಲಿ ಇದ್ದು ಆಡಳಿತ ಮಾಡಿ ಎಂದರು.



ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಮೈಕ್ರೋ ಫೈನಾನ್ಸ್ ವಿರುದ್ಧ ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಒನಕೆ ಹಿಡಿದು ಸಾರ್ವಜನಿಕರೊಟ್ಟಿಗೆ ವಿನೂತನ ಪ್ರತಿಭಟನೆ ನಡೆಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ಮದಗಜರಾಜ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಾರ್ಕೋ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬೇಗೂರು ಕಾಲೋನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಕೋ (ತ)+ ಮಾರ್ಕೋ (ಕ)	1+4 ಪ್ರದರ್ಶನಗಳು
ರಾಜಕಮಲ್	
ದೇವ (ಹಿಂ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ಗಣ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮದಗಜರಾಜ (ತ)	4 ಪ್ರದರ್ಶನಗಳು
ಪ್ರಭಾ	
ರಾಜರಾಣಿ(ತ) + ಅಲ್ಲೇ ಡ್ರಾ ಅಲ್ಲೇ ಬಹುಮಾನ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರಾಯಲ್ (ಕ): ಬೆ.10.15ಕ್ಕೆ, ಮ.1.15ಕ್ಕೆ, ರಾ.7.15ಕ್ಕೆ, ಎಮರ್ಜೆನ್ಸಿ (ಹಿಂ): ಸಂ.4.15ಕ್ಕೆ, ಭೂ ಮಂತರ್ (ಕ): ರಾ.10.10ಕ್ಕೆ.
ಸ್ಕ್ರೀನ್ 2	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.10.35ಕ್ಕೆ, ಕುಟುಂಬಸ್ಥನ್ (ತ): ಮ.1ಕ್ಕೆ, ಸಂಕ್ರಾಂತಿಕಿ ವಸ್ತುನಾಂ (ತೆ): ಸಂ.4.05ಕ್ಕೆ, ಭೂ ಮಂತರ್ (ಕ): ರಾ.7.05ಕ್ಕೆ, ಟ್ವೈಲೈಟ್ ಆಫ್ ದಿ ವಾರಿಯರ್ಸ್ ವಾಲ್ಡ್ ಇನ್ (ಇಂ): ರಾ.10.10ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.10.25ಕ್ಕೆ, ಮಿ. ಹೌಸ್‌ಕೀಪಿಂಗ್ (ತ): ಮ.1.05ಕ್ಕೆ, ರಾಮಾಯಣ ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ (ಹಿಂ): ಸಂ.4.10ಕ್ಕೆ, ರುದ್ರ ಗರುಡ ಪುರಾಣ (ಕ): ರಾ.7.05ಕ್ಕೆ, ಡೊಮಿನಿಕ್ ಆಂಡ್ ದಿ ಲೇಡಿಸ್ ಪರ್ಸ್ (ಮ): ರಾ.10ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.20ಕ್ಕೆ, ಮ್ಯಾಕ್ಸ್ (ಕ): ಮ.1.20ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.


ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಭಿನಂದನೆ



ಮೈಸೂರು ನಗರ ವಕೀಲರ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಸಿ.ಚೆನ್ನನಾಯಕ ಅವರನ್ನು ವಕೀಲರಾದ ಪಡುವಾರಹಳ್ಳಿಯ ಎಂ.ರಾಮಕೃಷ್ಣ, ಮಾರ್ಬಳ್ಳಿ ಕೆ.ಶಂಕರ್‌ನಾಯಕ, ಕಾರ್ತಿಕ್, ಇಂದ್ರೇಶ್ ಅಭಿನಂದಿಸಿದರು

ವೈ.ಡಿ.ರತ್ನಗೆ ಪಿಹೆಚ್.ಡಿ



ಮೈಸೂರು, ಫೆ.2– ಹಾಸನ ಎಂಜಿ ರಸ್ತೆಯಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ವೈ.ಡಿ. ರತ್ನ ಅವರು ಡಾ. ಟಿ.ಪಿ ಶಶಿಕುಮಾರ್ ಅವರ ಮಾರ್ಗದರ್ಶನದಲ್ಲಿ ಸಾದರಪಡಿಸಿದ ಮಹಾಪ್ರಬಂಧವನ್ನು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆ



ಮೈಸೂರಿನ ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸಾಹುಕಾರ್‌ಹುಂಡಿ ಗ್ರಾಮದ ದೊಡ್ಡಕೆರೆಯ ಸುತ್ತ ಮುತ್ತಲಿನ ಪ್ರದೇಶದಲ್ಲಿ ಸ್ವಯಂಪ್ರೇರಿತ ಸ್ವಚ್ಛತಾ ಸಿಬ್ಬಂದಿ ಹಾಗೂ ಬೋಗಾದಿ ಪಟ್ಟಣ ಪಂಚಾಯಿತಿ ಪೌರಕಾರ್ಮಿಕರ ಸಹಯೋಗದೊಂದಿಗೆ ಸ್ವಚ್ಛತಾ ಕಾರ್ಯ ನಡೆಸುವ ಮೂಲಕ ರಾಷ್ಟ್ರೀಯ ಸ್ವಚ್ಛತಾ ದಿನ ಆಚರಿಸಲಾಯಿತು.

ಭಾರತೀಯ ಸಿನಿಮಾಗಳು ಜಾಗತಿಕ ಮಟ್ಟದಲ್ಲಿ ಪ್ರಸಿದ್ಧಿ ಪಡೆಯುತ್ತಿವೆ

ಕೇಂದ್ರ ಸಚಿವ ಎಲ್.ಮುರುಗನ್ ಮೆಚ್ಚುಗೆ

ಮೈಸೂರು, ಫೆ.2(ಎಂಕೆ)– ಭಾರತವು ರಾಮಾಯಣ, ಮಹಾಭಾರತದಂತಹ ವಿಶಿಷ್ಟ ಕಥೆಗಳ ಕೇಂದ್ರವಾಗಿದ್ದು, ಭಾರತೀಯ ಸಿನಿಮಾಗಳು ಜಾಗತಿಕ ಮಟ್ಟದಲ್ಲಿ ಪ್ರಸಿದ್ಧಿ ಪಡೆಯುತ್ತಿವೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ರಾಜ್ಯ ಸಚಿವ ಡಾ.ಎಲ್.ಮುರುಗನ್ ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ನಡೆದ 'ಕಿರುಚಿತ್ರಗಳು ಮತ್ತು ಸಾಕ್ಷ್ಯಚಿತ್ರಗಳ 3ನೇ ಅಂತರರಾಷ್ಟ್ರೀಯ ಉತ್ಸವ(ಪರಿದೃಶ್ಯ)'ದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಾಗತಿಕ ಮಟ್ಟದಲ್ಲಿ ಭಾರತ ಸೃಜನಾತ್ಮಕ ಆರ್ಥಿಕತೆ ಸಾಧಿಸಲು, ಆಡಿಯೋ ವಿಷುವಲ್ ಎಂಟರ್ಟೈನ್ಮೆಂಟ್ ಸಮ್ಮಿಟ್(ಶೃಂಗಸಭೆ) ಘೋಷಣೆ ಮಾಡಲಾಗಿದೆ. ಈ ವರ್ಷ ಸಮ್ಮಿಟ್ ನಡೆಯಲಿದ್ದು, ಎಲ್ಲಾ ಬಗೆಯ ಮಾಧ್ಯಮಗಳ ಬೆಳವಣಿಗೆಗೆ ಪೂರಕವಾಗಲಿದೆ ಎಂದರು.

ದೃಶ್ಯ ಮಾಧ್ಯಮ, ಗೇಮಿಂಗ್ ಮತ್ತು ಸಾಮಾಜಿಕ ಜಾಲತಾಣ ಕ್ಷೇತ್ರಕ್ಕೆ ಶೃಂಗಸಭೆ ಪ್ರೋತ್ಸಾಹದಾಯಕವಾಗಿದ್ದು, ಯಂಗ್ ಫಿಲಂ ಮೇಕರ್ಸ್‌ಗಳನ್ನು ರೂಪಿಸುವುದು ಕೂಡ ಒಂದು ಭಾಗವಾಗಿದೆ. ಗೋವಾದಲ್ಲಿ ನಡೆಯುವ ಅಂತರರಾಷ್ಟ್ರೀಯ ಫಿಲಂ ಫೆಸ್ಟಿವಲ್‌ನಲ್ಲಿ 100 ಯುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲಾಗುವುದು. ಪ್ರಸ್ತುತ ಹಾಲಿವುಡ್ ಸಿನಿಮಾಗಳ ಪೋಸ್ಟ್ ಪ್ರೊಡಕ್ಷನ್ ಕೆಲಸಕ್ಕೆ ಬೆಂಗಳೂರು ಸೇರಿದಂತೆ ದೇಶದ ಹಲವು ನಗರಗಳಲ್ಲಿ ವ್ಯವಸ್ಥೆ ರೂಪಿಸಲಾಗಿದೆ ಎಂದು ತಿಳಿಸಿದರು.

ಏಕಗವಾಕ್ಷಿ ವ್ಯವಸ್ಥೆ: ರಾಷ್ಟ್ರೀಯ ಚಲನಚಿತ್ರ ಅಭಿವೃದ್ಧಿ ನಿಗಮದ ಮೂಲಕ ಸಿನಿಮಾ ಚಿತ್ರೀಕರಣಕ್ಕೆ ಅನುಮತಿ ನೀಡಲು ಏಕಗವಾಕ್ಷಿ ವ್ಯವಸ್ಥೆ ಸ್ಥಾಪಿಸಿದ್ದೇವೆ. ತ್ವರಿತಗತಿಯಲ್ಲಿ ಅನುಮತಿ ನೀಡಲಾಗುತ್ತಿದೆ. ದೇಶದೊಳಗೆ ಚಿತ್ರೀಕರಣಕ್ಕೆ ಸಬ್ಸಿಡಿಯನ್ನೂ ಒದಗಿಸಿದ್ದೇವೆ. ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ವಿಭಾಗದಲ್ಲಿ ರಾಷ್ಟ್ರೀಯ ಸ್ಕೂಲ್ ಆಫ್ ಎಕ್ಸಲೆನ್ಸಿ ಕೇಂದ್ರ ಆರಂಭಿಸಲು ಸರ್ಕಾರ ಮುಂದಾಗಿದ್ದು, ಐಐಟಿ, ಏಮ್ಸ್ ಮಾದರಿಯಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಿದೆ ಎಂದರು.

2022ರಲ್ಲಿ ಪ್ರಾರಂಭವಾದ ಮೈಸೂರು ಸಿನಿಮಾ ಸೊಸೈಟಿಯ 'ಪರಿದೃಶ್ಯ' ಅಂತರರಾಷ್ಟ್ರೀಯ ಕಿರುಚಿತ್ರ ಮತ್ತು ಸಾಕ್ಷ್ಯಚಿತ್ರೋತ್ಸವ ಮೂರೇ ವರ್ಷದಲ್ಲಿ 3000ಕ್ಕೂ ಅಧಿಕ ಚಿತ್ರಗಳನ್ನು ಸ್ವೀಕರಿಸುವ ಮೂಲಕ ಒಂದು ಪ್ರಮುಖ ವೇದಿಕೆಯಾಗಿ ಬೆಳೆದಿದೆ. ಸೊಸೈಟಿಯ ಶ್ರಮಕ್ಕೆ, ಪ್ರಯತ್ನಕ್ಕೆ ಅಭಿನಂದನೆಗಳು ಎಂದು ಶ್ಲಾಘಿಸಿದರು.



'ಕಿರುಚಿತ್ರಗಳು ಮತ್ತು ಸಾಕ್ಷ್ಯಚಿತ್ರಗಳ 3ನೇ ಅಂತರರಾಷ್ಟ್ರೀಯ ಉತ್ಸವ(ಪರಿದೃಶ್ಯ)'ದಲ್ಲಿ ವಿಜೇತರಿಗೆ ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು. (ಎಡದಿಂದ ಕುಳಿತವರು) ಮೈಸೂರು ಸಿನಿಮಾ ಸೊಸೈಟಿ ಕಾರ್ಯದರ್ಶಿ ಪದ್ಮಾವತಿ ಎಸ್.ಭಟ್, ಅಧ್ಯಕ್ಷ ಡಾ.ಚಂದ್ರಶೇಖರ್, ಕೇಂದ್ರ ಸಚಿವ ಡಾ.ಎಲ್.ಮುರುಗನ್, ನಟ ಸುನೀಲ್ ಪುರಾಣಿಕ್ ಉಪಸ್ಥಿತರಿದ್ದರು.

469 ದಶಲಕ್ಷ ಕೋಟಿ ಉದ್ಯಮ...!

ದೆಹಲಿಯಲ್ಲಿ ಆಯೋಜನೆಗೊಂಡಿರುವ ವಿಶ್ವ ಆಡಿಯೋ ವಿಷುವಲ್ ಎಂಟರ್ಟೈನ್ಮೆಂಟ್ ಶೃಂಗಸಭೆಯಲ್ಲಿ ಮನರಂಜನೆ ಕ್ಷೇತ್ರದ ಎಲ್ಲ ಪ್ರಮುಖರು ಭಾಗವಹಿಸಲಿದ್ದು, ದೇಶದ ಯುವ ಜನತೆ ಇದರ ಲಾಭ ಪಡೆಯಬೇಕು. ದೇಶದ ಮನರಂಜನಾ ಕ್ಷೇತ್ರವೂ ಪ್ರತಿ ವರ್ಷ ಶೇ 9.7ರಷ್ಟು ಅಭಿವೃದ್ಧಿ ಹೊಂದುತ್ತಿದ್ದು, ಮನರಂಜನಾ ಕ್ಷೇತ್ರವೂ 2027ರೊಳಗೆ 469 ದಶಲಕ್ಷ ಕೋಟಿ ರೂ.ಗಳ ಉದ್ಯಮವಾಗಿ ಬೆಳೆಯಲಿದೆ.

- ಡಾ.ಎಲ್.ಮುರುಗನ್, ಕೇಂದ್ರ ಸಚಿವ

109 ದೇಶಗಳಿಂದ 3,123 ಕಿರು ಮತ್ತು ಸಾಕ್ಷ್ಯ ಚಿತ್ರ: ಪರಿದೃಶ್ಯ ಚಿತ್ರೋತ್ಸವಕ್ಕೆ ಪ್ರಪಂಚದಾದ್ಯಂತ 109 ದೇಶಗಳಿಂದ 3,123 ಕಿರು ಮತ್ತು ಸಾಕ್ಷ್ಯ ಚಿತ್ರಗಳು ಬಂದಿವೆ. ಆಯ್ಕೆಯಾದ ಕಿರು ಮತ್ತು ಸಾಕ್ಷ್ಯ ಚಿತ್ರಗಳಿಗೆ 26 ವರ್ಗಗಳ ಪ್ರಶಸ್ತಿಗಳನ್ನು ನೀಡಲಾಯಿತು. ಭಾರತದಿಂದ 985, ಇರಾನ್‌ನಿಂದ 413, ಸ್ಪೇನ್‌ನಿಂದ 138, ಫ್ರಾನ್ಸ್ 137, ಬ್ರೆಜಿಲ್ 108, ಚೀನಾ 99, ಇಂಡೋನೇಷಿಯಾ 91, ಟರ್ಕಿ 88, ಯುಎಸ್‌ಎ 82, ಇಟಲಿ 81 ಮುಂತಾದ ದೇಶಗಳಿಂದ 3123 ಸಿನಿಮಾಗಳು ಬಂದಿವೆ. ಕನ್ನಡದ ಒಟ್ಟು 73 ಕಿರುಚಿತ್ರ ಮತ್ತು ಸಾಕ್ಷ್ಯಚಿತ್ರಗಳು ಸೇರಿವೆ. ಖ್ಯಾತ ಉದ್ಯಮಿ ಜಗನ್ನಾಥ ಶೆಣೈ, ನಟ ಸುನೀಲ್ ಪುರಾಣಿಕ್, ಮೈಸೂರು ಸಿನೆಮಾ ಸೊಸೈಟಿ ಅಧ್ಯಕ್ಷ ಡಾ.ಚಂದ್ರಶೇಖರ ಕಾರ್ಯದರ್ಶಿ ಪದ್ಮಾವತಿ ಎಸ್.ಭಟ್ ಉಪಸ್ಥಿತರಿದ್ದರು.

'ಹೃದಯ ಶ್ರೀಮಂತ' ಪುಸ್ತಕ ಬಿಡುಗಡೆ



ಮುಡಾ ಮಾಜಿ ಅಧ್ಯಕ್ಷರೂ ಆದ ಖ್ಯಾತ ಉದ್ಯಮಿ ದಿವಂಗತ ಪಿ.ಗೋವಿಂದ ರಾಜು ಅವರ ಪ್ರಥಮ ಪುಣ್ಯ ಸ್ಮರಣೆ ಕಾರ್ಯಕ್ರಮ ಮೈಸೂರು–ಬನ್ನೂರು ರಸ್ತೆಯಲ್ಲಿರುವ ರಂಗಾಚಾರಿಹುಂಡಿ ತೋಟದಲ್ಲಿ ಭಾನುವಾರ ನಡೆದಿದ್ದು, ಈ ಕಾರ್ಯಕ್ರಮದಲ್ಲಿ ಗೋವಿಂದ ರಾಜು ಅವರು ನಡೆದು ಬಂದ ಹಾದಿಯ ಕುರಿತ 'ಹೃದಯ ಶ್ರೀಮಂತ' ಪುಸ್ತಕವನ್ನು ಗಣ್ಯರು ಬಿಡುಗಡೆ ಮಾಡಿದರು. ಈ ವೇಳೆ ಶಿಕ್ಷಣ ಸಚಿವ ಮಧು ಬಂಗಾರಪ್ಪ, ವಿಧಾನಪರಿಷತ್ ಸದಸ್ಯರಾದ ಬಿ.ಕೆ.ಹರಿಪ್ರಸಾದ್, ಎ.ಹೆಚ್.ವಿಶ್ವನಾಥ್, ಶಾಸಕರಾದ ಶ್ರೀವತ್ಸ, ಅನಿಲ್ ಚಿಕ್ಕಮಾದು, ಮಾಜಿ ಶಾಸಕರಾದ ಸುನೀತಾ ವೀರಪ್ಪಗೌಡ, ಕಳಲೆ ಕೇಶವಮೂರ್ತಿ, ಗೋವಿಂದರಾಜು ಅವರ ಪತ್ನಿ ಶ್ರೀಮತಿ ರತ್ನಮ್ಮ, ಪುತ್ರ ಗುರು ಗೋವಿಂದರಾಜ್, ಉದ್ಯಮಿಗಳಾದ ತಿಮ್ಮೇಗೌಡ, ಪೋತರಾಜು, ಕೊಂಡೇಗೌಡ, ಜಯಕುಮಾರ್, ಗಾಯಿತ್ರಿ ನಾರಾಯಣ, ಗೋವಿಂದರಾಜು ಅವರ ಆಪ್ತರಾದ ಮೈಸೂರು ನಗರ ಕಾಂಗ್ರೆಸ್ ಹಿರಿಯ ಉಪಾಧ್ಯಕ್ಷ ಕೆ.ಸಿ.ರಾಜು ಇನ್ನಿತರರು ಉಪಸ್ಥಿತರಿದ್ದರು.

ಮತ್ತೆ ವಿದ್ಯುತ್ ದರ ಏರಿಕೆಗೆ ಸೆಸ್ಕ್ ಕೆಇಆರ್‌ಸಿಗೆ ಪ್ರಸ್ತಾಪ

ಮೈಸೂರು, ಫೆ 2– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಸೇರಿದಂತೆ ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಎಲ್ಲಾ ವರ್ಗದ ವಿದ್ಯುತ್ ಗ್ರಾಹಕರಿಗೆ ಪ್ರತೀ ಯೂನಿಟ್‌ಗೆ ಒಟ್ಟಾರೆ ಕಡ್ಡಾಯ ಶುಲ್ಕ 30 ಪೈಸೆ, ಯೂನಿಟ್ ಶುಲ್ಕ 38 ಪೈಸೆ ಒಟ್ಟು ಒಂದು ಯುನಿಟ್‌ಗೆ 68 ಪೈಸೆ ಏರಿಕೆಗೆ ಕೆಇಆರ್‌ಸಿಗೆ ಅರ್ಜಿ ಸಲ್ಲಿಸಿವೆ.

LT 1 ಗೃಹ ಬಳಕೆ 2025 ರಿಂದ 26 ಅವಧಿಗೆ ಒಂದು HP ಗೆ 25 ರೂಪಾಯಿ ಕಡ್ಡಾಯ ಶುಲ್ಕ 10 ಪೈಸೆ ಯನಿಟ್‌ಗೆ ಎಲ್‌ಟಿ 5 ಕೈಗಾರಿಕಾ ವಿದ್ಯುತ್ ಗ್ರಾಹಕರಿಗೆ ಕಡ್ಡಾಯ ಶುಲ್ಕ ಅಶ್ವ ಶಕ್ತಿಗೆ 2025 ರಿಂದ 26 ರ ಅವಧಿಗೆ ಒಂದು HPಗೆ 40 ರೂಪಾಯಿ ಮತ್ತು ವಿದ್ಯುತ್ ಬಳಕೆ ಶುಲ್ಕ 10 ಪೈಸೆ ಒಂದು ಯನಿಟ್‌ಗೆ ಏರಿಕೆ ಮಾಡಲು ಮುಂದಾಗಿದೆ.

HT 2 a ವರ್ಗದ ಕೈಗಾರಿಕಾ ಗ್ರಾಹಕರಿಗೆ ಕಡ್ಡಾಯ ಶುಲ್ಕ ಅಶ್ವ ಶಕ್ತಿಗೆ ರೂಪಾಯಿ 75 ಮತ್ತು ಬಳಕೆ ಶುಲ್ಕ ಯೂನಿಟ್‌ಗೆ 15 ಪೈಸೆಯಂತೆ ಹೆಚ್ಚಳಕ್ಕೆ ಸೆಸ್ಕ್ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಅರ್ಜಿ ಸಲ್ಲಿಸಿದೆ.

ಈ ಬಗ್ಗೆ ಎಲ್ಲಾ ವರ್ಗದ ವಿದ್ಯುತ್ ಗ್ರಾಹಕರು ವಿಶೇಷವಾಗಿ ಕೈಗಾರಿಕೆ ಮತ್ತು ವಾಣಿಜ್ಯೋದ್ಯಮ ಗ್ರಾಹಕರು 6 ಪ್ರತಿಗಳಲ್ಲಿ ಕೆಇಆರ್‌ಸಿಗೆ ತಕರಾರು ಅರ್ಜಿ ಸಲ್ಲಿಸುವುದು ಅನಿವಾರ್ಯವಾಗಿದೆ

ತಕರಾರು ಸಲ್ಲಿಕೆಗೆ ಅವಕಾಶ : ಫೆ. 19 ರಂದು ಮೈಸೂರಿನ ಜಿಲ್ಲಾ ಪಂಚಾಯತ್‌ನಲ್ಲಿ ಬೆಳಿಗ್ಗೆ 11 ಗಂಟೆಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಈ ಸಂಬಂಧ ಸಾರ್ವಜನಿಕ ವಿಚಾರಣೆ ನಡೆಸಲಿದ್ದು ಸಾರ್ವಜನಿಕರು ಲಿಖಿತ ಮತ್ತು ಮೌಖಿಕವಾಗಿಯೂ ತಮ್ಮ ತಕರಾರು ವಾದ ಸಲ್ಲಿಸಬಹುದಾಗಿದೆ.

ಜೀವನಪೂರ್ತಿ ಕಳೆದ ಬಿಜೆಪಿ ಗಬ್ಬೆದ್ದು ಹೋಗಿದೆ, ಸಿದ್ಧಾಂತವೇ ಇಲ್ಲದಂತಾಗಿದೆ

ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ವಾಗ್ದಾಳಿ



ವಿಜಯಪುರ, ಫೆ.2– ರಾಜ್ಯದಲ್ಲಿ ನಾನು ಜೀವನ ಪೂರ್ತಿ ಕಳೆದ ಭಾರತೀಯ ಜನತಾ ಪಾರ್ಟಿ (ಬಿಜೆಪಿ) ಕಥೆ ಹಾಳಾಗಿದೆ. ಬಿಜೆಪಿಗೆ ಸಿದ್ಧಾಂತವೇ ಇಲ್ಲ ಎಂಬಂತಾಗಿದೆ. ಹಿಂದುತ್ವ ಎಂದು ಹೇಳುತ್ತಿದ್ದ ಪಕ್ಷ ಹಾಳಾಗಿ ಹೋಗುತ್ತಿದೆ. ಒಂದು ಕುಟುಂಬದ ಕೈಲಿ ಬಿಜೆಪಿ ಸಿಲುಕಿ ನಲುಗುತ್ತಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ವಾಗ್ದಾಳಿ ಮಾಡಿದ್ದಾರೆ.

ವಿಜಯಪುರ ನಗರದಲ್ಲಿ ಭಾನುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯ ರಾಜಕಾರಣ ಗಬ್ಬೆದ್ದು ಹೋಗಿದೆ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಎಲ್ಲಾ ಪಕ್ಷಗಳು ಹಾಳಾಗಿವೆ. ಆಯಾ ಪಕ್ಷಗಳ ಕೇಂದ್ರ ನಾಯಕರು ಏನೂ ಮಾಡುತ್ತಿಲ್ಲ. ನಾನು ಜೀವನ ಪೂರ್ತಿ ಕಳೆದ ಬಿಜೆಪಿ ಕಥೆ ಹಾಳಾಗಿದೆ. ಬಿಜೆಪಿಗೆ ಸಿದ್ಧಾಂತವೇ ಇಲ್ಲ ಎಂಬಂತಾಗಿದೆ. ಹಿಂದುತ್ವ ಎಂದು ಹೇಳುತ್ತಿದ್ದ ಪಕ್ಷ ಹಾಳಾಗಿ ಹೋಗುತ್ತಿದೆ. ಒಂದು ಕುಟುಂಬದ ಕೈಲಿ ಸಿಕ್ಕಿದೆ ಎಂದು ಪರೋಕ್ಷವಾಗಿ ಯಡಿಯೂರಪ್ಪ ಕುಟುಂಬದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಶಿವಮೊಗ್ಗದ ಶಿಕಾರಿಪುರದಲ್ಲಿ ವಿಜಯೇಂದ್ರ ನಮ್ಮ ಭಿಕ್ಷೆಯಿಂದ ಗೆದ್ದಿದ್ದು ಎಂದು ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಅವರು ಹೊಂದಾಣಿಕೆ ರಾಜಕಾರಣ ಮಾಡುತ್ತಿದ್ದಾರೆ. ವಿಜಯೇಂದ್ರ ವಿರುದ್ಧ ಸೂಕ್ತ ಅಭ್ಯರ್ಥಿ ಹಾಕದೇ ಇದ್ದ ಕಾರಣದಿಂದ ಗೆದ್ದಿದ್ದು ಎಂದು ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ವರುಣಾ ವಿಧಾನಸಭಾ ಕ್ಷೇತ್ರದಲ್ಲಿ ನಾನು ಸ್ಪರ್ಧೆ ಮಾಡಿದರೆ ಸಿದ್ದರಾಮಯ್ಯ ಗೆಲ್ಲುತ್ತಿರಲಿಲ್ಲ ಎಂದು ವಿಜಯೇಂದ್ರ ಹೇಳುತ್ತಾರೆ. ಇದೆಲ್ಲಾ ಹೊಂದಾಣಿಕೆ ಅಲ್ಲವೇ? ಎಂದು ಪ್ರಶ್ನೆ ಮಾಡಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿಗಾಗಿ ಕಲಹ ಉಂಟಾಗುತ್ತಿದೆ. ಕಾಂಗ್ರೆಸ್ ಪಕ್ಷವೂ ಸಹ ಇದಕ್ಕೆ ಹೊರತಾಗಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತಿಗೆ ಪಕ್ಷದಲ್ಲಿ ಬೆಲೆಯಿಲ್ಲ. ಖರ್ಗೆ ಮಹಾಕುಂಭ ಮೇಳದ ಬಗ್ಗೆ ಮಾತನಾಡಿದ್ದು ನೋವು ತರಿಸಿದೆ. ಮಲ್ಲಿಕಾರ್ಜುನ ಖರ್ಗೆ ಕುಂಭಮೇಳ ಟೀಕೆ ಮಾಡಿದ್ದಾರೆ. ಸೋನಿಯಾ ಗಾಂಧಿ ಮೆಚ್ಚಿಸೋಕೆ ಮಾತನಾಡಿದ್ದಾರೆ. 144 ವರ್ಷಗಳ ಬಳಿಕ ಬಂದ ಕುಂಭಮೇಳದ ಬಗ್ಗೆ ಮಲ್ಲಿಕಾರ್ಜುನ ಖರ್ಗೆ ಅವಮಾನ ಮಾಡಿದ್ದಾರೆ. ಕುಂಭಮೇಳದಲ್ಲಿ ಸ್ನಾನ ಮಾಡಿದರೆ ಬಡವರ ಹೊಟ್ಟೆ ತುಂಬತ್ತಾ ಎಂದು ಖರ್ಗೆ ಮಾತನಾಡುವ ಮೂಲಕ ಹಿಂದೂಗಳಿಗೆ ಅವಮಾನ ಮಾಡಿದ್ದಾರೆ. ಖರ್ಗೆ ಬಾಯಿಮುಚ್ಚಿ ಎಂದು ತಮ್ಮ ಪಕ್ಷದವರಿಗೆ ಹೇಳುತ್ತಾರೆ. ಆದರೆ ಕುಂಭಮೇಳದ ವಿಚಾರದಲ್ಲಿ ಖರ್ಗೆ ಬಾಯಿ ಮುಚ್ಚಿಕೊಳ್ಳಬೇಕು ಎಂದು ಈಶ್ವರಪ್ಪ ಕಿಡಿಕಾರಿದರು.

ಡಿ.ಕೆ.ಶಿವಕುಮಾರ ಹಾಗೂ ಸಭಾಪತಿ ಯು.ಟಿ.ಖಾದರ್ ಕುಂಭಮೇಳಕ್ಕೆ ಹೋಗಿದ್ದಾರೆ. ಹಾಗಾದರೆ ಅವರನ್ನು ಪಕ್ಷದಿಂದ ಕಿತ್ತು ಹಾಕಿ ಎಂದು ಖರ್ಗೆಗೆ ಸವಾಲು ಹಾಕಿದರು. ಹಸು ಕೆಚ್ಚಲು ಕತ್ತರಿಸಿದಾಗ ಗರ್ಭದ ಹಸು ಕತ್ತರಿಸಿದಾಗ, ಬಾಲ ಕತ್ತರಿಸಿದಾಗ ಖರ್ಗೆ ಅವರು ಮಾತನಾಡಲಿಲ್ಲ. ಈಗ ಕುಂಭಮೇಳದ ಬಗ್ಗೆ ಮಾತನಾಡುತ್ತಾರೆ. ಯಾರು ಹಸು ಕತ್ತರಿಸುತ್ತಾರೋ, ಬಾಲ ಕತ್ತರಿಸುತ್ತಾ ಗರ್ಭದ ಹಸು ಕತ್ತರಿಸುತ್ತಾರೋ ಅವರ ಕೈ ಕತ್ತರಿಸೋ ಕೆಲಸ ಆಗುತ್ತಿದೆ. ಹಿಂದೂ ಯುವಕರು ಈ ಕೆಲಸ ಮಾಡುತ್ತಾರೆಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ತಿಳಿಸಿದರು.

ರಮ್ಮನಹಳ್ಳಿ ಪಪಂನಿಂದ 'ನಮ್ಮ ನಡಿಗೆ ಸ್ವಚ್ಛತೆ ಕಡೆಗೆ' ಅಭಿಯಾನ



ಮೈಸೂರು ತಾಲೂಕು ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ವತಿಯಿಂದ 'ನಮ್ಮ ನಡಿಗೆ ಸ್ವಚ್ಛತೆ ಕಡೆಗೆ' ಅಭಿಯಾನದ ಮೂಲಕ ವಿದ್ಯಾರ್ಥಿಗಳಿಗೆ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಲಾಯಿತು.

ಮೈಸೂರು, ಫೆ.2(ಎಸ್‌ಬಿಡಿ)– ಮೈಸೂರು ತಾಲೂಕು ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ವತಿಯಿಂದ ರಮ್ಮನಹಳ್ಳಿಯ ಸಂತ ಜೋಸೆಫರ ಮಹಿಳಾ ಕಾಲೇಜಿನಲ್ಲಿ 'ನಮ್ಮ ನಡಿಗೆ ಸ್ವಚ್ಛತೆ ಕಡೆಗೆ' ಅಭಿಯಾನವನ್ನು ಆಯೋಜಿಸಲಾಗಿತ್ತು.

ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ರವಿಕೀರ್ತಿ ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಡಾ.ಪೃಥ್ವಿ ಎಸ್. ಶಿರಹಟ್ಟಿ ಅವರು ಇತರ ಗಣ್ಯರೊಡಗೂಡಿ ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಈ ವೇಳೆ ಪಟ್ಟಣ ಪಂಚಾಯ್ತಿ ಕಿರಿಯ ವೈದ್ಯಾಧಿಕಾರಿ ಅಣ್ಣೇಶಿ ಮಾತನಾಡಿ, ಎಲ್ಲರೂ ತಮ್ಮ ಮನೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಸುತ್ತಮುತ್ತಲ ಪರಿಸರದ ಬಗ್ಗೆಯೂ ಕಾಳಜಿ ಹೊಂದುವುದು ಅನಿವಾರ್ಯವಾಗಿದೆ ಪರಿಸರ ಸ್ವಚ್ಛವಾಗಿದ್ದರೆ ಎಲ್ಲರೂ ಆರೋಗ್ಯದಿಂದಿರುತ್ತೇವೆ. ಎಲ್ಲೆಂದರಲ್ಲಿ ಕಸ ಸುರಿಯದೆ ಮನೆ ಮುಂದೆ ಬರುವ ಕಸ ಸಂಗ್ರಹಣೆ ವಾಹನಕ್ಕೆ ಹಾಕಬೇಕು. ಆ ವೇಳೆ ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸುವುದನ್ನು ಮರೆಯಬಾರದು. ಸ್ವಚ್ಛತೆ ನಿರ್ವಹಣೆಯಲ್ಲಿ ವಿದ್ಯಾರ್ಥಿಗಳ ಸಹಕಾರ ಬೇಕಿದೆ. ಸ್ವಚ್ಛತೆ ನಿರ್ವಹಣೆ ಹಾಗೂ ಅದರಿಂದಾಗುವ ಪ್ರಯೋಜನಗಳ ಬಗ್ಗೆ ಮನೆಯ ಸದಸ್ಯರು ಹಾಗೂ ನೆರೆಹೊರೆಯವರಿಗೆ ಮನವರಿಕೆ ಮಾಡಿಕೊಡಬೇಕಿದೆ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಡಾ.ಪೃಥ್ವಿ ಎಸ್.ಶಿರಹಟ್ಟಿ ಮಾತನಾಡಿ, ನಾವು ಪರಿಸರ ಸಂರಕ್ಷಣೆಯ ಜವಾಬ್ದಾರಿಯನ್ನು ಮರೆಯಬಾರದು. ಪರಿಸರವನ್ನು ಅಚ್ಚುಕಟ್ಟಾಗಿ ಕಾಪಾಡಿಕೊಳ್ಳಬೇಕು. ಸ್ವಚ್ಛತೆ ನಿರ್ವಹಣೆ ಸ್ಥಳೀಯ ಸಂಸ್ಥೆಗಳು ಹಾಗೂ ಪೌರಕಾರ್ಮಿಕರ ಜವಾಬ್ದಾರಿ ಎಂದು ಭಾವಿಸದೆ ಎಲ್ಲರೂ ಕೈಜೋಡಿಸಬೇಕು ಎಂದು ಕಿವಿಮಾತು ಹೇಳಿದರು.

ಇದೇ ವೇಳೆ ವಿದ್ಯಾರ್ಥಿನಿಯರು ಕನ್ನಡ ವರ್ಣಮಾಲೆಯ ಅ ಇಂದ ಅಂ ವರೆಗಿನ ಸ್ವರಾಕ್ಷರಗಳನ್ನು ಬಳಸಿ ರಚಿಸಿದ ಸ್ವಚ್ಛತಾ ಜಾಗೃತಿ ಸಂದೇಶಗಳನ್ನು ಪ್ರಸ್ತುತಪಡಿಸಿ, ಸ್ವಚ್ಛತಾ ಪ್ರಮಾಣ ವಚನ ಸ್ವೀಕರಿಸಿದರು. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ಕಾರ್ಯಕ್ರಮಾಧಿಕಾರಿ ನಗ್ಮಾ ಸುಲ್ತಾನ, ಪಟ್ಟಣ ಪಂಚಾಯ್ತಿ ಸಿಬ್ಬಂದಿಗಳಾದ ಚನ್ನನಾಯಕ, ಸೊಹೇಬ್, ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರಾದ ಶೋಭಾ, ಪುಷ್ಪ, ಅವಂತಿ, ಎ.ಎಸ್.ಮಹೇಶ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.